# ಕರ್ನಾಟಕ ವಿಕಾಸ
# Karnataka Vikas

ಜುಲೈ 2018 July 2018



## ಅಭಿವೃದ್ಧಿಯ ಚಿಂತನ ಮಂಥನ...





ದುಡಿಯುವ ಕೈಗಳಿಗೆ ಕೆಲಸ...






ಗದಗದಲ್ಲಿ ನಡೆದ ಗ್ರಾಮೀಣಾಭಿವೃದ್ಧಿ
ಮತ್ತು ಪಂಚಾಯತ್ ರಾಜ್
ವಿಶ್ವವಿದ್ಯಾಲಯದ ರಾಷ್ಟ್ರೀಯ
ಸಮ್ಮೇಳನದ ಒಂದು ನೋಟ.


# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

| | | |
|---|---|---|
| ಜುಲೈ 2018 | ಸಂಪುಟ | : 59 |
| | Volume | : 59 |
| July 2018 | ಸಂಚಿಕೆ | : 8 |
| | Issue | : 8 |


## ಈ ಸಂಚಿಕೆಯೊಳಗೆ


| | | |
|---|---|---|
| ಸಚಿವಾಲಯದಿಂದ ಸಂದೇಶ | – ಡಾ॥ ಎನ್.ನಾಗಾಂಬಿಕಾ ದೇವಿ | 5 |
| ವರದಿ | – ಗಗನ್ ಎ.ಎಸ್. | 6 |
| | – ಡಾ॥ ಸುರೇಶ ನಾಡಗೌಡರ್ | 10 |
| ಲೇಖನ | – ಅರಣ್ಯ ಜೀವಶಾಸ್ತ್ರ ಮತ್ತು ಪರಿಸರ ಇಲಾಖೆ | 13 |
| | – ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ | 16 |
| ವರದಿ | – ಪುಷ್ಪ ಎಂ. | 19 |
| | – ರೆಹಮತಬಾನು ಮ.ಕಿರನೂರ | 22 |
| | – ಸುದರ್ಶನ | 26 |
| ಲೇಖನ | – ಸಂಶೀರ್ | 31 |
| ಯಶೋಗಾಥೆ | – ವಿ.ಎಸ್.ಸಜ್ಜನ್ | 33 |
| ಕವಿಯ(ಕ್ಷ) ಪ್ರಶ್ನೆ | – ಶ್ರೀನಿವಾಸ ವಿ. | 35 |
| ಸುತ್ತೋಲೆ | | 36 |



ಪ್ರಕಾಶಕರು
**ಎಂ.ಕೆ.ಕೆಂಪೇಗೌಡ**
ನಿರ್ದೇಶಕರು(ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ

ಪ್ರಧಾನ ಸಂಪಾದಕರು
**ಡಾ॥ ಬೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿ

ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿ
**ಗಗನ್ ಎ.ಎಸ್.**

ಸಹಾಯಕ ಸಂಪಾದಕರು
**ಆಗ್ನೇಸ್ ಮೇರಿ**


### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ.100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಚೇರಿ ವಿಳಾಸ


ಸಂಪಾದಕರು ಕರ್ನಾಟಕ ವಿಕಾಸ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ.309, 3ನೇ ಮಹಡಿ, ಗೇಟ್ ನಂ.1,
ಬಹುಮಹಡಿಗಳ ಕಟ್ಟಡ, ಡಾ.ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ: 080–22353857
www.rdpr.kar.nic.in
Email: kvrdpr@gmail.com


### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆ ಕುರಿತು ನಿಮ್ಮ ನುಡಿ




**ಮಾನ್ಯರೆ,**

ಮೇ-ಜೂನ್ 2018ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಮುಖಪುಟದಲ್ಲಿ ಕರ್ನಾಟಕ ಸರ್ಕಾರದ ನೂತನ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಇಲಾಖೆಯ ಸಚಿವರ ಭಾವಚಿತ್ರಗಳು ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಇವರುಗಳ ಕಿರು ಪರಿಚಯವನ್ನು ಸಂಕ್ಷಿಪ್ತವಾಗಿ ನೀಡುರುವುದು ತುಂಬಾ ಸಂತೋಷಕರವಾಗಿದೆ. ಸರ್ಕಾರದ ಪ್ರಧಾನ ಕಾಯದರ್ಶಿಯವರ ಸಚಿವಾಲಯದಿಂದ ಸಂದೇಶವು ಕೂಡ ಚೆನ್ನಾಗಿ ಮೂಡಿಬಂದಿರುತ್ತದೆ. ರಾಜ್ಯದ ಎಲ್ಲಾ ಜನತೆಯ ಪರವಾಗಿ ನೂತನ ಸರ್ಕಾರಕ್ಕೆ ಅಭಿನಂದನೆಗಳು.

**– ಶ್ರೀಮತಿ. ಸರೋಜ**
ಎಂ.ಆರ್.22, ಬಿಡಿಎ ರೋಹೌಸ್,
ಬಿಟಿಎಂ 2ನೇ ಹಂತ, ವೈಶ್ಯಬ್ಯಾಂಕ್ ಕಾಲೋನಿ,
ಬೆಂಗಳೂರು 76

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಬಹಳ ಆಕರ್ಷಕವಾಗಿ ಮೂಡಿಬರುತ್ತಿದ್ದು, ಪ್ರಚಲಿತದಲ್ಲಿರುವ ಅನೇಕ ಮಾಸ ಪತ್ರಿಕೆಗಳಲ್ಲಿ ಈ ಪತ್ರಿಕೆಯು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಕುರಿತ ಅನೇಕ ಲೇಖನಗಳನ್ನು ಪ್ರಕಟಿಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದ್ದು, ಈ ಪತ್ರಿಕೆಯಿಂದಾಗಿ ಗ್ರಾಮೀಣ ಭಾಗದ ಜನತೆ ಮತ್ತು ರೈತ ವೃಂದ ಇಬ್ಬರೂ ಸಹ ಪ್ರಯೋಜನ ಪಡೆಯುತ್ತಿರುವುದು ಕಂಡುಬರುತ್ತದೆ. ಈ ಪತ್ರಿಕೆಗಾಗಿ ಶ್ರಮಿಸುತ್ತಿರುವ ಎಲ್ಲಾ ಅಧಿಕಾರಿ/ ಸಿಬ್ಬಂದಿ ವೃಂದಕ್ಕೂ ಕೃತಜ್ಞತೆಗಳನ್ನು ಸಲ್ಲಿಸಬೇಕಾಗುತ್ತದೆ. ಪತ್ರಿಕೆಯು ಇನ್ನು ಮುಂದೆಯೂ ಸಹ ಗ್ರಾಮೀಣ ಭಾಗದ ಎಲ್ಲರಿಗೂ ಮಾರ್ಗದರ್ಶನವಾಗಲಿ ಎಂದು ಹಾರೈಸುತ್ತೇನೆ.

**– ಡಾ|| ಶ್ರೀರಾಮಯ್ಯ**
ಆರ್.ಟಿ.ನಗರ, ಬೆಂಗಳೂರು.

ಕರ್ನಾಟಕ ವಿಕಾಸ ಮಾಸ ಪತ್ರಿಕೆಯ 2018ರ ಮೇ-ಜೂನ್ ಸಂಯುಕ್ತ ಸಂಚಿಕೆಯಲ್ಲಿನ ನೂತನ ಮಂತ್ರಿಗಳ ಬಗ್ಗೆ ಕಿರು ಪರಿಚಯವು ಜನತೆಗೆ ಉತ್ತಮ ಮಾಹಿತಿಯಾಗಿದೆ. ಏಪ್ರಿಲ್ 24 ರ ಪಂಚಾಯತ್ ರಾಜ್ ದಿನಾಚಾರಣೆಯಂದು ರಾಜ್ಯಕ್ಕೆ ಇ-ಪುರಸ್ಕಾರ ದೊರೆತಿರುವುದು ಹೆಮ್ಮೆಯ ವಿಷಯವಾಗಿದೆ. ಈ ಪುರಸ್ಕಾರಕ್ಕಾಗಿ ಶ್ರಮಿಸಿರುವ ಇಲಾಖೆಯ ಎಲ್ಲಾ ಅಧಿಕಾರಿ/ ಸಿಬ್ಬಂದಿಗಳಿಗೆ ಶುಭವಾಗಲಿ. ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿರುವ ಲೇಖನಗಳು, ಯಶೋಗಾಥೆಗಳು, ಸುತ್ತೋಲೆ/ ಸರ್ಕಾರದ ನಡವಳಿಗಳು ಬಹಳ ಉಪಯುಕ್ತವಾಗಿದ್ದು, ಸದರಿ ಪತ್ರಿಕೆಯ ಹಿಂದಿರುವ ಸಂಪಾದಕೀಯ ವೃಂದಕ್ಕೆ ಶುಭ ಹಾರೈಸುತ್ತೇನೆ.

**– ಮೋನುಪ್ರಕಾಶ್**
ವಿವೇಕನಗರ, ಬೆಂಗಳೂರು

# ಸಚಿವಾಲಯದಿಂದ
# ಸಂದೇಶ



**ಡಾ॥ ಎನ್.ನಾಗಾಂಬಿಕಾ ದೇವಿ**
ಭಾ.ಆ.ಸೇ.
**ಸರ್ಕಾರದ ಪ್ರಧಾನ ಕಾರ್ಯದರ್ಶಿ**

ಕರ್ನಾಟಕ ಸರ್ಕಾರ

**ಕರ್ನಾಟಕ ಸರ್ಕಾರ ಸಚಿವಾಲಯ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,**
**ಬಹುಮಹಡಿ ಕಟ್ಟಡ, ಬೆಂಗಳೂರು.**

**ಪ್ರಿಯ ಬಂಧುಗಳೇ,**

ಮಾನ್ಯ ಸಚಿವರು ಅಧಿಕಾರವಹಿಸಿಕೊಂಡ ದಿನದಿಂದ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಪ್ರತಿಯೊಂದು ಯೋಜನೆಗಳ ಸವಿವರ ಮಾಹಿತಿ ಪಡೆದು, ಅವುಗಳ ಸಮರ್ಪಕ ಅನುಷ್ಠಾನಕ್ಕೆ ಇನ್ನಷ್ಟು ಮೌಲ್ಯಗಳನ್ನು ಒಗ್ಗೂಡಿಸಿ ಕ್ರಮಕೈಗೊಳ್ಳಲು ಸೂಚನೆ ನೀಡಿರುತ್ತಾರೆ. ಸಚಿವರ ಈ ಉತ್ಸಾಹಕ್ಕೆ ಕುಗ್ಗು ತರದೆ ಅವರ ಮಾರ್ಗದರ್ಶನದಲ್ಲಿ ಇಲಾಖೆಯ ಮುಂದುವರೆದ ಯೋಜನೆಗಳ ಜೊತೆಗೆ ಹೊಸ ಯೋಜನೆಗಳನ್ನು ಸಮಗ್ರ ಕರ್ನಾಟಕದ 3.75 ಕೋಟಿ ಗ್ರಾಮೀಣ ಜನರ ಶ್ರೇಯೋಭಿವೃದ್ಧಿಗಾಗಿ ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಿಸಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಕಟ್ಟಕಡೆಯ ವ್ಯಕ್ತಿಗೆ ಯೋಜನೆ ಫಲಶೃತಿ ದೊರಕಿಸಿ ಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗುತ್ತದೆ. ಇಲಾಖೆಯ ಎಲ್ಲಾ ಹಿರಿಯ ಅಧಿಕಾರಿಗಳು ಹಾಗೂ ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಕೂಡಲೇ ಕಾರ್ಯೋನ್ಮುಖರಾಗಿ ಬದ್ಧತೆಯಿಂದ ಕಾರ್ಯನಿರ್ವಹಿಸಲು ಕರೆ ಕೊಡುತ್ತೇನೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಬೃಹತ್ ಇಲಾಖೆಯಾಗಿದ್ದು, ಇತರೆ ಎಲ್ಲಾ ಅಭಿವೃದ್ಧಿ ಇಲಾಖೆಗಳ ಯೋಜನೆಗಳ ಸಮರ್ಪಕ ಅನುಷ್ಠಾನ ಪಂಚಾಯತ್ ರಾಜ್ ಸಂಸ್ಥೆಗಳ ಪ್ರಮುಖ ಜವಾಬ್ದಾರಿಯಾಗಿದ್ದು, ಇದನ್ನು ನಿಭಾಯಿಸುವಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪಾತ್ರ ಬಹು ಪ್ರಾಮುಖ್ಯವುಳ್ಳದಾಗಿದ್ದು, ಇಂತಹ ಗುರುತರ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ/ ಉಸ್ತುವಾರಿ ಮಾಡುವ ಸದಾವಕಾಶ ದೇವರು ಕರುಣಿಸಿರುವುದನ್ನು ಗರಿಷ್ಠವಾಗಿ ಸದುಪಯೋಗಪಡಿಸಿಕೊಂಡು ಯೋಜನೆಗಳ ಅನುಷ್ಠಾನ ತೀವ್ರಗೊಳಿಸಿ ಫಲಪ್ರದಗೊಳಿಸುವುದು, ಈ ನಿಟ್ಟಿನಲ್ಲಿ ಎಲ್ಲಾ ಅಧಿಕಾರಿ ಸಿಬ್ಬಂದಿ ವರ್ಗದವರು ಪಾರದರ್ಶಕ ಆಡಳಿತದೊಂದಿಗೆ ಮತ್ತಷ್ಟು ಕ್ರಿಯಾಶೀಲತೆ ಹಾಗೂ ವಿವೇಚನೆಯಿಂದ ಕಾರ್ಯನಿರ್ವಹಿಸಲು ಕರೆ ನೀಡಿರುವ ಸಚಿವರ ಆಶಯದಂತೆ ತಾವೆಲ್ಲರೂ ಕಾರ್ಯನಿರ್ವಹಿಸುತ್ತೀರೆಂದು ಆಶಿಸುತ್ತೇನೆ.

ದಿನಾಂಕ 17 ಆಗಸ್ಟ್ 2018 ರಂದು ರಾಷ್ಟ್ರೀಯ ಜಂತುಹುಳು ನಿವಾರಣ ದಿನದಂದು 1–19 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಜಂತುಹುಳು ನಾಶಕ ಮಾತ್ರೆಯನ್ನು ಶಾಲೆಗಳು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ 10 ಆಗಸ್ಟ್ 2018 ರಂದು ಆರೋಗ್ಯ ಇಲಾಖೆವತಿಯಿಂದ ಉಚಿತವಾಗಿ ನೀಡಲಾಗುತ್ತಿದ್ದು, ಇದರ ಪ್ರಾಮಾಣಿಕ ಅನುಷ್ಠಾನ/ ಉಸ್ತುವಾರಿ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ ಹಾಗೂ ಈ ಕಾರ್ಯಕ್ರಮವು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

**(ಡಾ॥ ಎನ್. ನಾಗಾಂಬಿಕಾ ದೇವಿ)**

ವರದಿ

ಗಗನ್ ಎ.ಎಸ್.

ಸಂಪಾದಕರು,
ಕರ್ನಾಟಕ ವಿಕಾಸ, ಬೆಂಗಳೂರು

# ಸಚಿವರಿಂದ ಪ್ರಗತಿ ಪರಿಶೀಲನೆ

**ಗ್ರಾಮೀಣ ಭಾಗದ ಎಲ್ಲಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸುವ ಜವಾಬ್ಧಾರಿಯು ಮೂಲತಃ ಪಂಚಾಯತ್ ರಾಜ್ ಸಂಸ್ಥೆಯದ್ದಾಗಿದ್ದು ಹಾಗೂ ಪೂರಕವಾಗಿ ಇತರೆ ಅಭಿವೃದ್ಧಿ ಇಲಾಖೆಗಳ ಅನುಷ್ಟಾನಾಧಿಕಾರಿಗಳ ಹೊಣೆಗಾರಿಕೆ ಯಾಗಿರುತ್ತದೆ.**

ಭಾರತದೇಶದ ವಿಮೋಚನೆ, ಹಳ್ಳಿಗಳ ಪುನರುಜ್ಜೀವನದಿಂದ ಸಂಭವ ಹಾಗೂ ಭಾರತೀಯ ಸಂಸ್ಕೃತಿ ಮತ್ತು ತತ್ವಗಳಲ್ಲಿ ಆಳವಾಗಿ ಬೇರೂರಿರುವ ಪ್ರಜಾಸತ್ತಾತ್ಮಕ ವಿಕೇಂದ್ರಿಕರಣದ ಮೂಲಕ ಈ ಕಾರ್ಯ ನೆರವೇರುವುದೆಂದು ಗಾಂಧೀಜಿಯವರು ಮನಗಂಡಿದ್ದರು ಹಾಗೂ ಈ ಉದ್ದೇಶ ಈಡೇರಿಸಲು ಭಾರತ ಸರ್ಕಾರ ಸಂವಿಧಾನದ 73ನೇ ತಿದ್ದುಪಡಿಯಡಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಾಂವಿಧಾನಿಕ ಸ್ಥಾನ ನೀಡಿ ಸ್ಥಳೀಯ ಆಡಳಿತಕ್ಕೆ ಅವಕಾಶ ನೀಡಿ ಜವಾಬ್ದಾರಿ ವಹಿಸಿತು.

ಗ್ರಾಮೀಣ ಜನತೆಯ ಬಡತನ ನಿರ್ಮೂಲನೆ, ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಿಂದ ಮಾತ್ರ ಸಾಧ್ಯ ಮತ್ತು ಗ್ರಾಮೀಣ ಜನತೆಯ ಜೀವನಮಟ್ಟ ಸುಧಾರಣೆ ಸುಸ್ಥಿರ ಹಾಗೂ ವಿಸ್ತಾರವಾದ ಅಭಿವೃದ್ಧಿಯಿಂದ ಸಂಭವಿಸುತ್ತದೆ ಮತ್ತು ಈ ಮೂಲಕ ಸ್ವಾತಂತ್ರ್ಯದ ಮೂಲ ಉದ್ದೇಶ ಈಡೇರುವುದೆಂದು ಮಹಾತ್ಮಗಾಂಧೀಜಿಯವರ ಅಭಿಪ್ರಾಯವಾಗಿತ್ತು.

ಗ್ರಾಮೀಣ ಭಾಗದ ಎಲ್ಲಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸುವ ಜವಾಬ್ಧಾರಿಯು ಮೂಲತಃ ಪಂಚಾಯತ್ ರಾಜ್ ಸಂಸ್ಥೆಯದ್ದಾಗಿದ್ದು ಹಾಗೂ ಪೂರಕವಾಗಿ ಇತರೆ ಅಭಿವೃದ್ಧಿ ಇಲಾಖೆಗಳ ಅನುಷ್ಟಾನಾಧಿಕಾರಿಗಳ ಹೊಣೆಗಾರಿಕೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ದಿನಾಂಕ:23.06.2018 ರಂದು ಇಲಾಖೆಯ ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಎಲ್ಲಾ ಹಿರಿಯ ಅಧಿಕಾರಿಗಳ ಹಾಗೂ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪ್ರಗತಿ ಪರಿಶೀಲನ ಸಭೆ ಪ್ರಾಮುಖ್ಯತೆ ಪಡೆಯಿತು.

ನಿರ್ದೇಶಕರು, ಗ್ರಾಮ ವಿಕಾಸ ರವರು ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಸಚಿವರಿಗೆ ಇಲಾಖಾ ಪರವಾಗಿ ಹೃತ್ಪೂರ್ವಕ ಸ್ವಾಗತವನ್ನು ಕೋರಿ, ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಸಭೆಯನ್ನು ಉದ್ದೇಶಿಸಿ ಪ್ರಾಸ್ತವಿಕ ನುಡಿಗಳನ್ನಾಡಲು ಕೋರಿದಂತೆ, ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಸಭೆಯನ್ನುದ್ದೇಶಿಸಿ ಮಾನ್ಯ ಸಚಿವರು ಅಧಿಕಾರವಹಿಸಿಕೊಂಡ ದಿನದಿಂದ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಪ್ರತಿಯೊಂದು ಯೋಜನೆಗಳ ಸವಿವರ ಮಾಹಿತಿ ಪಡೆದು, ಅವುಗಳ ಸಮರ್ಪಕ ಅನುಷ್ಠಾನಕ್ಕೆ ಇನ್ನಷ್ಟು ಮೌಲ್ಯಗಳನ್ನು ಒಗ್ಗೂಡಿಸಿ ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದು,

## ಅಭಿನಂದನೆ



**ಶ್ರೀ ತ.ಮ. ವಿಜಯಭಾಸ್ಕರ್** (ಭಾ.ಆ.ಸೇ.)

**ಸನ್ಮಾನ್ಯರು ನೂತನ ಮುಖ್ಯಕಾರ್ಯದರ್ಶಿಗಳಾಗಿ ನೇಮಕಗೊಂಡು ಕರ್ತವ್ಯ ನಿರ್ವಹಿಸುತ್ತಿರುವ ಈ ಸುಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅಭಿನಂದಿಸುತ್ತದೆ.**



ಇಲಾಖೆಯ ಮುಂದುವರೆದ ಯೋಜನೆಗಳ ಜೊತೆಗೆ ಹೊಸ ಯೋಜನೆಗಳನ್ನು ಸಮಗ್ರ ಕರ್ನಾಟಕದ 3.75 ಕೋಟಿ ಗ್ರಾಮೀಣ ಜನರ ಶ್ರೇಯೋಭಿವೃದ್ಧಿಗಾಗಿ ಹೊಸ ಆಯವ್ಯಯದಲ್ಲಿ ಘೋಷಿಸಲು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಸಚಿವರು ಆಯವ್ಯಯ ಚರ್ಚೆಯಲ್ಲಿ ಮನವಿಸಿರುವ ಬಗ್ಗೆ, ಸಭೆಯಲ್ಲಿ ಪ್ರಸ್ತಾಪಿಸಿ, ಸಚಿವರ ಈ ಉತ್ಸಾಹಕ್ಕೆ ಕುಗ್ಗ ತರದೆ ಅವರ ಮಾಗದರ್ಶನದಲ್ಲಿ ಇಲಾಖಾ ಕಾರ್ಯಕ್ರಮಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಿಸಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಕಟ್ಟ ಕಡೆಯ ವ್ಯಕ್ತಿಗೆ ಯೋಜನೆಯ ಫಲಶೃತಿ ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಲು ಹಾಗೂ ಈ ದಿಸೆಯಲ್ಲಿ ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಇಲಾಖೆಯ ಎಲ್ಲಾ ಹಿರಿಯ ಅಧಿಕಾರಿಗಳು ಕಾರ್ಯೋನ್ಮುಖರಾಗಿ ಬದ್ಧತೆಯಿಂದ ಕಾರ್ಯನಿರ್ವಹಿಸಲು ಸೂಚನೆ ನೀಡಿದರು.

ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಸಭೆಯನ್ನುದ್ದೇಶಿಸಿ ಮಾತನಾಡಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಬೃಹತ್ ಇಲಾಖೆಯಾಗಿದ್ದು, ಎಲ್ಲಾ ಇಲಾಖೆಗಳ ಯೋಜನೆಗಳ ಸಮರ್ಪಕ ಅನುಷ್ಠಾನ ಪಂಚಾಯತ್ ರಾಜ್ ಸಂಸ್ಥೆಗಳ ಪ್ರಮುಖ ಜವಾಬ್ದಾರಿಯಾಗಿದ್ದು, ಇದನ್ನು ನಿಭಾಯಿಸುವಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪಾತ್ರ ಬಹು ಪ್ರಾಮುಖ್ಯವುಳ್ಳದಾಗಿದ್ದು, ಇಂತಹ ಗುರುತರ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ/ ಉಸ್ತುವಾರಿ ಮಾಡುವ ಸದಾವಕಾಶ ದೇವರು ಕರುಣಿಸಿರುವುದನ್ನು ಗರಿಷ್ಠವಾಗಿ ಸದುಪಯೋಗಪಡಿಸಿಕೊಂಡು ಯೋಜನೆಗಳ ಅನುಷ್ಠಾನ ತೀವ್ರಗೊಳಿಸಿ ಫಲಪ್ರದಗೊಳಿಸಲು ಕರೆ ನೀಡಿದರು. ಇಲಾಖೆ ಅನುಷ್ಠಾನಗೊಳಿಸುತ್ತಿರುವ ಪ್ರತಿಯೊಂದು ಯೋಜನೆಗಳ ಕೂಲಂಕಷ ಪರಿಶೀಲನೆ ನಡೆಸಿ ಸಭೆಯು ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಕಾರ್ಯತಂತ್ರ ರೂಪಿಸಿತು.

## ಮಹಾತ್ಮ ಗಾಂದಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಂ.ಜಿ.ಎನ್.ಆರ್.ಇ.ಜಿ.ಎ):

ಜೀವನೋಪಾಯಕ್ಕಾಗಿ ಗ್ರಾಮೀಣ ಜನರು ಕೂಲಿ ಅರಸಿ ನಗರದತ್ತ ವಲಸೆ ಹೋಗುತ್ತಿರುವುದನ್ನು ತಡೆಗಟ್ಟಲು ಅವರುಗಳಿಗೆ ಸ್ಥಳೀಯವಾಗಿ ಉದ್ಯೋಗ ನೀಡಬೇಕಿದೆ. ಕೃಷಿ ಚಟುವಟಿಕೆಯೊಂದಿಗೆ ಸಿಗುತ್ತಿರುವ ಅರೆ ಉದ್ಯೋಗ ಮತ್ತು ಉದ್ಯೋಗದಲ್ಲಿ ಲಿಂಗ ತಾರತಮ್ಯದಿಂದ ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗ ಸಮಸ್ಯೆ ಉಲ್ಬಣವಾಗುತ್ತಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪರಿಣಾಮಕಾರಿ ಅನುಷ್ಠಾನದಿಂದ ಸ್ಥಳೀಯವಾಗಿ ಉದ್ಯೋಗ ಲಭ್ಯವಾಗುವುದು ಹಾಗೂ ಸಮಾನ ಕೂಲಿ, ಗ್ರಾಮೀಣ ಪ್ರದೇಶದಲ್ಲಿ ಲಭ್ಯವಾದಲ್ಲಿ ನಿರುದ್ಯೋಗ ಸಮಸ್ಯೆ ನಿವಾರಿಸಿ ಕುಟುಂಬದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಕಾಣಲು ಸಾಧ್ಯ ಹಾಗೂ ಈ ಯೋಜನೆಯ ಅನುಷ್ಠಾನ ಪಂಚಾಯತ್ ರಾಜ್‌ನ ಮೂರು ಹಂತದ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ ಎಂದು ಸಚಿವರು ಸಭೆಗೆ ತಿಳಿಸಿದರು.

ಈ ಯೋಜನೆಯಡಿ ಕೈಗೊಳ್ಳುವ ಚಟುವಟಿಕೆಗಳು ಇತರೆ ಇಲಾಖೆ ಚಟುವಟಿಕೆಗಳೊಂದಿಗೆ ಒಗ್ಗೂಡಿಸಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ, ಸದರಿ ಯೋಜನೆಯಡಿ ಸಾಧಿಸುವ ಪ್ರಗತಿ ಇತರೆ ಇಲಾಖೆಗಳೊಂದಿಗೆ ಸಮನ್ವಯ ಮತ್ತು ಸಹಕಾರವನ್ನಾಧರಿಸಿರುವುದರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಇತರೆ ಇಲಾಖಾ ಅಧಿಕಾರಿಗಳ ರಾಜ್ಯ ಮಟ್ಟದಲ್ಲಿ ಸಭೆಯನ್ನು ನಿಯಮಿತವಾಗಿ ನಡೆಸಿ ಪ್ರಗತಿಯನ್ನು ಸಾಧಿಸಲು ನಿರ್ಧರಿಸಲಾಯಿತು. ಪ್ರಸ್ತುತ ಸಾಲಿನಲ್ಲಿ 10 ಕೋಟಿ ಮಾನವ ದಿನ ಸೃಜನೆ ಗುರಿ ಹೊಂದಿದ್ದು, ರಾಜ್ಯಾದ್ಯಂತ ಉತ್ತಮ ಮಳೆಯಾಗಿರುವುದರಿಂದ ವೈಯಕ್ತಿಕ ಜಮೀನು ಅಭಿವೃದ್ಧಿ, ಕುರಿ ದನದ ದೊಡ್ಡಿ ನಿರ್ಮಾಣ, ಶಾಲಾ ಕಾಂಪೌಂಡ್, ರೈತರ ಕಣ, ಆಟದ ಮೈದಾನ, ಸ್ಮಶಾನ ಅಭಿವೃದ್ಧಿ ಇವೇ ಮುಂತಾದ ಕಾರ್ಯಕ್ರಮಗಳನ್ನು ಕೈಗೊಂಡು, 10 ಕೋಟಿ ಮಾನವ ದಿನ ಸೃಜನೆ ಗುರಿ ಮೀರಿ ಸಾಧಿಸಲು ಅಗತ್ಯ ಎಲ್ಲಾ ಮುಂಜಾಗರೂಕತಾ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

ಸದರಿ ಯೋಜನೆಯಡಿ ಪ್ರವಾಸೋದ್ಯಮ ಅಭಿವೃದ್ಧಿ ಚಟುವಟಿಕೆ ಕೈಗೆತ್ತಿಕೊಳ್ಳಲು ವಿಫುಲ ಅವಕಾಶವಿರುವ ಜಿಲ್ಲೆಗಳು ಅವುಗಳ ಸದ್ಬಳಕೆಗೆ ಕ್ರಮ, ಎಲ್ಲಾ ಶಾಲಾ–ಕಾಲೇಜು, ಅಂಗನವಾಡಿ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿರುವ ಜಾಗದಲ್ಲಿ ಪೌಷ್ಠಿಕತೆವುಳ್ಳ ಹಣ್ಣು ಹಂಪಲುಗಳನ್ನು ಕೈ ತೋಟದಲ್ಲಿ ಬೆಳೆಸಲು ಅಗತ್ಯ ಕ್ರಮ, ಶಾಲಾ ಕಾಂಪೌಂಡ್ ನಿರ್ಮಾಣ ಹಾಗೂ ಕೆರೆ ಒತ್ತುವರಿ ತಡೆ ಹಿಡಿಯಲು ಹಾಗೂ ಸಂರಕ್ಷಿಸಲು ಕೆರೆ ವಿಸ್ತೀರ್ಣದ ಸುತ್ತ ಟ್ರೆನ್‌ಚಿಂಗ್ ಮಾಡುವುದು, ಸಸಿಗಳನ್ನು ನೆಡುವ ಕಾರ್ಯ ಮುಂತಾದ ಚಟುವಟಿಕೆಗಳನ್ನು ಕೈಗೊಳ್ಳಲು ತೀರ್ಮಾನಿಸಲಾಯಿತು. ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ವಿವಿಧ ಯೋಜನೆಗಳಡಿ ರಸ್ತೆ ನಿರ್ಮಾಣ ಕೈಗೊಳ್ಳುವಾಗ ರಸ್ತೆ ಬದಿಗಳಲ್ಲಿ ಸಂಪೂರ್ಣವಾಗಿ ಕಾಂಕ್ರಿಟ್ ಹಾಕುವ ಬದಲಾಗಿ ಮಧ್ಯ ಮಧ್ಯ ಗಿಡ ನೆಡಲು ಅವಕಾಶ ಕಲ್ಪಿಸಿ ರಸ್ತೆ ಚರಂಡಿ ನಿರ್ಮಾಣ ಮಾಡಲು ನಿರ್ಧರಿಸಲಾಯಿತು.

ನದಿಗಳ ಪುನ:ಶ್ಚೇತನ, ಕೆರೆಗಳ ಅಭಿವೃದ್ಧಿ ಮತ್ತು ದನದ ಕೊಟ್ಟಿಗೆ ನಿರ್ಮಾಣಕ್ಕೆ ಪ್ರಾಮುಖ್ಯತೆ ನೀಡಲು ತಿಳಿಸುತ್ತಾ ಯೋಜನೆಯ ಪ್ರತಿಯೊಂದು ಅಂಶದಡಿ ಕೂಲಂಕಷ ಚರ್ಚೆ ನಡೆಸಿದ ನಂತರ, ವಿಫುಲ ಅವಕಾಶವಿದ್ದರೂ ಸದರಿ ಯೋಜನೆಯಡಿ ನಿರೀಕ್ಷಿತ ಮಟ್ಟದಲ್ಲಿ ಸಾಧನೆಯಾಗದಿರುವುದನ್ನು ಸಭೆಯು ಮನಗೊಂಡು, ಪ್ರಸ್ತುತ ಸಾಲಿನಲ್ಲಿ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆ ಸಹ ತುಂಬಿರುವುದರಿಂದ ಗರಿಷ್ಠ ಪ್ರಗತಿ ಸಾಧಿಸಿ ರಾಜ್ಯದ ಹಿರಿಮೆಯನ್ನು ರಾಷ್ಟ್ರಮಟ್ಟಕ್ಕೆ ಕೊಂಡೊಯ್ಯಲು ಪ್ರಾಮಾಣಿಕ ಪ್ರಯತ್ನ ಮಾಡಲು ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದರು.

## ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು:

ರಾಜ್ಯದಲ್ಲಿ ಕಾರ್ಯಾಚರಣೆಗೊಂಡಿರುವ ಶುದ್ಧ ಕುಡಿಯುವ ನೀರು ಘಟಕಗಳಲ್ಲಿ ಕಾರ್ಯಾಚರಣೆಯಾಗದೆ ದುಸ್ಥಿತಿಯಲ್ಲಿರುವುದನ್ನು ಜಿಲ್ಲಾ ಮಟ್ಟದ ಕುಡಿಯುವ ನೀರು ಸರಬರಾಜು, ಕಾರ್ಯಪಾಲಕ ಅಭಿಯಂತರುಗಳ ನೇತೃತ್ವದಲ್ಲಿ ತಂಡ ರಚಿಸಿಕೊಂಡು ತಂಡವು ಪ್ರತಿಯೊಂದು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಶುದ್ಧ ಕುಡಿಯುವ ನೀರು ಘಟಕಗಳಿಗೆ ಭೇಟಿ ನೀಡಿ ತಪಾಸಣೆ ನಡೆಸುವುದು ಹಾಗೂ ದುಸ್ಥಿತಿಯಲ್ಲಿರುವ ಎಲ್ಲಾ ಘಟಕಗಳನ್ನು ಸುಸ್ಥಿತಿಗೊಳಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತುರ್ತು ಕ್ರಮ ಕೈಗೊಂಡು ಅವುಗಳ ನಿರ್ವಹಣೆಗೆ ಕ್ರಮ ವಹಿಸುವುದು.

ಸದೃಢ ಗ್ರಾಮ ಪಂಚಾಯತಿಗಳು, ನಿರ್ವಹಣೆ ಜವಾಬ್ದಾರಿ ವಹಿಸಿಕೊಳ್ಳಲು ಆಸಕ್ತಿಯಿದ್ದಲ್ಲಿ ಘಟಕಗಳನ್ನು ಗ್ರಾಮ ಪಂಚಾಯತಿಗಳಿಗೆ ಹಸ್ತಾಂತರಿಸುವುದು ಮತ್ತು ಘಟಕಗಳ ನಿರ್ವಹಣೆಗೆ Self Sustaining Mechanismಗೆ ಅಗತ್ಯವಿರುವ ಎಲ್ಲಾ ಕ್ರಮ ಕೈಗೊಳ್ಳುವುದು. ಟೆಂಡರ್ ಕರೆಯುವ ಹಂತದಲ್ಲಿಯೇ Complaint Monitoring System ಅಳವಡಿಸಿ Compliance ಪಡೆಯುವ ಪದ್ಧತಿ ಅಳವಡಿಸಲು ಕ್ರಮ ವಹಿಸುವುದು ಮತ್ತು ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು, ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ತಿ ಕಾರ್ಯ ಕೈಗೊಂಡು ಮಾಧ್ಯಮಗಳಲ್ಲಿ ಪ್ರಚಾರ ನೀಡಲು ಸಭೆಯಲ್ಲಿ ಸೂಚಿಸಲಾಯಿತು.

## ಸ್ವಚ್ಚ ಭಾರತ್ ಅಭಿಯಾನ (SBM)

ರಾಜ್ಯದಲ್ಲಿ 20 ಜಿಲ್ಲೆಗಳು ಬಯಲು ಬಹಿರ್ದೆಸೆ ಮುಕ್ತವಾಗಿದ್ದು, ಇನ್ನುಳಿದ ಜಿಲ್ಲೆಗಳ ಸಂಬಂಧಪಟ್ಟ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಭಾರತ ಸರ್ಕಾರ ನಿಗಧಿಪಡಿಸಿದ ದಿನಾಂಕದೊಳಗೆ ODF ಮಾಡಲು ಅಗತ್ಯ ಕ್ರಮ ಕೈಗೊಂಡು, ಸರ್ಕಾರಕ್ಕೆ ವರದಿ ಸಲ್ಲಿಸಲು ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು. ಬೀದರ್, ಬಳ್ಳಾರಿ, ಗುಲ್ಬರ್ಗಾ, ರಾಯಚೂರು ಜಿಲ್ಲಾ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ವೈಯಕ್ತಿಕ ಗಮನ ಹರಿಸಿ ಆದ್ಯತೆ ಮೇಲೆ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಲಾಯಿತು.

## NRDWP

ಬರಗಾಲ ಸಮಯದಲ್ಲಿ ಟಾಸ್ಕ್ ಫೋರ್ಸ್ ಅನುದಾನ



ಮೀರಿ ಕೊರೆಯಿಸಿರುವ ಬೋರ್‌ವೆಲ್‌ಗಳಿದ್ದಲ್ಲಿ, ಅವುಗಳನ್ನು 2018–19 ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಅಳವಡಿಸಿ ಕ್ರಮ ವಹಿಸಲು ಮತ್ತು 2018–19ನೇ ಸಾಲಿನಲ್ಲಿ NRDWP ಅಡಿ ಜಿಲ್ಲಾವಾರು ಹಂಚಿಕೆಯಾಗುವ ಹಣವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಲಾಯಿತು.

## ಗ್ರಾಮೀಣ ರಸ್ತೆಗಳು,

ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ನಿರ್ದೇಶನ ನೀಡಲಾಯಿತು ಹಾಗೂ ಕಾಮಗಾರಿಗಳ ನಿಯಮಿತ ಪರಿಶೀಲನೆ ಮತ್ತು ಗುಣಮಟ್ಟದ ಕಾಮಗಾರಿಗಳಿಗೆ ಆದ್ಯತೆ ನೀಡಲಾಯಿತು. ರಸ್ತೆ ಕಾಮಗಾರಿಗಳಿಗೆ ಅವಶ್ಯವಿರುವಡೆ ಭೂ ವಿವಾದಗಳ ಪರಿಹಾರಕ್ಕೆ ಕ್ರಮಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಯಿತು. ಈ ಎಲ್ಲಾ ಕಾಮಗಾರಿಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ದಾಖಲಾತಿಗೊಳಿಸಿ ಪಾವತಿ ಆದೇಶ ಸೃಜಿಸಿ ಹಣ ಪಾವತಿಗೆ ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

## ಕೆರೆಗಳ ಅಭಿವೃದ್ಧಿ :

ಸಂಬಂಧಪಟ್ಟ ಎಲ್ಲಾ ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಗೊಳಪಡುವ ಕೆರೆಗಳ ಗಡಿ ಗುರುತು ಅದರ ಸುತ್ತಲೂ ಟ್ರೆಂಚಿಂಗ್ ಮಾಡಿ / ಗಿಡಗಳನ್ನು ನೆಟ್ಟು ಒತ್ತುವರಿ ತಡೆಗಟ್ಟಲು ಕ್ರಮವಹಿಸುವುದು ಮತ್ತು ಜಿಲ್ಲಾ ಪಂಚಾಯತಿಗಳಿಗೆ ಸಣ್ಣ ನೀರಾವರಿ ಇಲಾಖೆಯಿಂದ ಹಸ್ತಾಂತರಿಸಿರುವ ಸಣ್ಣ ಕೆರೆಗಳ ನಿರ್ವಹಣೆಗೆ ಆದ್ಯತೆ ನೀಡುವಂತೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಲಾಯಿತು.

## ಪಂಚಾಯತ್ ರಾಜ್ ಸಂಸ್ಥೆ ವಿಷಯಗಳು:

ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳು ಕಡ್ಡಾಯವಾಗಿ ತೆರಿಗೆ ಪರಿಷ್ಕರಣೆ ಮಾಡಬೇಕಾಗಿದ್ದು, ಎಲ್ಲಾ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಈ ದಿಸೆಯಲ್ಲಿ ಕಾರ್ಯೋನ್ಮುಖರಾಗಿ, ಈ ಚಟುವಟಿಕೆ ಸಂಪೂರ್ಣ ಗೊಳಿಸಲು ಗಡುವು, ದಿನಾಂಕ ನಿಗದಿಪಡಿಸಿ ಪ್ರಗತಿ ಸಾಧಿಸಿ ಸರ್ಕಾರಕ್ಕೆ ವರದಿ ನೀಡಲು ತಿಳಿಸಲಾಯಿತು.

ಗ್ರಾಮ ಪಂಚಾಯಿತಿಗಳು ಸ್ವಂತ ಸಂಪನ್ಮೂಲ ಕ್ರೋಢೀಕರಣಕ್ಕೆ ಒತ್ತು ನೀಡುವುದು ಮತ್ತು ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ಸಂಗ್ರಹಿಸುವ ಬಿಲ್ ಕಲೆಕ್ಟರ್‌ಗಳಿಗೆ ಹಾಗೂ ಗ್ರಾಮ ಪಂಚಾಯತಿಗಳಿಗೆ ಪ್ರೋತ್ಸಾಹ ನೀಡುವಂತೆ ಕಾರ್ಯಕ್ರಮ ಹಮ್ಮಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಲು ಸಚಿವರು ಸಭೆಯಲ್ಲಿ ನಿರ್ದೇಶನ ನೀಡಿದರು.

ಮೇಲ್ಕಂಡ ಎಲ್ಲಾ ಅಂಶಗಳಡಿ ನಿಗದಿತ ಸಮಯದೊಳಗೆ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಎಲ್ಲಾ ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಇನ್ನಷ್ಟು ಪಾರದರ್ಶಕ, ಹೆಚ್ಚಿನ ಗುಣಮಟ್ಟ ಕಾಯ್ದುಕೊಳ್ಳಲು ಸಚಿವರು ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಅನುಪಾಲನಾ ವರದಿಯನ್ನು ಸಂಬಂಧಪಟ್ಟ ಶಾಖೆಯ ನಿರ್ದೇಶಕರು/ಮುಖ್ಯಸ್ಥರುಗಳಿಗೆ ನಡವಳಿ ತಲುಪಿದ ಒಂದು ವಾರದೊಳಗೆ ಸಲ್ಲಿಸಲು ಸೂಚಿಸಿ ಸಭೆ ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ವರದಿ



ಡಾ॥ ಸುರೇಶ ನಾಡಗೌಡರ್

ಕುಲಸಚಿವರು
ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ
ಮತ್ತು ಪಂಚಾಯತ್ ರಾಜ್
ವಿಶ್ವಾವಿದ್ಯಾಲಯ, ಗದಗ

**ಸಮ್ಮೇಳನದಲ್ಲಿ ನಡೆದ ಪ್ರಬಂಧಗಳ ಮಂಡನೆ ಹಾಗೂ ಚರ್ಚೆಗಳ ಫಲಿತಾಂಶವಾಗಿ ಗ್ರಾಮೀಣಾಭಿವೃದ್ಧಿಯನ್ನು ತೀವ್ರಗೊಳಿಸಲು ಹಾಗೂ ಪರಿಣಾಮಕಾರಿ ಯನ್ನಾಗಿಸಲು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸುಧಾರಣೆ ಹಾಗೂ ಸಬಲೀಕರಣಕ್ಕಾಗಿ ಕೆಲವು ಶಿಫಾರಸ್ಸುಗಳನ್ನು ಮಾಡಲಾಯಿತು.**

# ವಿಶ್ವವಿದ್ಯಾಲಯದ ರಾಷ್ಟ್ರೀಯ ಸಮ್ಮೇಳನ

ಗದಗ್ ಜಿಲ್ಲೆಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು "ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ವೈವಿಧ್ಯತೆಗಳು" ವಿಷಯದ ಮೇಲೆ ಪ್ರಥಮ ರಾಷ್ಟ್ರೀಯ ಸಮ್ಮೇಳನವನ್ನು ದಿನಾಂಕ 13.06.2018 ಹಾಗೂ 14.06.2018 ರಂದು ಆಯೋಜಿಸಿತ್ತು. ಈ ಸಮ್ಮೇಳನದ ಉದ್ಘಾಟನಾ ಸಮಾರಂಭವನ್ನು ದಿನಾಂಕ 13.06.2018 ರಂದು ಕನ್ನಡ ಸಾಹಿತ್ಯ ಭವನ ಗದಗಿನಲ್ಲಿ ಆಯೋಜಿಸಲಾಗಿತ್ತು. ವಿಶ್ವವಿದ್ಯಾಲಯದ ಸ್ಥಾಪನೆ ಹಾಗೂ ರಾಷ್ಟ್ರೀಯ ಸಮ್ಮೇಳನದ ಕುರಿತಾಗಿ ಪರಿಚಯ ಮಾಡುವುದರೊಂದಿಗೆ, ಕಾರ್ಯಕ್ರಮದಲ್ಲಿ ನೆರೆದವರೆಲ್ಲರನ್ನು ಪ್ರೊ. ಸುರೇಶ ವಿ. ನಾಡಗೌಡರ, ಕುಲಸಚಿವರು, ಕ.ರಾ.ಗ್ರಾ.ಪಂ.ರಾ ವಿಶ್ವವಿದ್ಯಾಲಯ ಇವರು ಸ್ವಾಗತಿಸಿ, ಈ ಸಮಾರಂಭವನ್ನು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಾದ ಕು.ಭಾಗ್ಯಶ್ರೀ ಹಾಗೂ ಕು.ಸುಮಾ ಪೂಜಾರ ಇವರ ಪ್ರಾರ್ಥನಾ ಗೀತೆಯೊಂದಿಗೆ ಪ್ರಾರಂಭಿಸಲಾಯಿತು. ನಂತರ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ನಾಡಗೀತೆಯನ್ನು ಹಾಡಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರಾದ ಸನ್ಮಾನ್ಯ ಶ್ರೀ.ಕೃಷ್ಣ ಭೈರೆಗೌಡರವರು ಹಾಗೂ ಪ್ರಧಾನ ಕಾರ್ಯದರ್ಶಿ ಡಾ.ಎನ್.ನಾಗಾಂಬಿಕಾದೇವಿ, ಭಾ.ಆ.ಸೇ, ಇವರು ಕಾರ್ಯಕ್ರಮ ಯಶಸ್ವಿಯಾಗಲೆಂದು ತಮ್ಮ ಶುಭ ಹಾರೈಕೆಗಳನ್ನು ತಿಳಿಸಿದರು.

ಸಾಮಾಜಿಕ ಕಳಕಳಿ ಹಾಗೂ ಬದ್ಧತೆಗೆ ಹೆಸರಾದ ಶ್ರೀ.ವಾಸಣ್ಣ.ಕುರಡಗಿ, ಅಧ್ಯಕ್ಷರು, ಜಿಲ್ಲಾ ಪಂಚಾಯತಿ, ಗದಗ್, ಇವರು ದೀಪ ಬೆಳಗಿಸುವ ಮುಖಾಂತರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಿಕೇಂದ್ರೀಕರಣದ ಎಲ್ಲಾ ಹಂತಗಳ ಪ್ರತ್ಯಕ್ಷದರ್ಶಿಗಳಾದ ಶ್ರೀ.ಸಿ.ನಾರಾಯಣಸ್ವಾಮಿ, ಮಾಜಿ ಸಂಸದರು ಹಾಗೂ ಅಧ್ಯಕ್ಷರು, ಕ.ಪಂ.ರಾ.ಪರಿಷತ್ತು ಇವರು ಸಮ್ಮೇಳನದಲ್ಲಿ ಮಂಡಿಸಲಿರುವ ಲೇಖನಗಳ ಪುಸ್ತಕವನ್ನು ಬಿಡುಗಡೆ ಮಾಡಿದರು. ಅವರು ತಮ್ಮ ಭಾಷಣದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಒಳಿತು ಹಾಗೂ ಲೋಪಗಳನ್ನು ಕುರಿತು ಮಾತನಾಡಿದರಲ್ಲದೆ, ದೇಶದ ಅಭಿವೃದ್ಧಿಗಾಗಿ ಈ ಸಂಸ್ಥೆಗಳನ್ನು ಹೆಚ್ಚು ಕ್ರಿಯಾಶೀಲರನ್ನಾಗಿಸುವ ನಿಟ್ಟಿನಲ್ಲಿ ಸರ್ಕಾರವು ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತು ಪ್ರಸ್ತಾಪಿಸಿದರು.



ಸಮ್ಮೇಳನದ ಪ್ರಮುಖ ಭಾಷಣವನ್ನು ಪ್ರತಿಷ್ಠಿತ ಅರ್ಥಶಾಸ್ತ್ರಜ್ಞರಾದ ಪ್ರೊ.ಆರ್.ಎಸ್.ದೇಶಪಾಂಡೆ, ಮಾಜಿ ನಿರ್ದೇಶಕರು, ಐಸೆಕ್, ಬೆಂಗಳೂರು ಇವರು ಮಂಡಿಸಿದರು. ತಮ್ಮ ಭಾಷಣದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಅರ್ಥ ಶಾಸ್ತ್ರದ ಪಾತ್ರ ಹಾಗೂ ಪ್ರಾಮುಖ್ಯತೆಯನ್ನು ಪ್ರಸ್ತಾಪಿಸಿದರು.

ಪ್ರೊ. ಬಿ. ತಿಮ್ಮೇಗೌಡ, ಕುಲಪತಿಗಳು, ಕ.ರಾ.ಗ್ರಾ.ಅ.ಪಂ. ರಾ. ವಿಶ್ವವಿದ್ಯಾಲಯ, ಗದಗ್ ಇವರು ಅಧ್ಯಕ್ಷತೆ ವಹಿಸಿ, ತಮ್ಮ ಭಾಷಣದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಜವಾಬ್ದಾರಿ ಮತ್ತು ಪಾತ್ರದ ಬಗ್ಗೆ ಮಾತನಾಡಿ, ವಿಶ್ವವಿದ್ಯಾಲಯ ಆ ನಿಟ್ಟಿನಲ್ಲಿ ಮಾಡಿರುವ ಕೆಲಸ ಹಾಗೂ ಮುಂದಿನ ರೂಪುರೇಷೆಗಳ ಬಗ್ಗೆ ಬೆಳಕು ಚೆಲ್ಲಿದರು.

ಪ್ರೊ.ಜೀವನಕುಮಾರ, ಗೌರವ ಪ್ರಾಧ್ಯಾಪಕರು, ಕ.ರಾ. ಗ್ರಾ.ಅ.ಪಂ.ರಾ. ವಿಶ್ವವಿದ್ಯಾಲಯ, ಗದಗ್ ಇವರು ಕಾರ್ಯಕ್ರಮದಲ್ಲಿ ಭಾಗವಹಿಸಿದ ಗೌರವಾನ್ವಿತ ವ್ಯಕ್ತಿಗಳು, ಅಧಿಕಾರಿಗಳು, ಜನಪ್ರತಿನಿಧಿಗಳು, ಸಂಪನ್ಮೂಲ ವ್ಯಕ್ತಿಗಳು, ವಿದ್ಯಾರ್ಥಿಗಳು ಹಾಗೂ ಇತರರಿಗೆ ವಂದನೆಗಳನ್ನು ಸಲ್ಲಿಸಿದರು.

ಹಲವಾರು ಅಧಿಕಾರಿಗಳು, ಜನಪ್ರತಿನಿಧಿಗಳು, ಹಾಗೂ ಸಂಪನ್ಮೂಲ ವ್ಯಕ್ತಿಗಳು ಈ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು. ಶ್ರೀ.ವಾಸಣ್ಣ ಕುರಡಗಿ, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಗದಗ, ಶ್ರೀ.ಸಿ.ನಾರಾಯಣಸ್ವಾಮಿ, ಮಾಜಿ ಸಂಸದರು ಹಾಗೂ ಅಧ್ಯಕ್ಷರು, ಕ.ಪಂ. ರಾ.ಪರಿಷತ್ತು, ಶ್ರೀ.ಡಿ.ಆರ್.ಪಾಟೀಲ್, ಮಾಜಿ ಶಾಸಕರು, ಹಾಗೂ ಉಪಾಧ್ಯಕ್ಷರು, ಕ.ಪಂ.ರಾ.ಪರಿಷತ್ತು, ಶ್ರೀ.ಎಸ್. ಎಮ್.ವಿಜಯಾನಂದ, ಭಾ.ಆ.ಸೇ. (ನಿವೃತ್ತ), ಮಾಜಿ ಪ್ರಧಾನ ಕಾರ್ಯದರ್ಶಿಗಳು, ಕೇರಳ ಸರ್ಕಾರ, ಶ್ರೀ.ಕಮಲ್‌ತೊರೈ, ಭಾ.ಆ.ಸೇ. (ನಿವೃತ್ತ), ಮಾಜಿ ಕಾರ್ಯದರ್ಶಿಗಳು, ಭಾರತ ಸರ್ಕಾರ, ಶ್ರೀ.ಡಾ.ಮೀನಾಕ್ಷಿಸುಂದರಂ, ಭಾ.ಆ.ಸೇ. (ನಿವೃತ್ತ), ಮಾಜಿ ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾ. ಇಲಾಖೆ, ಕರ್ನಾಟಕ ಸರ್ಕಾರ, ಶ್ರೀ.ಎಸ್.ಎ.ಪಾಟೀಲ್, ಮಾಜಿ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ, ಪ್ರೊ.ಆರ್.ಎಸ್.ದೇಶಪಾಂಡೆ, ಮಾಜಿ ನಿರ್ದೇಶಕರು, ಐಸೆಕ್, ಬೆಂಗಳೂರು, ಶ್ರೀ.ಜಾರ್ಜ್ ಮ್ಯಾಥೀವ್, ಅಧ್ಯಕ್ಷರು, ಸಮಾಜ ವಿಜ್ಞಾನ ಸಂಸ್ಥೆ, ದೆಹಲಿ, ಶ್ರೀ.ಮಂಜುನಾಥ್ ಚವ್ಹಾಣ, ಭಾ.ಆ.ಸೇ. ಸಿ.ಇ.ಓ, ಜಿಲ್ಲಾ ಪಂಚಾಯತಿ, ಗದಗ್, ಶ್ರೀಮತಿ.ರೂಪಾ ಅಂಗಡಿ, ಉಪಾಧ್ಯಕ್ಷರು, ಜಿಲ್ಲಾ ಪಂಚಾಯತಿ, ಗದಗ್, ಶ್ರೀ.ಜಮಾದಾರ್, ಶ್ರೀ.ಯಾಲಕ್ಕಿಗೌಡ, ನಿರ್ದೇಶಕರು, ಪಂಚಾಯತ್ ರಾಜ್-2, ಗ್ರಾಮೀಣಾಭಿವೃದ್ಧಿ



ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಈ ಎಲ್ಲಾ ಗೌರವಾನ್ವಿತ ವ್ಯಕ್ತಿಗಳು ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

ನಂತರ ಎರಡು ಪ್ಲೇನರಿ ಸೆಷನ್‌ಗಳನ್ನು ನಡೆಸಲಾಯಿತು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕ್ಷೇತ್ರದಲ್ಲಿ ಪರಿಣಿತರಾದ ಶ್ರೀ.ಎಸ್.ಎಮ್. ವಿಜಯಾನಂದ, ಭಾ.ಆ.ಸೇ. (ನಿವೃತ್ತ), ಡಾ.ಕಮಲ್ ತೊರೈ, ಭಾ.ಆ.ಸೇ.(ನಿವೃತ್ತ), ಶ್ರೀ.ನಾರಾಯಣಸ್ವಾಮಿ, ಮಾಜಿ ಸಂಸದರು ಹಾಗೂ ಅಧ್ಯಕ್ಷರು, ಕ.ಪಂ.ರಾ. ಪರಿಷತ್ತು, ಶ್ರೀ.ಮೀನಾಕ್ಷಿಸುಂದರಂ, ಭಾ.ಆ.ಸೇ.(ನಿವೃತ್ತ), ಮಾಜಿ ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾ, ಇಲಾಖೆ, ಕರ್ನಾಟಕ ಸರ್ಕಾರ, ಶ್ರೀ ಜಾರ್ಜ್ ಮ್ಯಾಥೀವ್, ಅಧ್ಯಕ್ಷರು, ಸಮಾಜ ವಿಜ್ಞಾನ ಸಂಸ್ಥೆ, ದೆಹಲಿ ಇವರು ಹಲವಾರು ವಿಷಯಗಳಿಗೆ ಸಂಬಂಧಪಟ್ಟಂತೆ ತಮ್ಮ ದೃಷ್ಟಿಕೋನವನ್ನು ಮಂಡಿಸಿದರು. ಪ್ರೊ. ಆರ್.ಎಸ್. ದೇಶಪಾಂಡೆ, ಮಾಜಿ ನಿರ್ದೇಶಕರು, ಐಸೆಕ್, ಬೆಂಗಳೂರು ಹಾಗೂ ಪ್ರೊ.ಎಸ್.ಎ.ಪಾಟೀಲ್, ಮಾಜಿ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರುಗಳು ಸೆಷನ್‌ಗಳ ಅಧ್ಯಕ್ಷತೆಯನ್ನು ವಹಿಸಿದ್ದರು. ನಂತರ ದೇಶದ ಹಲವಾರು ಭಾಗಗಳಿಂದ ಬಂದಂತಹ ಪ್ರತಿಭಾನ್ವಿತ ವ್ಯಕ್ತಿಗಳು ಎರಡು ಟೆಕ್ನಿಕಲ್ ಸೆಷನ್‌ಗಳಲ್ಲಿ ತಮ್ಮ ಸಂಶೋಧನೆಗಳ ಮತ್ತು ವಾದಗಳ ಬಗ್ಗೆ ಪ್ರಬಂಧ ಮಂಡಿಸಿ ಅವು ಹೇಗೆ ಗ್ರಾಮೀಣಾಭಿವೃದ್ಧಿಗೆ ಪೂರಕವಾಗಿದೆ ಎಂದು ಪ್ರಸ್ತುತ ಪಡಿಸಿದರು.

ಐದು ಟೆಕ್ನಿಕಲ್ ಸೆಷನ್‌ಗಳನ್ನು ಆಯೋಜಿಸಲಾಗಿದ್ದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಿಜ್ಞಾನ ಮತ್ತು ತಂತ್ರಜ್ಞಾನ, ಗ್ರಂಥಾಲಯ, ವಾಣಿಜ್ಯಶಾಸ್ತ್ರ, ನಿರ್ವಹಣೆ ಹಾಗೂ ಉದ್ಯಮಶೀಲತೆ ಕ್ಷೇತ್ರದಲ್ಲಿ ತಜ್ಞರಾದ ಡಾ.ಜೆ.ಬಿ.ಪ್ರಧಾನ, ಅತಿಥಿ ಪ್ರಾಧ್ಯಾಪಕರು, ಕ.ರಾ. ಗ್ರಾ.ಪಂ.ರಾ. ವಿಶ್ವವಿದ್ಯಾಲಯ, ಪ್ರೊ.ಅಶೋಕ ಹಂಜಗಿ,

ಚೇರ್‌ಮನ್, ಬೆಂಗಳೂರು ವಿಶ್ವವಿದ್ಯಾಲಯ, ಡಾ.ಆಯ್. ಆರ್.ಎನ್.ಗೌಡರ್, ಅತಿಥಿ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಪ್ರೊ.ಎಸ್.ಬಿ.ಪಾಟೀಲ್, ಗ್ರಂಥಪಾಲಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಶ್ರೀ.ಪ್ರಕಾಶ ಭಟ್, ಫೌಂಡರ್ ಹಾಗೂ ಸಿ.ಇ.ಓ, ಪೀಪಲ್ ಫಸ್ಟ್, ಧಾರವಾಡ, ಡಾ.ಟಿ.ಬಿ.ಬಿ.ಎಸ್.ವಿ.ರಮಣಯ್ಯ, ಗೌರವ ಪ್ರಾಧ್ಯಾಪಕರು, ಕ.ರಾ.ಗ್ರಾ.ಪಂ.ರಾ. ವಿಶ್ವವಿದ್ಯಾಲಯ, ಗದಗ, ಪ್ರೊ.ಬಿ.ಸಾಂಬಶಿವ ಪ್ರಸಾದ, ಆಯ್.ಸಿ.ಪಿ.ಆರ್., ಸೀನಿಯರ್ ಫೆಲೋ, ಗೀತಂ ಸ್ಕೂಲ್ ಆಫ್ ಗಾಂಧಿಯನ್ ಸ್ಟಡೀಸ್, ವಿಶಾಖ ಪಟ್ಟಣಂ, ಆಂಧ್ರ ಪ್ರದೇಶ, ಡಾ.ಡಿ.ಪ್ರಾಣೇಶ ರಾವ್, ನಿರ್ದೇಶಕರು, ಎ.ಎನ್.ಎಸ್.ಎಸ್. ಆಯ್.ಆರ್.ಡಿ, ಮೈಸೂರು, ಡಾ.ಗಣೇಶ ಪ್ರಸಾದ, ಡೆಪ್ಯುಟಿ ಡೈರೆಕ್ಟರ್, ಎ.ಎನ್.ಎಸ್.ಎಸ್.ಆಯ್.ಆರ್.ಡಿ, ಮೈಸೂರು, ಪ್ರೊ.ಉತ್ತಮ್ ಕಿನಂಗೆ, ಕೌಸಾಳಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಡಾ. ಅಬ್ದುಲ್ ಅಜೀಜ್, ಜಂಟಿ ನಿರ್ದೇಶಕರು, ಕರ್ನಾಟಕ ಮಿಲ್ಕ್ ಫೆಡರೇಷನ್, ಧಾರವಾಡ ಹಾಗೂ ಡಾ. ಎಲ್.ಜಿ.ಹಿರೇಗೌಡರ್, ಪ್ರೋಗ್ರಾಮ್ ಕೋಆರ್ಡಿನೇಟರ್, ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ, ಇವರುಗಳು ಸಮ್ಮೇಳನ ದಲ್ಲಿ ಮಾತನಾಡಿ ಗ್ರಾಮೀಣಾಭಿವೃದ್ಧಿಯಲ್ಲಿ ಆಗಿರುವ ಕಾರ್ಯಗಳು, ಅನ್ವೇಷಣೆಗಳು ಹಾಗೂ ಇದು ತೀವ್ರಗತಿಯಲ್ಲಿ ನೆರವೇರಲು ಅವಶ್ಯವಿರುವ ಕಾರ್ಯಚಟುವಟಿಕೆಗಳ ಕುರಿತು ತಮ್ಮ ಪ್ರಬಂಧ ಮಂಡಿಸಿದರು.

ವಿಶ್ವವಿದ್ಯಾಲಯದಲ್ಲಿ ಪ್ರಾರಂಭಗೊಂಡಿರುವ ಸ್ನಾತಕೋತ್ತರ ಪದವಿಗಳ ವಿಷಯಗಳಿಗೆ ಸಂಬಂಧಪಟ್ಟ ಆರು ಸೆಷನ್‌ಗಳನ್ನು ಏಕಕಾಲದಲ್ಲಿ ನಡೆಸಲಾಯಿತು. ಈ ಸೆಷನ್‌ಗಳಲ್ಲಿ ವಿದ್ವಾಂಸರು, ಸಂಶೋಧಕರು ಹಾಗೂ ವಿದ್ಯಾರ್ಥಿಗಳು ತಮ್ಮ ಪ್ರಬಂಧಗಳನ್ನು ಮಂಡಿಸಿದರು.

ನಂತರ ಸಮಾರೋಪ ಸಮಾರಂಭವನ್ನು ಏರ್ಪಡಿಸ ಲಾಗಿತ್ತು. ಶ್ರೀ.ಪರಮೇಶ್ವರ ಭಂಡಾರಿ, ಕ.ರಾ.ಗ್ರಾ.ಪಂ. ರಾ. ವಿಶ್ವವಿದ್ಯಾಲಯ ಇವರು ವಿದ್ವಾಂಸರು, ಸಂಪನ್ಮೂಲ ವ್ಯಕ್ತಿಗಳು ಹಾಗೂ ಇತರರೆಲ್ಲರನ್ನು ಸ್ವಾಗತಿಸಿದರು. ಡಾ.ಮೀನಾಕ್ಷಿಸುಂದರಂ, ಭಾ.ಆ.ಸೇ.(ನಿವೃತ್ತ), ಮಾಜಿ ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾ, ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಶ್ರೀ.ಎಸ್.ಎಮ್.ವಿಜಯಾನಂದ, ಭಾ.ಆ.ಸೇ.(ನಿವೃತ್ತ), ಮಾಜಿ ಪ್ರಧಾನ ಕಾರ್ಯದರ್ಶಿಗಳು, ಕೇರಳ, ಪ್ರೊ.ಎಸ್.ಎ.ಪಾಟೀಲ್, ವಿಶ್ರಾಂತ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ, ಶ್ರೀ.ಸಿ.ನಾರಾಯಣಸ್ವಾಮಿ, ಮಾಜಿ ಸಂಸದರು ಹಾಗೂ ಅಧ್ಯಕ್ಷರು, ಕ.ಪಂ.ರಾ. ಪರಿಷತ್ತು, ಶ್ರೀ.ಡಿ.ಆರ್.ಪಾಟೀಲ್, ಮಾಜಿ ಶಾಸಕರು ಹಾಗೂ ಉಪಾಧ್ಯಕ್ಷರು, ಕ.ಪಂ.ರಾ. ಪರಿಷತ್ತು, ಶ್ರೀ. ಸತೀಶ, ಶ್ರೀ.ಜಾರ್ಜ್ ಮ್ಯಾಥಿವ್, ಅಧ್ಯಕ್ಷರು, ಸಮಾಜ ವಿಜ್ಞಾನ ಸಂಸ್ಥೆ, ದೆಹಲಿ ಮುಂತಾದವರು ಪಾಲ್ಗೊಂಡಿದ್ದರು. ಪ್ರೊ.ಡಿ.ಜೀವನಕುಮಾರ, ಗೌರವ ಪ್ರಾಧ್ಯಾಪಕರು ಕ.ರಾ. ಗ್ರಾ.ಪಂ.ರಾ. ವಿಶ್ವವಿದ್ಯಾಲಯ ಇವರು ಎರಡು ದಿನಗಳ ಸಮ್ಮೇಳನದ ವಿವರವಾದ ವರದಿಯನ್ನು ಮಂಡಿಸಿದರು.

ಸಮ್ಮೇಳನದಲ್ಲಿ ನಡೆದ ಪ್ರಬಂಧಗಳ ಮಂಡನೆ ಹಾಗೂ ಚರ್ಚೆಗಳ ಫಲಿತಾಂಶವಾಗಿ ಗ್ರಾಮೀಣಾಭಿವೃದ್ಧಿಯನ್ನು ತೀವ್ರಗೊಳಿಸಲು ಹಾಗೂ ಪರಿಣಾಮಕಾರಿಯನ್ನಾಗಿಸಲು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸುಧಾರಣೆ ಹಾಗೂ ಸಬಲೀಕರಣಕ್ಕಾಗಿ ಕೆಲವು ಶಿಫಾರಸ್ಸುಗಳನ್ನು ಮಾಡಲಾಯಿತು. ಅವುಗಳು ಯಾವುವೆಂದರೆ: ಗ್ರಾಮೀಣ ಪ್ರದೇಶಗಳಲ್ಲಿ ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಪಟ್ಟಂತೆ ಹೆಚ್ಚು ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು, ಗ್ರಾಮೀಣ ಜನರು ವಲಸೆ ಹೋಗುವುದನ್ನು ತಡೆಯಲು ಹಾಗೂ ಗುಣಾತ್ಮಕ ಜೀವನವನ್ನು ನಡೆಸಲು ಅನುಕೂಲವಾಗುವಂತೆ ಜೀವನೋಪಾಯ ಚಟುವಟಿಕೆಗಳನ್ನು, ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು, ಕೃಷಿಯನ್ನು ಲಾಭದಾಯಕವನ್ನಾಗಿಸಲು ಆಧುನಿಕ ತಂತ್ರಜ್ಞಾನವನ್ನು ಅಳವಡಿಸುವುದು, ಕೃಷಿ ಉತ್ಪಾದನೆಗಳಿಗೆ ಸೂಕ್ತ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವುದು, ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳು ಹಾಗೂ ನೌಕರರ ಪರಿಣಾಮಕಾರಿ ಭಾಗವಹಿಸುವಿಕೆಗಾಗಿ ಅವರಿಗೆ ತರಬೇತಿಯನ್ನು ಒದಗಿಸುವುದು, ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಆಡಳಿತದಲ್ಲಿ ಪಾರದರ್ಶಕತೆಯನ್ನು ತರುವುದು, ಮಹಿಳೆಯರ ಹಾಗೂ ದುರ್ಬಲ ವರ್ಗದವರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ವಾತಾವರಣವನ್ನು ನಿರ್ಮಿಸುವುದು ಹಾಗೂ ಗ್ರಾಮ ಸಭೆಗಳನ್ನು ನಿಯಮಿತವಾಗಿ ಹಾಗೂ ಯಶಸ್ವಿಯಾಗಿ ನಡೆಸುವುದು.

ಪ್ರೊ.ಸುರೇಶ. ವಿ.ನಾಡಗೌಡರ್, ಕ.ರಾ.ಗ್ರಾ.ಅ.ಪಂ.ರಾ. ವಿಶ್ವವಿದ್ಯಾಲಯ, ಗದಗ ಇವರು ಕಾರ್ಯಕ್ರಮದಲ್ಲಿ ಭಾಗವಹಿಸಿದ ಗೌರವಾನ್ವಿತ ವ್ಯಕ್ತಿಗಳು, ಅಧಿಕಾರಿಗಳು, ಜನಪ್ರತಿನಿಧಿಗಳು, ಸಂಪನ್ಮೂಲ ವ್ಯಕ್ತಿಗಳು, ವಿದ್ಯಾರ್ಥಿಗಳು, ವಿದ್ಯುನ್ಮಾನ ಮಾಧ್ಯಮ ಹಾಗೂ ಪತ್ರಿಕಾ ಮಾಧ್ಯಮದವರಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಕ್ಕೆ ಹಾಗೂ ಅವರ ನೆರವಿಗೆ ವಂದನೆಗಳನ್ನು ಸಲ್ಲಿಸಿದರು.

■

ಲೇಖನ

ಅರಣ್ಯ ಜೀವಶಾಸ್ತ್ರ ಮತ್ತು
ಪರಿಸರ ಇಲಾಖೆ
ಬಹುಮಹಡಿಗಳ ಕಟ್ಟಡ,
ಬೆಂಗಳೂರು

**ಜಿಲ್ಲಾ ಪಂಚಾಯತಿ ಉಡುಪಿಗೆ ತ್ಯಾಜ್ಯ ನಿರ್ವಹಣೆಯ ಸಮಸ್ಯೆಯನ್ನು ಬಗೆಹರಿಸುವ ಉದ್ದೇಶದಿಂದ "ಉಡುಪಿ ಸ್ವಚ್ಛ ಮಿಷನ್" ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದ್ದು, ಈ ಕಾರ್ಯಕ್ರಮದಡಿ ತ್ಯಾಜ್ಯವನ್ನು ಸಂಪನ್ಮೂಲವಾಗಿ ಪರಿವರ್ತಿಸುವ ಗುರಿ ಹೊಂದಲಾಗಿದೆ. ಇದಕ್ಕಾಗಿ ಘನ ಮತ್ತು ದ್ರವ ಸಂಪನ್ಮೂಲ ನಿರ್ವಹಣಾ (SLRM) ಚಟುವಟಿಕೆಯನ್ನು ವಿವಿಧ ಗ್ರಾಮ ಪಂಚಾಯತಿಗಳಲ್ಲಿ ಪ್ರಾರಂಭಿಸಲಾಗಿದೆ.**

# ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಪ್ರಶಸ್ತಿ

ಪರಿಸರ ಸಂರಕ್ಷಣೆ ಮತ್ತು ಪರಿಸರ ವ್ಯವಸ್ಥಾಪನೆಗಾಗಿ ಗಣನೀಯ ಸೇವೆ ಸಲ್ಲಿಸಿದ ವ್ಯಕ್ತಿ ಅಥವಾ ಸಂಸ್ಥೆಗಳನ್ನು ಗುರುತಿಸಿ 2017-18ನೇ ಸಾಲಿನ ರಾಜ್ಯ ಪರಿಸರ ಪ್ರಶಸ್ತಿಗೆ ರೂ.1.00 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರವನ್ನು ನೀಡಿದ್ದು, ಪ್ರಶಸ್ತಿಯನ್ನು ವ್ಯಕ್ತಿ ಅಥವಾ ಸಂಸ್ಥೆಗಳ ಅಂದರೆ, ಸರ್ಕಾರಿ ವಲಯ, ಸರ್ಕಾರೇತರ ಸಂಸ್ಥೆ, ಕಂಪನಿ, ಟ್ರಸ್ಟ್ ಇತರೆ ಪರಿಸರ ಸಂರಕ್ಷಣೆ ಮತ್ತು ಪರಿಸರ ವ್ಯವಸ್ಥಾಪನೆ ಕ್ಷೇತ್ರಗಳಲ್ಲಿನ ಗಣನೀಯ ಸೇವೆಗಾಗಿ ನೀಡಲಾಗಿದೆ.

ಈ ಪ್ರಶಸ್ತಿಗಳನ್ನು ರಾಜ್ಯದ 3 ವಲಯಗಳಂತೆ ಅಂದರೆ, ಮಲೆನಾಡು / ಕರಾವಳಿ ವಲಯ (ಬೆಳಗಾವಿ, ಶಿವಮೊಗ್ಗ, ಚಿಕ್ಕಮಗಳೂರು, ಮೈಸೂರು, ಕೊಡಗು, ಚಾಮರಾಜನಗರ, ಹಾಸನ, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳು)

**ದಕ್ಷಿಣ ವಲಯ** : ಮಂಡ್ಯ, ರಾಮನಗರ, ಬೆಂಗಳೂರು ನಗರ, ಬೆಂಗಳೂರು (ಗ್ರಾ), ಕೋಲಾರ, ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳು.

**ಉತ್ತರ ವಲಯ** : ದಾವಣಗೆರೆ, ಚಿತ್ರದುರ್ಗ, ಹಾವೇರಿ, ಧಾರವಾಡ, ಗದಗ್, ಬಳ್ಳಾರಿ, ಬಾಗಲಕೋಟೆ, ವಿಜಯಪುರ, ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು.

ಇದರಲ್ಲಿ ಆಯ್ಕೆಯಾದ ವ್ಯಕ್ತಿ ಮತ್ತು ಸಂಸ್ಥೆಗೆ ಈ ಕೆಳಕಂಡ ಒಂದು ಅಥವಾ ಉಭಯ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆ/ಆರಂಭಶೀಲತೆ/ಯೋಜನೆ/ಕಾರ್ಯಕ್ರಮ ಮೂಲಕ ನೀಡಿರುವ ಕೊಡುಗೆಯಾಗಿದೆ.



(i) **ಪರಿಸರ ಸಂರಕ್ಷಣೆ:–** ಇದರಲ್ಲಿ ಜೈವಿಕ ವೈವಿಧ್ಯತೆ, ಜೈವಿಕ ವ್ಯವಸ್ಥೆ, ವಾಯು ಜಲ, ಮಣ್ಣು, ನೈಸರ್ಗಿಕ, ಸಸ್ಯರಾಶಿ, ವನ್ಯ ಜೀವಿ ಇತ್ಯಾದಿ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಸಹ್ಯ ವ್ಯವಸ್ಥಾಪನೆ ಇತ್ಯಾದಿ.

(ii) **ಪರಿಸರ ವ್ಯವಸ್ಥಾಪನೆ:–** ಇದರಲ್ಲಿ ಸದೃಢ ಮತ್ತು ಗುಣಾತ್ಮಕ ಪರಿಸರ ಅಭ್ಯಾಸಗಳು, ಸಂರಕ್ಷಣೆ ಅಥವಾ ಪದಾರ್ಥಗಳ ಬಳಕೆಯಲ್ಲಿ ಪರಿಸರ ಮಾಲಿನ್ಯ ಕಡಿಮೆಗೊಳಿಸುವುದು, ಸಂಪನ್ಮೂಲಗಳ ಸಂರಕ್ಷಣೆ ಮತ್ತು ಸಹ್ಯ ಅಭಿವೃದ್ಧಿಯ ಧ್ಯೇಯ ಹೊಂದಿರುವುದು.

ಈ ಕೆಳಕಂಡಂತೆ ವ್ಯಕ್ತಿ ಹಾಗೂ ಸಂಸ್ಥೆಗಳನ್ನು 2017–18ನೇ ಸಾಲಿಗೆ "ರಾಜ್ಯ ಪರಿಸರ ಪ್ರಶಸ್ತಿ" ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ.

## ದಕ್ಷಿಣ ವಲಯ:

ಡಾ॥ ಟಿ.ವಿ.ರಾಮಚಂದ್ರರವರು ಪ್ರಸ್ತುತ ವಿಶ್ವ ವಿಖ್ಯಾತ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ Centre for Ecological Sciencesನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಬೆಂಗಳೂರಿನ ಕೆರೆ, ಸರೋವರ ಹಾಗೂ ಮಾಲಿನ್ಯದ ಕುರಿತಂತೆ ಅನೇಕ ಅಧ್ಯಯನಗಳನ್ನು ಕೈಗೊಳ್ಳುವುದರ ಮೂಲಕ ಅವುಗಳ ರಕ್ಷಣೆಗೆ ಸದಾ ತಮ್ಮ ಸಹಕಾರ ಹಾಗೂ ಹೋರಾಟವನ್ನು ನಡೆಸುತ್ತಿದ್ದಾರೆ. ಅವರ ಪರಿಸರದ ಬಗೆಗಿನ ಸಂಶೋಧನಾ ಲೇಖನಗಳು ದೇಶದ ಹಾಗೂ ಅಂತರರಾಷ್ಟ್ರೀಯ ಮಟ್ಟದ ನಿಯತಕಾಲಿಕೆಗಳಲ್ಲಿ ಪ್ರಕಟಣೆಯಾಗಿದ್ದು ಅವುಗಳು ಪರಿಸರ ರಕ್ಷಣೆಗೆ ಪೂರಕವಾಗಿವೆ. ಇವರ ಕಾರ್ಯಕ್ಷೇತ್ರ ಕೇವಲ ಬೆಂಗಳೂರಿಗೆ ಸೀಮಿತವಾಗಿರದೇ, ಇವರ ಸಂಶೋಧನೆ ವಿಶ್ವ ವಿಖ್ಯಾತ ಪಶ್ಚಿಮ ಘಟ್ಟ ಅರಣ್ಯಗಳ ಮತ್ತು ಅವುಗಳ ಜೀವ ವೈವಿಧ್ಯತೆ ಸಂರಕ್ಷಣೆ ಹಾಗೂ ಪರಿಸರ ಸಂರಕ್ಷಣೆಯಲ್ಲಿ ಅದರಲ್ಲೂ ಜಲ ಮೂಲಗಳ ರಕ್ಷಣೆ ಮಾಡುವಲ್ಲಿ ಅವುಗಳ ಪಾತ್ರದ ಬಗ್ಗೆ ಸಂಶೋಧನೆಯನ್ನು ಕೈಗೊಂಡಿರುತ್ತಾರೆ. ಆದುದರಿಂದ ಇಂತಹ ಸಂಶೋಧನಾಕಾರರನ್ನು ಗುರುತಿಸಿ ಸನ್ಮಾನಿಸಲಾಗಿದೆ.

## ಮಲೆನಾಡು/ಕರಾವಳಿ ವಲಯ:–

ಶ್ರೀಮತಿ ಪಮೇಲಾ ಮಲ್ಹೋತ್ರಾರವರು ನಮ್ಮ ರಾಜ್ಯದ ಪಶ್ಚಿಮ ಘಟ್ಟ ಅರಣ್ಯ ಪ್ರದೇಶವಾದ ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ನೆಲೆಸಿದ್ದು, ಇವರು ಕಳೆದ 25 ವರ್ಷಗಳಿಂದ ನಾಗರಹೊಳೆ, ಬಂಡೀಪುರ ಮತ್ತು ಬ್ರಹ್ಮಗಿರಿ, ವನ್ಯಜೀವಿ ಧಾಮಗಳ ನಡುವಿನಲ್ಲಿ ಲಭ್ಯವಿರುವ ಸುಮಾರು 300 ಎಕರೆ ಪ್ರದೇಶದ ಖಾಸಗೀ ಜಾಗವೊಂದನ್ನು ಖಾಸಗೀ ಅರಣ್ಯವನ್ನಾಗಿ ಬದಲಿಸಿ ಸಂರಕ್ಷಿಸಿದ್ದು, ಇದರಿಂದಾಗಿ ಬಂಡೀಪುರ, ನಾಗರಹೊಳೆ ಮತ್ತು ಬ್ರಹ್ಮಗಿರಿ ನಡುವೆ ವನ್ಯ ಪ್ರಾಣಿಗಳ ಸಂಚಾರಕ್ಕೆ ಅನುಕೂಲವಾಗಿರುತ್ತದೆ. ಇದಲ್ಲದೇ ಇವರು ಈ ಭಾಗದಲ್ಲಿ ಜೀವ ವೈವಿಧ್ಯತೆ ಸಂರಕ್ಷಣೆ,



ಪರಿಸರ ಸಂರಕ್ಷಣೆ ಇವುಗಳ ಬಗ್ಗೆ ಜನ ಸಾಮಾನ್ಯರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಾಕಿಕೊಂಡು ಜೀವ ವೈವಿಧ್ಯತೆ Hot Spot ಆದ ಪಶ್ಚಿಮ ಘಟ್ಟ ಅರಣ್ಯ ಪ್ರದೇಶದಲ್ಲಿರುವ ವನ್ಯಪ್ರಾಣಿ, ಸಸ್ಯರಾಶಿ ಇಂತವುಗಳ ಸಂರಕ್ಷಣೆಯಿಂದ ಪರಿಸರ ಸಮತೋಲನ ಮಾಡುವಂತಹ ಕೆಲಸ ಕಾರ್ಯಗಳಿಗೆ ಒಂದು ಉದಾಹರಣೆಯಾಗಿರುತ್ತಾರೆ. ಇಂತಹ ಕೆಲಸ ಕಾರ್ಯಗಳನ್ನು ಪರಿಸರ ಸಂರಕ್ಷಣೆಗೆ ಪೂರಕವಾದಂತಹ ಕೆಲಸ ಕಾರ್ಯಗಳನ್ನು ಪ್ರೋತ್ಸಾಹಿಸುವ ದೃಷ್ಠಿಯಿಂದ ಅದರಲ್ಲೂ ಕಾವೇರಿ ನದಿಯ ಉದ್ಭವ ಸ್ಥಳಗಳಲ್ಲಿ ಇಂತಹ ಕಾರ್ಯಕ್ರಮಗಳಿಗೆ ಉತ್ತೇಜನ ನೀಡುವ ದೃಷ್ಠಿಯಿಂದ ಇವರಿಗೆ "ರಾಜ್ಯ ಪರಿಸರ ಪ್ರಶಸ್ತಿ" ನೀಡಲು ಶಿಫಾರಸ್ಸು ಮಾಡಲಾಗಿದೆ.

### ಉತ್ತರ ವಲಯ:-

ಶ್ರೀ ಅಜಯ್ ಎ. ದೇಸಾಯಿರವರು ಒಬ್ಬ ಉತ್ತಮ ವನ್ಯಜೀವಿ ತಜ್ಞರಾಗಿದ್ದು, ನಮ್ಮ ರಾಜ್ಯದ ವನ್ಯಜೀವಿ ಸಂರಕ್ಷಣೆ ಕಾರ್ಯಕ್ರಮಗಳಲ್ಲಿ ಅದರಲ್ಲೂ ಅರಣ್ಯ ಇಲಾಖೆಯ ಎಲ್ಲಾ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ಜೀವ ವೈವಿಧ್ಯತೆ ಸಂರಕ್ಷಣೆ ಹಾಗೂ ಪರಿಸರ ಸಂರಕ್ಷಣೆಗೆ ಪೂರಕವಾದಂತಹ ಕಾರ್ಯಕ್ರಮಗಳಲ್ಲಿ ತೊಡಗಿಸಿ ಕೊಂಡಿರುತ್ತಾರೆ. ಇವರ ಅತ್ಯುತ್ತಮ ಸಾಧನೆ ಎಂದರೆ "ರಾಜ್ಯದಲ್ಲಿ ಮಾನವ ಮತ್ತು ಆನೆ ಸಂಘರ್ಷದಂತಹ ಅನೇಕ ಕ್ಲಿಷ್ಟಕರವಾದಂತಹ ವಿಷಯಗಳಲ್ಲಿ ಅರಣ್ಯ ಇಲಾಖೆ ಹಾಗೂ ಸಾರ್ವಜನಿಕರೊಂದಿಗೆ ಕೆಲಸ ಮಾಡಿರುವುದು" ಇವರ ಪರಿಸರ ಸಂರಕ್ಷಣೆಗೆ ಪೂರಕವಾದ ಕೆಲಸ ಕಾರ್ಯಗಳನ್ನು ಗುರುತಿಸಿ ಅನೇಕ ಸಂಸ್ಥೆಗಳಿಂದ ವಿವಿಧ ಪ್ರಶಸ್ತಿಗಳನ್ನು ನೀಡಲಾಗಿರುತ್ತದೆ. ಇವರ ಈ ಮೇಲಿನ ಸೇವೆಯನ್ನು ಗುರುತಿಸಿ ಮತ್ತಷ್ಟು ಪರಿಸರ ಸಂರಕ್ಷಣೆ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವಂತೆ ಉತ್ತೇಜನ ನೀಡುವ ದೃಷ್ಟಿಯಿಂದ ಇವರಿಗೆ "ರಾಜ್ಯ ಪರಿಸರ ಪ್ರಶಸ್ತಿ" ನೀಡುವುದು ಸೂಕ್ತವೆಂದು ತೀರ್ಮಾನಿಸಲಾಯಿತು.

## ಸಂಸ್ಥೆಗಳ ವಿಭಾಗ

### ದಕ್ಷಿಣ ವಲಯ:-

ಕರ್ನಾಟಕ ನವೀಕರಿಸಬಹುದಾದ ಇಂಧನಗಳ ಅಭಿವೃದ್ಧಿ ನಿಗಮ (Karnataka Renewable Energy Development Corporation) ಕರ್ನಾಟಕ ನವೀಕರಿಸಬಹುದಾದ ಇಂಧನಗಳ ಅಭಿವೃದ್ಧಿ ನಿಗಮವು ಪಾವಗಡ ತಾಲ್ಲೂಕಿನಲ್ಲಿ 13,000 ಎಕರೆ ಪ್ರದೇಶದಲ್ಲಿ ಸೋಲಾರ್ ಪಾರ್ಕ್ ನಿರ್ಮಿಸಿದ್ದು, 2,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲು ಘಟಕಗಳನ್ನು ಸ್ಥಾಪಿಸಲಾಗಿದೆ. ಈ ಘಟಕಕ್ಕೆ "ಶಕ್ತಿಸ್ಥಳ" ಎಂದು ಹೆಸರಿಸಲಾಗಿದೆ. ಇದೊಂದು ರಾಷ್ಟ್ರ ಮಟ್ಟದಲ್ಲಿ ಅಲ್ಲದೇ ಏಷ್ಯಾದಲ್ಲಿ ಅತೀ ದೊಡ್ಡ ಸ್ಥಾವರಗಳಲ್ಲಿ ಒಂದಾಗಿರುತ್ತದೆ. ಇಂತಹ ಸೋಲಾರ್ ಸ್ಥಾವರಗಳಲ್ಲಿ ಪರಿಸರಕ್ಕೆ ಧಕ್ಕೆ ತರದ ಹಾಗೇ ಪರಿಸರ ಸ್ನೇಹಿ ವಿದ್ಯುತ್ ಉತ್ಪಾದನೆಯನ್ನು ಮಾಡುವ ಘಟಕ ಸ್ಥಾಪನೆ ಮಾಡಿರುವ ಕರ್ನಾಟಕ ನವೀಕರಿಸ ಬಹುದಾದ ಇಂಧನಗಳ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳನ್ನು ಗುರುತಿಸಿ ರಾಜ್ಯ ಪರಿಸರ ಪ್ರಶಸ್ತಿ ನೀಡಲಾಗಿರುತ್ತದೆ.

### ಮಲೆನಾಡು/ಕರಾವಳಿ ವಲಯ:-

ಜಿಲ್ಲಾ ಪಂಚಾಯತಿ ಉಡುಪಿಗೆ ತ್ಯಾಜ್ಯ ನಿರ್ವಹಣೆಯ ಸಮಸ್ಯೆಯನ್ನು ಬಗೆಹರಿಸುವ ಉದ್ದೇಶದಿಂದ "ಉಡುಪಿ ಸ್ವಚ್ಛ ಮಿಷನ್" ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದ್ದು, ಈ ಕಾರ್ಯಕ್ರಮದಡಿ ತ್ಯಾಜ್ಯವನ್ನು ಸಂಪನ್ಮೂಲವಾಗಿ ಪರಿವರ್ತಿಸುವ ಗುರಿ ಹೊಂದಲಾಗಿದೆ. ಇದಕ್ಕಾಗಿ ಘನ ಮತ್ತು ದ್ರವ ಸಂಪನ್ಮೂಲ ನಿರ್ವಹಣಾ (SLRM) ಚಟುವಟಿಕೆಯನ್ನು ವಿವಿಧ ಗ್ರಾಮ ಪಂಚಾಯತಿಗಳಲ್ಲಿ ಪ್ರಾರಂಭಿಸಲಾಗಿದ್ದು, ಆಯಾಯ ಗ್ರಾಮ ಪಂಚಾಯತಿಗಳಲ್ಲಿ ಉತ್ಪತ್ತಿಯಾದ ಸಾವಯವ ಉತ್ಪನ್ನಗಳನ್ನು SLRM ಮಾರ್ಕೆಟಿಂಗ್ ವಿಭಾಗದ ಮೂಲಕ ಮಾರಾಟ ಮಾಡಲಾಗುತ್ತಿದೆ ಹಾಗೂ ಸಾವಯವ ಅಲ್ಲದ ಉತ್ಪನ್ನಗಳನ್ನು 3ನೇ ಹಂತದ ಕೇಂದ್ರಕ್ಕೆ ವರ್ಗಾಯಿಸಿ ಅಲ್ಲಿ ವಿಂಗಡಣೆ ಮಾಡಿದ ನಂತರ ಅದನ್ನು ಮಾರಾಟ ಮಾಡಲು ಕ್ರಮವಹಿಸಲಾಗುತ್ತಿದೆ. ಕಳೆದ 05 ವರ್ಷದಿಂದ ಜಿ.ಪಂ ನ ಯಾವುದೇ ಸಭೆಗಳಲ್ಲಿ ನೀರು, ಉಪಾಹಾರ, ಊಟ ಪೂರೈಕೆಗೆ ಪ್ಲಾಸ್ಟಿಕ್ ಬಾಟಲ್, ಲೋಟ, ಪ್ಲೇಟ್ ಇತ್ಯಾದಿಗಳನ್ನು ಬಳಸುತ್ತಿಲ್ಲ. ಬದಲಾಗಿ ಸ್ಟೀಲ್ ಲೋಟ ಹಾಗೂ ತಟ್ಟೆಗಳನ್ನು ಬಳಸಲಾಗುತ್ತಿದೆ. ಮುಂದುವರೆದು ಜಿಲ್ಲಾ ಪಂಚಾಯತ್ ಸಭೆಗಳಲ್ಲಿ ಬಟ್ಟೆ ಬ್ಯಾನರ್/ಡಿಜಿಟಲ್ ಬ್ಯಾನರ್‌ಗಳನ್ನು ಬಳಸಲಾಗುತ್ತಿದೆ ಹಾಗೂ ಮದುವೆ ಇನ್ನಿತರ ಸಮಾರಂಭಗಳಲ್ಲಿ ಹಸಿರು ಶಿಷ್ಟಾಚಾರ ಪಾಲಿಸುವವರಿಗೆ ಜಿಲ್ಲಾಧಿಕಾರಿಗಳ ಕಛೇರಿಯಿಂದ ಅಭಿನಂದನಾ ಪತ್ರ ನೀಡಲಾಗಿದೆ.

### ಉತ್ತರ ವಲಯ:-

ಜಿಲ್ಲಾ ಪಂಚಾಯತಿ, ಹಾವೇರಿ ಜಿಲ್ಲೆ, ಹಾವೇರಿ ಸ್ವಚ್ಛ ಭಾರತ್ ಮಿಷನ್ ಅಭಿಯಾನದ ಅಡಿಯಲ್ಲಿ ಹಾವೇರಿ ಜಿಲ್ಲೆಯು ಸಂಪೂರ್ಣವಾಗಿ "ಬಯಲು ಶೌಚಮುಕ್ತ" ಜಿಲ್ಲೆಯನ್ನಾಗಿಸಿರುವುದನ್ನು ಪರಿಗಣಿಸಿ ರಾಜ್ಯ ಪರಿಸರ ಪ್ರಶಸ್ತಿ ನೀಡಲಾಗಿದೆ. ■

ಲೇಖನ

ಗ್ರಾಮೀಣ ಕುಡಿಯುವ ನೀರು ಮತ್ತು
ನೈರ್ಮಲ್ಯ ಇಲಾಖೆ
ಕಾವೇರಿ ಭವನ, ಬೆಂಗಳೂರು


# "ಜಂತುಹುಳು ನಿವಾರಣೆ"

ರಾಜ್ಯದಲ್ಲಿ 20 ಜಿಲ್ಲೆಗಳು ಬಯಲು ಬಹಿರ್ದೆಸೆ ಮುಕ್ತವಾಗಿದ್ದು, ಇನ್ನುಳಿದ ಜಿಲ್ಲೆಗಳು ಬಯಲು ಬಹಿರ್ದೆಸೆ ಮುಕ್ತವಾಗುವತ್ತ ದಾಪುಗಾಲಿಟ್ಟಿದೆ. ಬಯಲು ಬಹಿರ್ದೆಸೆಯಿಂದ ಗ್ರಾಮೀಣ ಪ್ರದೇಶಗಳಲ್ಲಿನ ಜನತೆ ಹಲವು ರೋಗ ರುಜಿನಗಳಿಂದ ಬಳಲುತ್ತಿದ್ದು, ಇವುಗಳಲ್ಲಿ ಜಂತು ಹುಳು ಸೋಂಕು ಪ್ರಮುಖವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಹಿಂದೆಂದಿಗಿಂತಲೂ ಸರ್ಕಾರದಿಂದ ನೀಡುತ್ತಿರುವ ಶೌಚಾಲಯಗಳನ್ನು ಕಟ್ಟಿಸಿ ಬಳಸುವುದು ಅತ್ಯವಶ್ಯಕವಾಗಿರುತ್ತದೆ.

ಈ ನಿಟ್ಟಿನಲ್ಲಿ ಜಂತು ಹುಳು ನಿವಾರಣೆಗೆ 1–19 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಜಂತುಹುಳು ನಾಶಕ ಮಾತ್ರೆಯನ್ನು ಶಾಲೆಗಳು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ 10 ಆಗಸ್ಟ್ 2018 ರಂದು ಆರೋಗ್ಯ ಇಲಾಖೆವತಿಯಿಂದ ಉಚಿತವಾಗಿ ನೀಡಲಾಗುತ್ತದೆ. ರಾಷ್ಟೀಯ ಜಂತುಹುಳು ನಿವಾರಣ ದಿನದಂದು ಜಂತು ಹುಳು ನಾಶಕ ಮಾತ್ರೆ ನೀಡದೆ ಬಾಕಿ (Missed children) ಇರುವ ಮಕ್ಕಳಿಗೆ 17 ಆಗಸ್ಟ್ 2018 ರಂದು "ನಿರ್ಮೂಲನಾ ದಿನದಂದು" (Mop up Day) ಈ ಮಾತ್ರೆಯನ್ನು ಕಡ್ಡಾಯವಾಗಿ ನೀಡಲಾಗುವುದು. ಶಾಲೆ / ಕಾಲೇಜುಗಳಲ್ಲಿ ದಾಖಲಾಗದ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಜಂತು ಹುಳು ನಾಶಕ ಮಾತ್ರೆಯನ್ನು ಅಂಗನವಾಡಿ ಕೇಂದ್ರಗಳಲ್ಲಿ ನೀಡಲಾಗುವುದು.

## ಜಂತುಹುಳುಗಳ ವಿಧಗಳು

**ಹುಳುಗಳು ಮಾನವನ ಕರುಳಿನಿಂದ ಪೌಷ್ಟಿಕಾಂಶದ ಕೊರತೆ ಉಂಟು ಮಾಡುವ ಪರಾವಲಂಬಿಗಳು.**


ಕೊಕ್ಕೆ ಜಂತುಹುಳು(ಹುಕ್)


ನಾರು ಜಂತುಹುಳು(ವಿಪ್)


ರೌಂಡ್ ಜಂತುಹುಳು

## ಜಂತುಹುಳುಗಳು ಹೇಗೆ ಹರಡುತ್ತದೆ?

1.ಬಯಲು ಶೌಚಾಲಯದಿಂದ ಸೋಂಕುಪೀಡಿತ ಮಗುವು ಜಂತು ಹುಳುವಿನ ಮೊಟ್ಟೆಗಳನ್ನು ಹೊಂದಿರುವ ಮಲದಿಂದ ಮಣ್ಣನ್ನು ಕಲುಷಿತಗೊಳಿಸುತ್ತದೆ.



2.ಆಹಾರ ಅಥವಾ ಕೊಳಕು ಕೈಗಳ ಮೂಲಕ ದೇಹದ ಒಳಸೇರಿದ ಮೊಟ್ಟೆಗಳಿಂದ ಅಥವಾ ತ್ವಚೆಯ ಮೂಲಕ ಒಳತೂರಿದ ಮರಿಹುಳುಗಳಿಂದ ಇತರ ಮಕ್ಕಳು ಸೊಂಕುಪೀಡಿತರಾಗುತ್ತಾರೆ.

3. ಸೋಂಕುಪೀಡಿತ ಮಗುವಿನಲ್ಲಿ, ಮೊಟ್ಟೆಗಳು ಮತ್ತು ಮರಿಹುಳುಗಳು ಪ್ರೌಢಹುಳುಗಳಾಗಿ ಬೆಳವಣಿಗೆ ಹೊಂದಿ, ಮೊಟ್ಟೆಯನ್ನು ಉತ್ಪಾದಿಸುತ್ತವೆ. ಇದರಿಂದಾಗಿ ಮಗುವಿನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ.

## ಮಗುವಿನ ಆರೋಗ್ಯದ ಮೇಲೆ ಜಂತುಹುಳು ಬಾಧೆಯ ಪರಿಣಾಮಗಳು:

- ರಕ್ತಹೀನತೆ
- ಪೌಷ್ಠಿಕಾಂಶಗಳ ಕೊರತೆ
- ಹಸಿವೆಯಾಗದಿರುವುದು
- ನಿಶಕ್ತಿ ಮತ್ತು ಆತಂಕ
- ಹೊಟ್ಟೆ ನೋವು, ವಾಕರಿಕೆ, ವಾಂತಿ, ಅತಿಸಾರ
- ತೂಕ ಕಡಿಮೆಯಾಗುವುದು
- ಮಗುವಿನಲ್ಲಿ ಜಂತುಹುಳುಗಳ ಸಂಖ್ಯೆ (ತೀವ್ರತೆ) ಹೆಚ್ಚಿಗೆ ಇದ್ದಂತೆ, ಸೋಂಕಿತ ಮಗು ಹೆಚ್ಚು ಲಕ್ಷಣಗಳನ್ನು ಹೊಂದಿರುತ್ತದೆ.
- ಅಲ್ಪ ಪ್ರಮಾಣದ ಸೋಂಕನ್ನು ಹೊಂದಿರುವ ಮಕ್ಕಳು ಸಾಮಾನ್ಯವಾಗಿ ರೋಗಲಕ್ಷಣಗಳನ್ನು ಹೊಂದಿರುವುದಿಲ್ಲ.



ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಿ

## ಜಂತುಹುಳುಗಳನ್ನು ಜಂತುಹುಳು ನಾಶಕದಿಂದ ನಿವಾರಣೆ ಮಾಡುವುದರೊಂದಿಗೆ ಇತರೆ ಕ್ರಮಗಳ ಮೂಲಕವೂ ನಿಯಂತ್ರಿಸಬಹುದು:




ಶೂಗಳನ್ನು ಧರಿಸಿ



ಬಯಲಿನಲ್ಲಿ ಮಲ ವಿಸರ್ಜನೆ ಮಾಡಬೇಡಿ. ಯಾವಾಗಲೂ ಶೌಚಾಲಯವನ್ನು ಬಳಸಿ



ನಿಮ್ಮ ಕೈಗಳನ್ನು, ವಿಶೇಷವಾಗಿ ಆಹಾರ ಸೇವಿಸುವ ಮೊದಲು ಹಾಗೂ ಶೌಚಾಲಯವನ್ನು ಬಳಸಿದ ನಂತರ, ಸಾಬೂನಿನಿಂದ ತೊಳೆದುಕೊಳ್ಳಿ



ಹಣ್ಣುಗಳು ಮತ್ತು ತರಕಾರಿಗಳನ್ನು ಶುದ್ಧ ನೀರಿನಿಂದ ತೊಳೆಯಿರಿ



ಯಾವಾಗಲೂ ಶುದ್ಧ ನೀರನ್ನು ಕುಡಿಯಿರಿ ಮತ್ತು ಆಹಾರವನ್ನು ಮುಚ್ಚಿ ಇಡಿ



ನಿಮ್ಮ ಉಗುರುಗಳನ್ನು ಸ್ವಚ್ಛವಾಗಿ ಮತ್ತು ಚಿಕ್ಕದಾಗಿ ಇರಿಸಿಕೊಳ್ಳಿ

# ಮಕ್ಕಳನ್ನು ಜಂತುಹುಳು ನಿವಾರಣೆಗೊಳಪಡಿಸುವುದರ ಪ್ರಯೋಜನಗಳು

**ನೇರ ಪ್ರಯೋಜನಗಳು:**

- ರಕ್ತಹೀನತೆಯನ್ನು ನಿಯಂತ್ರಿಸುತ್ತದೆ.
- ಪೌಷ್ಟಿಕಾಂಶ ಹೀರಿಕೆಯನ್ನು ಸುಧಾರಿಸುತ್ತದೆ.

**ಪರೋಕ್ಷ ಪ್ರಯೋಜನಗಳು:**

- ಏಕಾಗ್ರತೆ, ಕಲಿಕಾ ಸಾಮರ್ಥ್ಯ ಹಾಗೂ ಶಾಲೆಗಳು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಹಾಜರಾತಿಯನ್ನು ಸುಧಾರಿಸಲು ನೆರವಾಗುತ್ತದೆ.
- ಕೆಲಸದ ಸಾಮರ್ಥ್ಯ ಹಾಗೂ ಜೀವನೋಪಾಯದ ಅವಕಾಶಗಳನ್ನು ವೃದ್ಧಿಸಲು ನೆರವಾಗುತ್ತದೆ.
- ಪರಿಸರದಲ್ಲಿ ಜಂತುಹುಳುಗಳನ್ನು ಕಡಿಮೆ ಮಾಡುವುದರ ಮೂಲಕ ಸಮೂದಾಯಕ್ಕೆ ಪ್ರಯೋಜನಕಾರಿಯಾಗಿರುತ್ತದೆ.

**ಈ ಮಾತ್ರೆಯು ಮಕ್ಕಳು ಹಾಗೂ ವಯಸ್ಕರು ಇಬ್ಬರಿಗೂ ಸುರಕ್ಷಿತವಾಗಿದೆ (ವಿಶ್ವ ಆರೋಗ್ಯ ಸಂಸ್ಥೆಯಿಂದ ಪ್ರಮಾಣೀಕರಿಸಲ್ಪಟ್ಟಿದೆ.**

- ಮಕ್ಕಳು ಕೆಲವೊಮ್ಮೆ ವಾಕರಿಕೆ, ಸೌಮ್ಯ ಹೊಟ್ಟೆ ನೋವು, ವಾಂತಿ, ಅತಿಸಾರ ಮತ್ತು ಬಳಲಿಕೆಯಂಥ ಸೌಮ್ಯ ಲಕ್ಷಣಗಳನ್ನು ತೋರಿಸುತ್ತಾರೆ. ಅವರು ಜಂತುಹುಳುಗಳನ್ನು ಹೊಂದಿದ್ದಲ್ಲಿ ಇವುಗಳನ್ನು ನಿರೀಕ್ಷಿಸಬಹುದು. ದಯವಿಟ್ಟು ಆತಂಕಿತರಾಗಬೇಡಿ. ಪ್ರತಿಕೂಲ ಘಟನೆ ನಿರ್ವಹಣೆಯ ಪ್ರೊಟೊಕಾಲ್ ಅನ್ನು ಅನುಸರಿಸಿ.
- ಯಾವ ಪ್ರತಿಕೂಲ ಘಟನೆಗಳೆ ಆಗಲಿ ತಾತ್ಕಾಲಿಕವಾಗಿರುತ್ತದೆ ಮತ್ತು ಸಾಮಾನ್ಯವಾಗಿ ಅಂಗನವಾಡಿ ಕೇಂದ್ರಗಳಲ್ಲಿ ಸುಲಭವಾಗಿ ನಿರ್ವಹಿಸಬಹುದಾಗಿರುತ್ತದೆ.
- ಪ್ರತಿಕೂಲ ಘಟನೆ ಸಂಭವಿಸಿದ ಸಂದರ್ಭದಲ್ಲಿ, ಮಗುವು ಒಂದು ಮುಕ್ತವಾದ, ನೆರಳಿರುವ ಪ್ರದೇಶದಲ್ಲಿ ಮಲಗುವಂತೆ ಮಾಡಿ ಹಾಗೂ ಮಗುವಿಗೆ ಕುಡಿಯಲು ನೀರು ಕೊಡಿ.
- ವೈದ್ಯಕೀಯ ನೆರವಿಗಾಗಿ ಉಚಿತ ಆರೋಗ್ಯ ಸಹಾಯವಾಣಿ 104ನ್ನು ಸಂಪರ್ಕಿಸಿ.

**ನಿಮ್ಮ ಪಾತ್ರಗಳು:**

- ರಾಷ್ಟ್ರೀಯ ಜಂತುಹುಳು ನಿವಾರಣ ದಿನದ ಬಗ್ಗೆ ಮಕ್ಕಳು, ಪಾಲಕರು ಹಾಗೂ ಸಮುದಾಯದ ಸದಸ್ಯರಲ್ಲಿ ಜಾಗೃತಿಯನ್ನು ಮೂಡಿಸಿ.
- ಬೆಳಗಿನ ಪ್ರಾರ್ಥನೆಯಲ್ಲಿ ಹಾಗೂ ತರಗತಿಯಲ್ಲಿ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನದ ಮಕ್ಕಳಿಗೆ ಮಾಹಿತಿ ನೀಡಿ.
- ಗರಿಷ್ಠ ಮಟ್ಟದ ಹಾಜರಾತಿ ಇರುವಂತೆ ನೋಡಿಕೊಳ್ಳಲು ರಾಷ್ಟ್ರೀಯ ಜಂತುಹುಳು ನಿವಾರಣಾ ದಿನದ ದಿನಾಂಕದ ಬಗ್ಗೆ ಪಾಲಕರಿಗೆ ಮಾಹಿತಿ ನೀಡಿ.
- ಪೋಸ್ಟರ್‌ಗಳು, ಬ್ಯಾನರ್‌ಗಳು ಮತ್ತು ಇತರ ಬಿತ್ತಿಪತ್ರಗಳನ್ನು ಗರಿಷ್ಠ ಮಟ್ಟದ ನೋಟವನ್ನು ಒದಗಿಸುವಂತೆ ಪ್ರದರ್ಶಿಸಿ.
- ರಾಷ್ಟ್ರೀಯ ಜಂತುಹುಳು ನಿವಾರಣಾ ದಿನದಂದು ಜಂತು ಹುಳು ನಾಶಕ ಮಾತ್ರೆಯನ್ನು ಪಡೆದುಕೊಂಡಿಲ್ಲದ ಎಲ್ಲಾ ಮಕ್ಕಳನ್ನು ನಿರ್ಮೂಲನಾ ದಿನದಂದು ಶಾಲೆಗೆ / ಅಂಗನವಾಡಿ ಕರೆತಂದು ಮಾತ್ರೆಗಳನ್ನು ಸೇವಿಸುವುದನ್ನು ಖಚಿತಪಡಿಸಿಕೊಳ್ಳಿ.
- ಮುಂದಿನ ಜಂತು ಹುಳು ಸೋಂಕನ್ನು ತಡೆಗಟ್ಟಲು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವಂತೆ ಪಾಲಕರು ಹಾಗೂ ಮಕ್ಕಳನ್ನು ಪ್ರೋತ್ಸಾಹಿಸಿ.
- ಮಕ್ಕಳಿಗೆ ಮಾತ್ರೆಯನ್ನು ಬಲವಂತದಿಂದ ನೀಡಬೇಡಿ.
- 1–2 ವರ್ಷದ ಮಕ್ಕಳಿಗೆ ಅರ್ಧ ಮಾತ್ರೆ (200mg) ಹಾಗೂ 6–19 ವರ್ಷ ವಯಸ್ಸಿನ ಮಕ್ಕಳಿಗೆ ಒಂದು ಸಂಪೂರ್ಣ ಮಾತ್ರೆಯನ್ನು (400mg) ನೀಡಬೇಕು.
- ಮಾತ್ರೆಯನ್ನು ನುಂಗಬಾರದು ಹೊರತಾಗಿ ನಿಧಾನವಾಗಿ ಅಗಿಯುವಂತೆ/ ಚೀಪೂವಂತೆ ಮಕ್ಕಳಿಗೆ ಹೇಳಿ. ಕುಡಿಯುವ ನೀರು ಲಭ್ಯವಿರುವಂತೆ ನೋಡಿಕೊಳ್ಳಿ.

ವರದಿ




ಪುಷ್ಪ ಎಂ.

ಪಂಚಾಯತಿ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯತು ಬೋಳಂತೂರು


**ಬೋಳಂತೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಟ್ಟಡಗಳ ಸಂಖ್ಯೆ 1098 ಆಗಿರುತ್ತದೆ. ಅದರಂತೆ ಗ್ರಾಮ ಪಂಚಾಯತಿ ಸಿಬ್ಬಂದಿಗಳ ಮೂಲಕ ಎಲ್ಲಾ ಕಟ್ಟಡಗಳ ತೆರಿಗೆಯನ್ನು ವಸೂಲಿ ಮಾಡಲಾಗುತ್ತದೆ. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಸುಸಜ್ಜಿತ ಹೊಸ ಗ್ರಾಮ ಪಂಚಾಯತಿ ಕಟ್ಟಡವನ್ನು ನಿರ್ಮಾಣ ಮಾಡಲಾಗಿದೆ ಹಾಗೂ ಪೀಠೋಪಕರಣಗಳನ್ನು ಅಳವಡಿಸಲಾಗಿದೆ.**

# ನಾನಾಜಿ ದೇಶ್‌ಮುಖ್ ಗೌರವ್ ಪುರಸ್ಕಾರ

ಕರಾವಳಿ ತೀರದ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ವೀರಕಂಭ ಗ್ರಾಮದಿಂದ 2015-16ನೇ ಸಾಲಿನಲ್ಲಿ ಬೇರ್ಪಟ್ಟು ಬೋಳಂತೂರು ಹೊಸ ಗ್ರಾಮ ಪಂಚಾಯತಾಗಿ ಸೃಜನೆಗೊಂಡಿತ್ತು. ಇದು ಬೆಟ್ಟ-ಗುಡ್ಡ ಪ್ರದೇಶಗಳಿಂದ ಆವರಿಸಿ ಕೃಷಿ ಭೂಮಿಯನ್ನು ಒಳಗೊಂಡಿದ್ದು, 12010.43 ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದ್ದು, ಸುಮಾರು 4225 ಜನಸಂಖ್ಯೆಯಲ್ಲಿ 2152 ಪುರುಷರು 2073 ಸ್ತ್ರೀಯರು ವಾಸವಿದ್ದು, ಬೋಳಂತೂರು ಗ್ರಾಮದಲ್ಲಿ 3 ವಾರ್ಡ್‌ಗಳಿದ್ದು 11 ಚುನಾಯಿತ ಸದಸ್ಯರಿದ್ದಾರೆ.

ಅತ್ಯಧಿಕ ಕೃಷಿಕರನ್ನು ಹೊಂದಿರುವ ಈ ಪ್ರದೇಶ ಭತ್ತ ಅಡಿಕೆ, ತೆಂಗು ಕೊಕ್ಕೊ, ಗೇರು ಬೀಜ ಇನ್ನಿತರ ವಾಣಿಜ್ಯ ಬೆಳೆಗಳಾಗಿದ್ದು, ನೀರಾವರಿಗಾಗಿ ಬಾವಿ, ಕೆರೆ ತೋಡುಗಳನ್ನು ಅವಲಂಬಿಸಿದ್ದು, ಹಲವರು ಕೊಳವೆ ಬಾವಿಗಳನ್ನು ಹೊಂದಿರುತ್ತಾರೆ. ಬೋಳಂತೂರು ಗ್ರಾಮದಲ್ಲಿ ಪುರಾತನ ಇತಿಹಾಸ ಇರುವ ಕುರಿಯಾಡಿತ್ತಾಯಿ ಮೂವರು ದೈವಂಗಳು ದೈವಸ್ಥಾನ. ಸುರಿಬೈಲು ಅಂಗಣೆಮಾರು ಶ್ರೀ.ದುರ್ಗಾಪರಮೇಶ್ವರಿ ದೇವಸ್ಥಾನ ಇರುವುದು ವೈಶಿಷ್ಟವಾಗಿದೆ, ರಹ್ಮಾನಿಯಾ ಜುಮಾ ಮಸೀದಿ, ಬದ್ರಿಯಾ ಜುಮಾ ಮಸೀದಿ ಹಾಗೂ ದಾರುಲ್ ಅಶ್ ಅರಿಯ ಜುಮಾ ಮಸೀದಿ ಹೊಂದಿರುತ್ತದೆ.



3 ಪರಿಶಿಷ್ಟ ಜಾತಿ ಪಂಗಡದ ಕಾಲನಿಗಳಿದ್ದು ಹಿಂದೂ ಮುಸ್ಲಿಂ ಹಾಗೂ ಕ್ರೀಸ್ಚನ್ ಸಮೂದಾಯದವರು ತುಂಬಾ ಅನ್ಯೋನ್ಯತೆಯನ್ನು ಹೊಂದಿರುತ್ತಾರೆ. ಶ್ರೀ ಕುರಿಯಾಡಿತ್ತಾಯಿ ಮೂವರು ದೈವಂಗಳ ವರ್ಷಂಪ್ರತಿ 4 ದಿನಗಳ ಜಾತ್ರೋತ್ಸವ ನಡೆಯುತ್ತದೆ, ಶ್ರೀ ಮಹಮ್ಮಾಯಿ ದೇವರ ವರ್ಷಂಪ್ರತಿ ಪೂಜೆ ನಡೆಯುತ್ತದೆ. ಗ್ರಾಮದಲ್ಲಿ 7 ಅಂಗನವಾಡಿ ಕೇಂದ್ರ, 1 ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಅಂಚೆ ಕಛೇರಿ ಹಾಲು.ಉತ್ಪಾದಕರ ಸಂಘ ಆರೆಬಿಕ್ ಮದರಸ, ರೈತ ಸೇವಾ ಸಹಕಾರಿ ಬ್ಯಾಂಕ್ ಇದೆ.

2016-17 ನೇ ಸಾಲಿನಲ್ಲಿ ಗ್ರಾಮ ಸಭೆಯನ್ನು ಸಮರ್ಪಕವಾಗಿ ನಡೆಸಿ ಹಾಗೂ ಕಡತಗಳ ನಿರ್ವಹಣೆಗಾಗಿ ನಾನಾಜಿ ದೇಶ್ ಮುಖ್ ಗೌರವ್ ಗ್ರಾಮ ಸಭಾ ಪುರಸ್ಕಾರವನ್ನು ಮುಡಿಗೇರಿಸಿಕೊಂಡಿದೆ.



## ಸಂಪನ್ಮೂಲ ಕ್ರೋಢೀಕರಣ

ಬೋಳಂತೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಟ್ಟಡಗಳ ಸಂಖ್ಯೆ 1098 ಆಗಿರುತ್ತದೆ. ಅದರಂತೆ ಗ್ರಾಮ ಪಂಚಾಯತಿ ಸಿಬ್ಬಂದಿಗಳ ಮೂಲಕ ಎಲ್ಲಾ ಕಟ್ಟಡಗಳ ತೆರಿಗೆಯನ್ನು ವಸೂಲಿ ಮಾಡಲಾಗುತ್ತದೆ. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಸುಸಜ್ಜಿತ ಹೊಸ ಗ್ರಾಮ ಪಂಚಾಯತಿ ಕಟ್ಟಡವನ್ನು ನಿರ್ಮಾಣ ಮಾಡಲಾಗಿದೆ ಹಾಗೂ ಪೀಠೋಪಕರಣಗಳನ್ನು ಅಳವಡಿಸಲಾಗಿದೆ.

## ಕುಡಿಯುವ ನೀರು

ಬೋಳಂತೂರು ಗ್ರಾಮದಲ್ಲಿ ಹೆಚ್ಚಿನ ಮನೆಗಳಲ್ಲಿ ಕುಡಿಯುವ ನೀರಿಗಾಗಿ ತೆರೆದ ಬಾವಿ, ಕೊಳವೆ ಬಾವಿಗಳಿದ್ದು, ಅಗತ್ಯವಿರುವ ಎಲ್ಲಾ ಮನೆಗಳಿಗೆ ಗ್ರಾಮ ಪಂಚಾಯತಿನಿಂದ ಕುಡಿಯುವ ನೀರಿನ ಸಂಪರ್ಕವನ್ನು ಒದಗಿಸಲಾಗಿದೆ. ಎಲ್ಲಾ ಕುಡಿಯುವ ನೀರಿನ ಸಂಪರ್ಕಗಳಿಗೆ ಕಡ್ಡಾಯವಾಗಿ ಮೀಟರ್ ಅಳವಡಿಸಲಾಗಿದ್ದು, ಪ್ರತಿ ತಿಂಗಳು ಮೀಟರ್ ಮಾಪನ ಮಾಡಿ ನೀರಿನ ತೆರಿಗೆ ಸಂಗ್ರಹಣ ಮಾಡಲಾಗುವುದು.

## ಗ್ರಾಮ ಸಭೆಗಳು

ಬೋಳಂತೂರು ಗ್ರಾಮ ಪಂಚಾಯತಿಯಲ್ಲಿ ಪ್ರತಿ ತಿಂಗಳು ಸಾಮಾನ್ಯ ಸಭೆಗಳನ್ನು ನಡೆಸಲಾಗುತ್ತದೆ. ಎಲ್ಲಾ ಸದಸ್ಯರು ಸಾಮಾನ್ಯ ಸಭೆಗೆ ಭಾಗವಹಿಸಿ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಾರೆ. ವರ್ಷದಲ್ಲಿ 2 ಗ್ರಾಮ ಸಭೆಗಳು ಪಂಚಾಯತಿಯಲ್ಲಿ ನಡೆದಿದ್ದು ಎಲ್ಲಾ ಇಲಾಖಾಧಿಕಾರಿಗಳು, ಗ್ರಾಮ ಪಂಚಾಯತಿ ಸದಸ್ಯರು ಹಾಗೂ ಎಲ್ಲಾ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಚರ್ಚೆಯಲ್ಲಿ ಪಾಲ್ಗೊಂಡಿರುತ್ತಾರೆ. ಕರಪತ್ರ, ಟಾಂಟಾಂ, ಪತ್ರಿಕಾ ಪ್ರಕಟಣೆ, ದೂರವಾಣಿ ಮುಖಾಂತರ ಹಾಗೂ ವಾಟ್ಸ್‌ಆಫ್ ಮೂಲಕ ಸಾರ್ವಜನಿಕರಿಗೆ ಮಾಹಿತಿಯನ್ನು ನೀಡಲಾಗುತ್ತದೆ. ಅದರಂತೆ ಮಕ್ಕಳ ಗ್ರಾಮ ಸಭೆ, ಮಹಿಳಾ ಗ್ರಾಮ ಸಭೆ, ಸಾಮಾಜಿಕ ಪರಿಶೋಧನ ಗ್ರಾಮ ಸಭೆ, ಕೋರ್ ಕಮಿಟಿ ಗ್ರಾಮ ಸಭೆ ಹಾಗೂ ಕೆಲವು ವಿಶೇಷ ಗ್ರಾಮ ಸಭೆಗಳನ್ನು ಸಮರ್ಪಕವಾಗಿ ನಡೆಸಲಾಗಿದ್ದು, 2016–17ನೇ ಸಾಲಿನಲ್ಲಿ ನಾನಾಜಿ ದೇಶ್ ಮುಖ್ ಗೌರವ್ ಗ್ರಾಮ ಸಭಾ ಪುರಸ್ಕಾರವನ್ನು ಪಡೆದುಕೊಂಡಿರುತ್ತದೆ.

ಪಂಚಾಯತ್ ರಾಜ್ ಮಂತ್ರಾಲಯವು ಸಿದ್ಧಪಡಿಸಿರುವ ಅಂತರ್ಜಾಲದಲ್ಲಿ ಅಳವಡಿಸಲಾಗಿರುವ ಪ್ರಶ್ನಾವಳಿಗಳಿಗೆ ಮಾಹಿತಿಯನ್ನು ಕ್ರೂಢೀಕರಿಸಿ, ನಾನಾಜಿ ದೇಶ್‌ಮುಖ್ ಗೌರವ್ ಗ್ರಾಮ ಸಭಾ ಪುರಸ್ಕಾರಕ್ಕೆ ಪ್ರಶ್ನಾವಳಿಗಳನ್ನು ಭರ್ತಿಗೊಳಿಸಿ ಪ್ರಸ್ತಾವನೆ ಸಲ್ಲಿಸಲಾಯಿತು. ಗ್ರಾಮ ಪಂಚಾಯತಿಯಲ್ಲಿ 2016–17ನೇ ಸಾಲಿನಲ್ಲಿ ನಡೆಸಲಾದ ಸಾಮಾನ್ಯ ಸಭೆ, ವಾರ್ಡ್ ಸಭೆ, ಗ್ರಾಮ ಸಭೆ, ವಿಶೇಷ ಗ್ರಾಮ ಸಭೆ, ಮಹಿಳಾ ಗ್ರಾಮ ಸಭೆ ಮಕ್ಕಳ ಗ್ರಾಮ ಸಭೆ, ಪ.ಜಾತಿ/ಪ.ಪಂಗಡ ಗ್ರಾಮ ಸಭೆ ಹಾಗೂ ಸಾಮಾಜಿಕ ಪರಿಶೋಧನ ಗ್ರಾಮ ಸಭೆ ನಡೆಸಿದ ವಿವರ ಹಾಗೂ ಪ.ಜಾತಿ/ಪ.ಪಂಗಡದವರು ಗ್ರಾಮ ಸಭೆಗೆ ಭಾಗವಹಿಸಿದ ವಿವರವನ್ನು ಪ್ರಶ್ನಾವಳಿಯಲ್ಲಿ ಅಳವಡಿಸಲಾಯಿತು. ಅಂತರ್ಜಾಲದ ಮೂಲಕ ಪ್ರಶ್ನಾವಳಿಗಳನ್ನು ಉತ್ತರಿಸಿದ




ಬಳಿಕ ತಾಲ್ಲೂಕು ಮಟ್ಟದಲ್ಲಿ ಪರಿಶೀಲಿಸಿದಾಗ ಬಂಟ್ವಾಳ ತಾಲೂಕಿನ 58 ಪಂಚಾಯತಿಗಳಲ್ಲಿ ನಮ್ಮ ಪಂಚಾಯತಿ ಅತ್ಯಧಿಕ ಅಂಕಗಳನ್ನು ಪಡೆದು ಆಯ್ಕೆಗೊಂಡಿತು. ಜಿಲ್ಲಾ ಮಟ್ಟದಲ್ಲಿ ಪರಿಶೀಲಿಸಿದಾಗ ಕರ್ನಾಟಕ ರಾಜ್ಯದಲ್ಲಿ ಆಯ್ಕೆಗೊಂಡ ಮೂರು ಪಂಚಾಯತಿಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೋಳಂತೂರು ಗ್ರಾಮ ಪಂಚಾಯತಿ ಕೂಡ ಒಂದಾಗಿದೆ. ದಿನಾಂಕ 23–10–2017 ರಂದು ರಾಜ್ಯ ಸರಕಾರದಿಂದ ನಿಯೋಜಿಸಲ್ಪಟ್ಟ ರಾಜ್ಯ ತಂಡದ ಶ್ರೀ. ಎಂ.ಕೆ.ಕೆಂಪಗೌಡ, ನಿರ್ದೇಶಕರು ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ ಇವರ ನೇತೃತ್ವದಲ್ಲಿ ಗ್ರಾಮ ಪಂಚಾಯತಿಗೆ ಬೇಟಿ ನೀಡಿ ನೂತನವಾಗಿ ನಿರ್ಮಿಸಿರುವ ಗ್ರಾಮ ಪಂಚಾಯತಿ ಕಟ್ಟಡದ ಬಗ್ಗೆ ಪ್ರಶಂಸೆಯನ್ನು ವ್ಯಕ್ತಪಡಿಸಿದರು.

ದಿನಾಂಕ:23–01–2018 ರಂದು ಕೇಂದ್ರ ಸರಕಾರದಿಂದ ನಿಯೋಜಿಸಲ್ಪಟ್ಟ ಕೇಂದ್ರ ತಂಡದ ಪ್ರೊ.ಕೆ.ಜೆ.ಕುರಿಯನ್ ಹಾಗೂ ಪ್ರೊ.ಅಲೆಕ್ಸಾಂಡರ್.ಇ.ಕೆ ಅಜಟಣಡಿಜ ಜಿಠಡಿ ಖಣಡಿಚಿಟ ಒಚಿಟಿಚಿರಿಜಟಜಟಣ (ಅಖಒ), ಏಠಣಣಚಿಥಿಚಿಟ, ಏಜಡಿಚಿಟಚಿ. ಇವರ ನೇತ್ರತ್ವದ ತಂಡ ಗ್ರಾಮ ಪಂಚಾಯತಿಗೆ ಬೇಟಿ ನೀಡಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರೊಂದಿಗೆ ಸಂವಾದ ನಡೆಸಿ ದಿನಾಂಕ 24–01–2018 ರಂದು ಗ್ರಾಮ ಪಂಚಾಯತಿ ವ್ಯಾಪ್ತಿಯ ಅಂಗನವಾಡಿ ಕೇಂದ್ರ, ಶಾಲೆ, ಎರೆಹುಳ ಗೊಬ್ಬರ ಘಟಕ, ಸ್ತ್ರೀ ಶಕ್ತಿ ಗುಂಪಿನ ಮಹಿಳೆಯರೊಂದಿಗೆ ಚರ್ಚಿಸಿದರು ಹಾಗೂ ಗ್ರಾಮಸ್ಥರ ಮನೆಗಳಿಗೆ ಬೇಟಿ ನೀಡಿ ಶೌಚಾಲಯ ವ್ಯವಸ್ಥೆಯನ್ನು ಪರಿಶೀಲಿಸಿ ನೀರಿನ ಮೀಟರ್ ಬಗ್ಗೆ ಚರ್ಚೆ ನಡೆಸಿ, ಹೊಸದಾಗಿ ಸೃಜನೆಗೊಂಡು ಎರಡು ವರ್ಷಗಳಲ್ಲಿ ಸಾಧಿಸಿದ ಗ್ರಾಮ ಪಂಚಾಯತಿಯ ಕಾರ್ಯವೈಖರಿಗಳ ಬಗ್ಗೆ ಪ್ರಶಂಸೆಯನ್ನು ವ್ಯಕ್ತಪಡಿಸಿ ನಾನಾಜಿ ದೇಶ್ ಮುಖ್ ಗೌರವ್ ಗ್ರಾಮ ಸಭಾ ಪುರಸ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಗ್ರಾಮ ಪಂಚಾಯತಿಗೆ ದೊರಕಿದ ಪ್ರಶಸ್ತಿಯ ದಾರಿಯು ದುರ್ಗಮವಾಗಿತ್ತು. ಕಾರ್ಯನಿರ್ವಾಹಕ ಅಧಿಕಾರಿ, ಸಹಾಯಕ ನಿರ್ದೇಶಕರು ಗ್ರಾಮೀಣ ಉದ್ಯೋಗ ಹಾಗೂ ತಾಲ್ಲೂಕು ಪಂಚಾಯತಿಯ ಎಲ್ಲಾ ಸಿಬ್ಬಂದಿ ವರ್ಗ ಹಾಗೂ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದ ಸಹಕಾರದಿಂದಾಗಿ ಪ್ರಶಸ್ತಿಯನ್ನು ಪಡೆದುಕೊಂಡಿತು.

ಈ ಪ್ರಶಸ್ತಿಯನ್ನು ದಿನಾಂಕ 24–04–2018 ರಂದು ಮಧ್ಯಪ್ರದೇಶದ ಜಬಲ್‌ಪುರದಲ್ಲಿ ನಡೆದ ಪಂಚಾಯತ್ ರಾಜ್ ದಿವಸದಂದು ಆಯೋಜಿಸಲಾದ ಪ್ರಧಾನಮಂತ್ರಿಯವರ ಕಾರ್ಯಕ್ರಮದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಪ್ರಶಸ್ತಿಯನ್ನು ಸ್ವೀಕರಿಸಿದರು.

# ಗಾಂಧಿ ಗ್ರಾಮ ಪುರಸ್ಕಾರ

ವರದಿ




ರೆಹಮತಬಾನು ಮ.ಕಿರನೂರ

ಪಂಚಾಯತಿ ಅಭಿವೃದ್ಧಿ ಅಧಿಕಾರಿ
ಬಿಂಕದಕಟ್ಟೆ ಗ್ರಾಮ ಪಂಚಾಯತಿ,
ಗದಗ್


**ಬಿಂಕದಕಟ್ಟಿ ಗ್ರಾಮದಲ್ಲಿ ವಾರ್ಡ್ ಸಭೆ, ಗ್ರಾಮ ಸಭೆ, ಮಹಿಳೆಯರ ಪ್ರತ್ಯೇಕ ವಾರ್ಡ್ ಹಾಗೂ ಗ್ರಾಮ ಸಭೆ, ಮಕ್ಕಳ ವಾರ್ಡ್ ಹಾಗೂ ಗ್ರಾಮಸಭೆ ಹಾಗೂ ಸಾಮಾನ್ಯ ಗ್ರಾಮ ಸಭೆಗಳು ಅತ್ಯಂತ ನಿಯಮಿತವಾಗಿ ಅರ್ಥಪೂರ್ಣವಾಗಿ ನಡೆಯುವುದು ಗ್ರಾಮದ ಹೆಗ್ಗಳಿಕೆಯಾಗಿದೆ.**

ಗದಗ್ ಜಿಲ್ಲಾ ಕೇಂದ್ರದಿಂದ 5 ಕಿ. ಮೀ. ಅಂತರದಲ್ಲಿರುವ ಬಿಂಕದಕಟ್ಟಿ ಪುಟ್ಟ ಗ್ರಾಮ. ಭೌಗೋಳಿಕ ವಿಸ್ತೀರ್ಣ 2194 ಎಕರೆ ಪಶ್ಚಿಮ ಘಟ್ಟಗಳ ಸಾಲಿಗೆ ಸೇರಿರುವ ಬಿಂಕದಕಟ್ಟಿ ಗುಡ್ಡ ಸೇರಿ 86.35 ಹೆಕ್ಟೇರ ಸುರಕ್ಷಿತ ಅರಣ್ಯ ಪ್ರದೇಶವಿದೆ. ಗ್ರಾಮದ ಅರಣ್ಯ ಸಮಿತಿ ಈ ಅರಣ್ಯ ಪ್ರದೇಶದ ರಕ್ಷಣೆ ಹಾಗೂ ಅಭಿವೃದ್ಧಿಗೆ ಸಮರ್ಪಿತವಾಗಿದೆ. ಬಿಂಕದಕಟ್ಟಿಯಲ್ಲಿ ಅರಣ್ಯ ಇಲಾಖೆಯ ವಲಯ ಕಾರ್ಯಾಲಯವಿರುವುದೊಂದು ವಿಶೇಷ. ಕಾರವಾರ ಗುತ್ತಿ ರಾಷ್ಟ್ರೀಯ ಹೆದ್ದಾರಿ ನಂ.63ಕ್ಕೆ ಹೊಂದಿಕೊಂಡಿರುವ ಬಿಂಕದಕಟ್ಟಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 1334 ಕುಟುಂಬಗಳಿದ್ದು 965 ಕುಟುಂಬಗಳು ಬಡತನ ರೇಖೆಗಿಂತ ಕೆಳಮಟ್ಟದಲ್ಲಿವೆ. ಪರಿಶಿಷ್ಟ ಜಾತಿ ಮತ್ತು ಪಂಗಡದ 165 ಕುಟುಂಬಗಳು ಗ್ರಾಮದಲ್ಲಿವೆ. ಗ್ರಾಮ ಪಂಚಾಯತಿಯಲ್ಲಿ ಒಟ್ಟು 14 ಸದಸ್ಯರಿದ್ದಾರೆ. ಗ್ರಾಮ ಪಂಚಾಯತಿಯು ಬಿಂಕದಕಟ್ಟಿ ಹಾಗೂ ಹಿರೇಹಂದಿಗೋಳ ಎರಡು ಗ್ರಾಮಗಳನ್ನು ಒಳಗೊಂಡಿದ್ದು, ಗ್ರಾಮದಲ್ಲಿ ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧವಾದ ಮಕ್ಕಳ ಉದ್ಯಾನವನ ಹಾಗೂ ಕಿರು ಮೃಗಾಲಯವಿದ್ದು, ಅನೇಕ ಅಭಿವೃದ್ಧಿ ಕಾರ್ಯಕ್ರಮಗಳಿಂದ ಸಮೃದ್ಧವಾದ ಬಿಂಕದಕಟ್ಟಿ ಗ್ರಾಮ ಪಂಚಾಯತಿಯು ಬಯಲು ಬಹಿರ್ದೆಸೆ ಮುಕ್ತ ಗ್ರಾಮವೆಂದು 2016-17ರಲ್ಲಿ ಗಾಂಧಿ ಗ್ರಾಮ ಪುರಸ್ಕಾರವನ್ನು ಪಡೆದುಕೊಂಡಿದೆ.

ಒಂದು ಆದರ್ಶ ಗ್ರಾಮದಲ್ಲಿ ಯಾವ ಯಾವ ಸೌಲಭ್ಯಗಳಿರಬೇಕೆಂದು ಬಯಸಬಹುದಾಗಿದೆಯೋ ಆ ಎಲ್ಲ ಸೌಲಭ್ಯಗಳನ್ನು ಬಿಂಕದಕಟ್ಟಿ ಗ್ರಾಮ ಹೊಂದಿದೆ. ಒಕ್ಕಟ್ಟು ನಾಯಕತ್ವ ಹಾಗೂ ಆದ್ಯಾತ್ಮಿಕ ಒಲವು ಹೊಂದಿರುವ ಮಾನವ ಸಂಪನ್ಮೂಲ ಹೊಂದಿರುವ ಈ ಗ್ರಾಮ ಹಿರಿಯ ಮುಖಂಡರ ಮಾರ್ಗದರ್ಶನ ಹಾಗೂ ನಾಯಕತ್ವದಲ್ಲಿ ಅತ್ಯಂತ ಪ್ರಗತಿ ಹೊಂದಿದ ಗ್ರಾಮ ಎಂಬ ಹೆಗ್ಗಳಿಕೆ ಹೊಂದಿದೆ. ಗ್ರಾಮೀಣ ಗೋದಾಮುಗಳು, ರೈತರ ಲಕ್ಷ್ಮೀ ಮಂದಿರ ಎಂದು ಸಾರುವ ಬಿಂಕದಕಟ್ಟಿ ಸಹಕಾರ ರಂಗದ ಗುದಾಮುಗಳನ್ನು ಹೊಂದಿದೆ. ರೈತ ಸೇವಾ ಸಹಕಾರಿ ಸಂಘ ಕ್ರಿಯಾಶೀಲ ವಾಗಿದೆ. ಜಾಗೃತ ಮಹಿಳೆಯರ 40 ಮಹಿಳಾ ಸ್ವಸಹಾಯ ಸಂಘಗಳಿವೆ. ಸಿಂಡಿಕೇಟ್ ಬ್ಯಾಂಕ್ ಶಾಖೆ, ಅನ್ನಭಾಗ್ಯ, ಯಶಸ್ವಿನಿ, ಆರೋಗ್ಯಶ್ರೀ, ಮನರೇಗಾ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಇಲ್ಲಿ ಜಾರಿಗೊಂಡಿದೆ. ಸರ್ವಸೌಲಭ್ಯ ಸುಸಜ್ಜಿತ ಸರಕಾರಿ ಪ್ರಾಥಮಿಕ ಶಾಲೆ, ಸಹಕಾರ ಕ್ಷೇತ್ರದ ಆಂಗ್ಲ ಮಾಧ್ಯಮ ಶಾಲೆ, ಜನಾರೋಗ್ಯ ರಕ್ಷಣೆಗಾಗಿ ಆರೋಗ್ಯ ಉಪ ಕೇಂದ್ರ ಹಾಗೂ ಪಶುವೈದ್ಯ ಚಿಕಿತ್ಸಾಲಯ ಇದೆ.



ಬಿಂಕದಕಟ್ಟಿ ಅಚ್ಚುಕಟ್ಟಾದ ಸಿಮೆಂಟ್ ರಸ್ತೆ, ಉತ್ತಮ ಚರಂಡಿ ವ್ಯವಸ್ಥೆ, ಪ್ರತಿ ಮನೆಗೆ ನಲ್ಲಿ ನೀರು ಪೂರೈಕೆ, ಶುದ್ಧ ಕುಡಿಯುವ ನೀರಿನ ಘಟಕ ಪ್ರತಿಷ್ಠಾನದಿಂದ ರೂ.2/-ಗೆ 20 ಲೀಟರ್ ನೀರು ಪೂರೈಸುತಲಿದ್ದು, ಇದೊಂದು ಲಾಭದಾಯಕ ಘಟಕವಾಗಿ

ರುವುದು ಹೆಮ್ಮೆಯ ಸಂಗತಿಯಾಗಿದೆ. ಬಿಂಕದಕಟ್ಟಿ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಗದಗ್ ಜಿಲ್ಲೆಯಲ್ಲಿ 4ನೇ ರ್‍ಯಾಂಕ್ ಹೊಂದಿದೆ.

ಬಿಂಕದಕಟ್ಟಿ ಗ್ರಾಮದಲ್ಲಿ ವಾರ್ಡ್ ಸಭೆ, ಗ್ರಾಮ ಸಭೆ, ಮಹಿಳೆಯರ ಪ್ರತ್ಯೇಕ ವಾರ್ಡ್ ಹಾಗೂ ಗ್ರಾಮ ಸಭೆ, ಮಕ್ಕಳ ವಾರ್ಡ್ ಹಾಗೂ ಗ್ರಾಮ ಸಭೆ ಹಾಗೂ ಸಾಮಾನ್ಯ ಗ್ರಾಮ ಸಭೆಗಳು ಅತ್ಯಂತ ನಿಯಮಿತವಾಗಿ ಅರ್ಥಪೂರ್ಣವಾಗಿ ನಡೆಯುವುದು ಗ್ರಾಮದ ಹೆಗ್ಗಳಿಕೆಯಾಗಿದೆ. ಈ ಗ್ರಾಮ ಸಭೆಗಳಲ್ಲಿ ಗ್ರಾಮಗಳಿಗೆ ಅವಶ್ಯಕವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಬೇಡಿಕೆಗೆ ಅನುಗುಣವಾಗಿ ಕ್ರಿಯಾ ಯೋಜನೆ ತಯಾರಿಸಿ ಆ ಕಾಮಗಾರಿಗಳ ಅನುಷ್ಠಾನಕ್ಕೆ ಶ್ರಮವಹಿಸುತ್ತಿದೆ. ಸಭೆಗಳಲ್ಲಿ ಕೇವಲ ಕಾಮಗಾರಿಗಳ ಬಗ್ಗೆ ಚರ್ಚಿಸದೇ ಶಿಕ್ಷಣ, ಉದ್ಯೋಗ, ಸರ್ಕಾರದ ವಿವಿಧ ಯೋಜನೆಗಳ ಮಾಹಿತಿಯನ್ನು ಸಹ ಜನ ಸಾಮಾನ್ಯರಿಗೆ ಮನಮುಟ್ಟುವಂತೆ ತಿಳಿಸಲಾಗುತ್ತದೆ. ಅದೇ ರೀತಿಯಾಗಿ ಗ್ರಾಮ ಪಂಚಾಯತಿಗಳಲ್ಲಿ ನಿಯಮಿತವಾಗಿ ಸಾಮಾನ್ಯ ಸಭೆಗಳನ್ನು ನಡೆಸಲಾಗುತ್ತದೆ. ಪ್ರತಿಯೊಂದು ಸಭೆಗೂ ಎಲ್ಲ ಸದಸ್ಯರು ಕಡ್ಡಾಯವಾಗಿ ಭಾಗವಹಿಸುತ್ತಾರೆ. ಅಲ್ಲಿ ಸಾರ್ವಜನಿಕ ಅರ್ಜಿಗಳ ಜೊತೆಗೆ ಶಿಕ್ಷಣ, ಆರೋಗ್ಯ, ನೈರ್ಮಲ್ಯ ವಿಷಯಗಳನ್ನು ಸಹ ಚರ್ಚಿಸಲಾಗುತ್ತದೆ. ಸ್ಥಾಯಿ ಸಮಿತಿಗಳನ್ನು, ಉಪ ಸಮಿತಿಗಳನ್ನು ರಚಿಸಿ ಅವುಗಳು ಸಹ ನಿಯಮಿತವಾಗಿ ಸಭೆ ನಡೆಸಿ ಎಲ್ಲ ಸಮಗ್ರ ವಿಷಯಗಳ ಬಗ್ಗೆ ಚರ್ಚಿಸಿ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಸಹಕರಿಸುತ್ತಿವೆ. ಮಹಿಳಾ ಸದಸ್ಯರು ಒಂದೊಂದು ಬಾಲ ವಿಕಾಸ ಸಮಿತಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮಹಿಳೆಯರ ಮತ್ತು ಮಕ್ಕಳ ಆರೋಗ್ಯ, ಶೈಕ್ಷಣಿಕ ಹಾಗೂ ಪೌಷ್ಠಿಕ ಆಹಾರದ ಬಗ್ಗೆ ಕಾಳಜಿ ವಹಿಸಿ ಅಭಿವೃದ್ಧಿಗೆ ಒತ್ತು ಕೊಡುತ್ತಾರೆ.

## ಗ್ರಾಮ ಸಭೆ, ವಾರ್ಡ್ ಸಭೆ

ಗ್ರಾಮಗಳಲ್ಲಿ ಸಾಕಷ್ಟು ಅರಿವು ಮೂಡಿಸುವ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಉದಾ:ಬಾಲ್ಯವಿವಾಹ, ಮಹಿಳಾ ಕಾನೂನು ಮತ್ತು ರಕ್ಷಣೆ, ಮಕ್ಕಳ ಮತ್ತು ಮಹಿಳೆಯರ ಪೌಷ್ಠಿಕ ಆಹಾರ, ಗ್ರಾಮಸ್ಥರ ಆರೋಗ್ಯ ಶಿಬಿರ, ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಇನ್ನು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನ ಸಾಮಾನ್ಯರಿಗೆ ಯೋಜನೆಗಳ ಅರಿವು ಮೂಡಿಸಲು ಒಳ್ಳೆಯ ವೇದಿಕೆಯನ್ನು ಒದಗಿಸುತ್ತದೆ.

ಬಿಂಕದಕಟ್ಟಿ ಗ್ರಾಮದಲ್ಲಿ ತಳಹಂತದಲ್ಲಿ ಮಾಹಿತಿ ಹರಿದು ಬರುವಂತೆ ನಿರಂತರ ಜಾಗೃತಿ ಕೆಲಸ ನಡೆದಿದೆ. ಇದರಿಂದಾಗಿ ಗ್ರಾಮಸ್ಥರ ಸಕ್ರಿಯ ಪಾಲ್ಗೊಳ್ಳುವಿಕೆ ಸಾಧ್ಯವಾಗಿದೆ. ಗ್ರಾಮದ ಸ್ವಸಹಾಯ ಸಂಘಗಳು, ಯುವಕ ಸಂಘ, ಸಹಕಾರ ಸಂಘ, ಸಂಸ್ಥೆಗಳು ಸಾಂಸ್ಕೃತಿಕ ಸಂಘಟನೆಗಳು ಹಿರಿಯರು, ಗ್ರಾಮದ ಬುದ್ದಿಜೀವಿಗಳು ಯೋಜನಾ ಪ್ರಕ್ರಿಯೆಯಲ್ಲಿ ಗ್ರಾಮದ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲಾಗಿದೆ.

ಗ್ರಾಮ ಪಂಚಾಯತಿಯಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ಕುಡಿಯುವ ನೀರು, ವಿದ್ಯುತ್, ವಸತಿ, ಸೌಲಭ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತದೆ. ನಾಗರೀಕರಿಗೆ ಸಕಾಲದಲ್ಲಿ ಸೇವೆಗಳನ್ನು ನೀಡಲಾಗುತ್ತಿದೆ. ಜನರ ಸಮಸ್ಯೆಗಳಿಗೆ ಸ್ಪಂದಿಸಲು ದೂರು ಪೆಟ್ಟಿಗೆಯನ್ನು ಇಡಲಾಗಿದೆ. ಅದರ ಜೊತೆ ದೂರು ಪುಸ್ತಕ ನಿರ್ವಹಿಸಲಾಗಿದೆ. ದೂರುಗಳನ್ನು ದಾಖಲಿಸಿದ್ದಲ್ಲಿ ಶೀಘ್ರವಾಗಿ ಪರಿಹರಿಸಲಾಗುತ್ತದೆ.

ಗ್ರಾಮ ಪಂಚಾಯತಿಯಲ್ಲಿ ಪ್ರತಿ ವರ್ಷವು ಸಾಮಾಜಿಕ ಲೆಕ್ಕ ಪರಿಶೋಧನೆ, ಜಮಾ ಬಂದಿ, ಸ್ಥಳೀಯ ಲೆಕ್ಕ ಪರಿಶೋಧನೆ ಇವುಗಳನ್ನು ತಪ್ಪದೇ ನಡೆಸಿಕೊಂಡು ಬರಲಾಗುತ್ತದೆ ಹಾಗೂ ಆಡಳಿತದ ಎಲ್ಲಾ ಕಡತಗಳ ವಹಿಗಳನ್ನು ಅಚ್ಚುಕಟ್ಟಾಗಿ ಮಾಡಲಾಗಿದೆ. ಎಲ್ಲಾ ಯೋಜನೆಗಳ ಕ್ರೀಯಾ ಯೋಜನೆಯನ್ನು ಆದ್ಯತೆ ಮೇರೆಗೆ ತಯಾರಿಸಿ ಅನುಮೋದನೆ ಪಡೆದು ಅನುಷ್ಠಾನ ಮಾಡಲಾಗುತ್ತದೆ.

ಗ್ರಾಮ ಪಂಚಾಯತಿ ಕಛೇರಿಯಲ್ಲಿ ಸಿಸಿ ಟಿವಿ, ಸೋಲಾರ ವ್ಯವಸ್ಥೆ ಅಳವಡಿಸಲಾಗಿದೆ. ಬೀದಿ ದೀಪಗಳಿಗೆ ಟೈಮರ್ ಸ್ವಿಚ್, ನೀರಿನ ಬೋರ್‌ವೆಲ್‌ಗಳಿಗೆ ಮೊಬೈಲ್ ಕಿಟ್ ಅಳವಡಿಸಿದೆ. ಇದರಿಂದ ಸ್ವಯಂ ಚಾಲಿತವಾಗಿ ಚಾಲನೆಯಾಗುವುದರಿಂದ ಸಮಯದ ಉಳಿತಾಯದ ಜೊತೆಗೆ ವಿದ್ಯುತ್ ಉಳಿತಾಯವಾಗುತ್ತದೆ.

ಪಂಚಾಯತಿ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳ ಎಲ್ಲ ಅಧಿಕಾರಿಗಳನ್ನು ಆಹ್ವಾನಿಸಿ ವಿವಿಧ ಇಲಾಖಾವಾರು ಮಾಹಿತಿ ನೀಡುವ ಸಭೆಗಳನ್ನು ಏರ್ಪಡಿಸಲಾಗುತ್ತಿದೆ. ಮ್ಯಾಗ್ಸೇಸ್ ಪ್ರಶಸ್ತಿ ವಿಜೇತರಾದ ರಾಜೇಂದ್ರಸಿಂಗ್ ಬಿಂಕದಕಟ್ಟಿಗೆ ಹಲವಾರು ಬಾರಿ ಭೇಟಿ ನೀಡಿ ಜಲಸಂರಕ್ಷಣೆ ಬಗ್ಗೆ ಈ ಗ್ರಾಮದ ಕ್ಷೇತ್ರದಲ್ಲಿ ಬೀಳುವ ಪ್ರತಿ ಹನಿ ನೀರು ಬಿಂಕದಕಟ್ಟಿ ಪ್ರದೇಶದಲ್ಲಿಯೇ ಭೂ ದೇವಿಯ ಒಡಲು ಸೇರುವಂತೆ ಮಾಡಬೇಕೆಂದು ಅವರು ಜನಮಾನಸದಲ್ಲಿ ಅಚ್ಚಳಿಯದಂತೆ ಬಿತ್ತಿದ್ದಾರೆ. "ಓಡುವ ನೀರನ್ನು ನಡೆಯುವಂತೆ ಮಾಡಿ, ನಡೆಯುವ ನೀರನ್ನು ಅಂಬೆಗಾಲಿಕ್ಕಿ ನಡೆಯುವಂತೆ ಮಾಡಿ ಅಂಬೆಗಾಲಿಕ್ಕುವ ನೀರನ್ನು ನಿಲ್ಲುವಂತೆ ಮಾಡಿ ನಿಂತ ನೀರು ಭೂದೇವಿಯ ಗರ್ಭ ಸೇರುವಂತೆ ಮಾಡಿ" ಎಂಬ ರಾಜೇಂದ್ರಸಿಂಗ್

ಜಲಸಂವರ್ಧನೆಯ ಬೀಜ ಮಂತ್ರ ಗ್ರಾಮದ ಪ್ರತಿಯೊಬ್ಬರ ಹೃದಯದಲ್ಲಿದೆ. ಈ ಮಾತಿನಿಂದ ಪ್ರಭಾವಿತರಾದ 2016–17ನೇ ಸಾಲಿನಲ್ಲಿ ಎಂಜಿಎನ್‌ಆರ್‌ಇಜಿಎ ಯೋಜನೆಯಲ್ಲಿ ಜಲ ಸಂರಕ್ಷಣೆ ರೈತರ ಹೊಲಗಳಲ್ಲಿ ಬದು ನಿರ್ಮಾಣ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ನೀರು ಇಂಗುವಿಕೆಯ ಕೆಲಸ ಮಾಡಲಾಗಿದೆ. ಕೂಲಿ ಕಾರ್ಮಿಕರಿಗೆ ಕೆಲಸ ಒದಗಿಸಿದ ಹೆಗ್ಗಳಿಕೆ ದೊರೆಕಿದೆ. ಈ ಯೋಜನೆಯಲ್ಲಿ 350 ರೈತರು ಇದರ ಪ್ರಯೋಜನೆ ಪಡೆದುಕೊಂಡಿದ್ದಾರೆ.

## ನಿರ್ವಹಣೆ ವ್ಯವಸ್ಥೆ

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಚರಂಡಿ ವ್ಯವಸ್ಥೆ ನಿರ್ವಹಣೆಗಾಗಿ ಸ್ವಚ್ಛತಾಗಾರರೆಂದು 4 ಜನ ಸಿಬ್ಬಂದಿ ಇದ್ದು ಪ್ರತಿದಿನ ಗ್ರಾಮದ ವಾರ್ಡ್‌ಗಳಲ್ಲಿ ಚರಂಡಿಯ ಸ್ವಚ್ಛತೆ ಮಾಡುತ್ತಿರುತ್ತಾರೆ. ಅಲ್ಲದೇ ಪ್ರತಿದಿನವು ಗ್ರಾಮದ ಮುಖ್ಯರಸ್ತೆ ಮತ್ತು ಬೀದಿಗಳನ್ನು ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸಲಾಗುತ್ತದೆ. ಗ್ರಾಮ ಪಂಚಾಯತಿಯ ಕಸ ವಿಲೇವಾರಿ ವಾಹನದ ಮೂಲಕ ಕಸವನ್ನು ಗ್ರಾಮದ ಹೊರಭಾಗದ ತಗ್ಗು ಪ್ರದೇಶದಲ್ಲಿ ಹಾಕಲಾಗುತ್ತದೆ. ಗ್ರಾಮಸ್ಥರು ಸಹ ತಮ್ಮ ತಮ್ಮ ಮನೆಗಳ ಸುತ್ತಮುತ್ತ ಸ್ವಚ್ಛತೆ ಕಾಪಾಡಿಕೊಂಡು ಗ್ರಾಮದ ಸ್ವಚ್ಛತೆಗೆ ಗಮನ ಹರಿಸುತ್ತಿದ್ದಾರೆ.

## ಕಸ ವಿಲೇವಾರಿ ವಾಹನ

ಗ್ರಾಮ ಪಂಚಾಯತಿಯು ಕಸ ವಿಲೇವಾರಿ ಮಾಡಲು ಸ್ವಂತ ಸಂಪನ್ಮೂಲದಲ್ಲಿ ರೂ.4.00 ಲಕ್ಷಗಳ ವೆಚ್ಚದಲ್ಲಿ ವಾಹನ ಖರೀದಿಸಿದ್ದು. ಸದರಿ ವಾಹನ ಪ್ರತಿ ನಿತ್ಯ ಮನೆ ಮನೆಗೆ ತೆರಳಿ ಕಸ ಸಂಗ್ರಹಿಸಿ ಗ್ರಾಮದ ಹೊರ ವಲಯದ ತಗ್ಗು ಪ್ರದೇಶದಲ್ಲಿ ಕಸ ಹಾಕಿ ಸಮತಟ್ಟು ಮಾಡಲಾಗಿದ್ದು, ವಾಹನಕ್ಕೆ ಸ್ಪೀಕರ್ ಅಳವಡಿಸಿಕೊಳ್ಳುವ ಮೂಲಕ ಗ್ರಾಮದ ಜನರಿಗೆ ಕಸ ಸಂಗ್ರಹಿಸಿ ವಾಹನಕ್ಕೆ ಹಾಕುವ ರೀತಿಯಲ್ಲಿ ಪ್ರಚಾರ ಮಾಡಲಾಗುತ್ತದೆ. ಗ್ರಾಮದ ಪ್ರತಿ ರಸ್ತೆಯನ್ನು ಸ್ವಚ್ಛವಾಗಿಟ್ಟುಕೊಳ್ಳಲು ಈ ಮೂಲಕ ತಿಳಿಸಲಾಗುತ್ತಿದೆ.

## ಶೌಚಾಲಯ

ಬಿಂಕದಕಟ್ಟಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮೊದಲು ಜನರು ಬಯಲು ಶೌಚಾಲಯವನ್ನು ಅವಲಂಬಿಸಿದ್ದರು, ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳಲು ಶಾಲಾ ಮಕ್ಕಳಿಂದ ಜಾತಾ ಮಾಡುವುದರ ಮೂಲಕ, ಕರಪತ್ರದ ಮೂಲಕ, ನಸುಕಿನ ವೇಳೆ ಸೀಟಿ ಊದುವ ಕಾರ್ಯಕ್ರಮದ ಮೂಲಕ, ಅಂಗನವಾಡಿ ಆಶಾ ಕಾರ್ಯಕರ್ತೆಯರ ಜೊತೆಗೂಡಿ ಹಾಗೂ ಗ್ರಾಮ ಪಂಚಾಯತಿಯ ಸದಸ್ಯರ ಜೊತೆಗೂಡಿ ಪ್ರತಿಯೊಂದು ಮನೆಗೆ ತೆರಳಿ ವೈಯಕ್ತಿಕ



ಶೌಚಾಲಯ ನಿರ್ಮಿಸಿಕೊಂಡು ಉಪಯೋಗಿಸುವ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಯಿತು ಮತ್ತು ಜಾಗ ಇಲ್ಲದ ಕುಟುಂಬಗಳಿಗೆ ಸಾಮೂಹಿಕ ಶೌಚಾಲಯಗಳನ್ನು ನಿರ್ಮಿಸಿ ಸುವ್ಯವಸ್ಥಿತವಾಗಿ ನಿರ್ವಹಿಸಲಾಗುತ್ತಿದೆ.

## ಗ್ರಾಮೀಣ ಗೌರವ ಘಟಕ

ವೈಯಕ್ತಿಕ ಸ್ವಚ್ಛತೆ ಹಾಗೂ ಸಾರ್ವಜನಿಕ ನೈರ್ಮಲ್ಯಕ್ಕೆ ಮಾದರಿಯಾಗಿರುವ ಬಿಂಕದಕಟ್ಟಿ ಗ್ರಾಮದ ಎಲ್ಲ ರಸ್ತೆಗಳು ಸಿಸಿ ರಸ್ತೆಗಳಾಗಿವೆ. ಮತ್ತು ಬಿಂಕದಕಟ್ಟಿ ಗ್ರಾಮದ ಪರಿಶಿಷ್ಟ ಜಾತಿ ಜನಾಂಗದವರೆ ವಾಸಿಸುವ ಪ್ರದೇಶದಲ್ಲಿ ಗ್ರಾಮೀಣ ಗೌರವ ಘಟಕ ಕಟ್ಟಲಾಗಿದೆ. ಪುರುಷರಿಗೆ ಹಾಗೂ ಮಹಿಳೆಯರಿಗೆ ಪ್ರತ್ಯೇಕವಾಗಿರುವ ಈ ಆಧುನಿಕ ಶೌಚಾಲಯ ದೇಶದ ಗಮನ ಸೆಳೆದಿದೆ.

ಗ್ರಾಮ ಪಂಚಾಯತಿಯ 14ನೇ ಹಣಕಾಸು ನೆರವಿನ ರೂ. 7.73 ಲಕ್ಷ ಜಿಲ್ಲಾ ಪಂಚಾಯತಿ ಅನುದಾನ ರೂ.5.77 ಲಕ್ಷ ತಾಲ್ಲೂಕು ಪಂಚಾಯತಿಯ ಅನುದಾನ ರೂ.1.00 ಲಕ್ಷ ಹಾಗೂ ಸ್ವಚ್ಛ ಭಾರತ ಮಿಷನ ಯೋಜನೆಯ ರೂ.2.00 ಲಕ್ಷ ಒಟ್ಟು: ರೂ.16.50 ಲಕ್ಷಗಳನ್ನು ಈ ಗೌರವ ಘಟಕಕ್ಕೆ ಬಳಸಿಕೊಳ್ಳಲಾಗಿದೆ. ಅತ್ಯಂತ ಕಾಳಜಿಯಿಂದ ನಿರ್ಮಿಸಲಾಗಿರುವ ಈ ಗೌರವ ಘಟಕ ಪ್ರತಿಷ್ಠಿತರ ಮನೆಯಲ್ಲಿ ಇರಬಹುದಾದ ಎಲ್ಲ ಸೌಲಭ್ಯಗಳನ್ನು ಹೊಂದಿರುವುದು ಒಂದು ಹೆಗ್ಗಳಿಕೆ. ಈ ಗೌರವ ಘಟಕ ನೋಡಲು ವಿವಿದೆಡೆಗಳಿಂದ ಹಾಗೂ ಕೇಂದ್ರ ಸರ್ಕಾರದ ಪ್ರತಿನಿಧಿಗಳು ಸೇರಿ ಅನೇಕರು ಆಗಮಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

## ಕೆರೆ ಸುತ್ತಲು ಗಾರ್ಡನ್ ನಿರ್ಮಾಣ

ಬಿಂಕದಕಟ್ಟಿ ಗ್ರಾಮದಲ್ಲಿ ಗ್ರಾಮದ ಹುಟ್ಟಿನೊಂದಿಗೆ ಇಂದಿನ ಗ್ರಾಮ ಪಂಚಾಯತಿ ಕಟ್ಟಡದ ಮುಂಭಾಗದ ಕೆರೆ ಇದೆ. ಈ ಕೆರೆ ಮಳೆ ಕೊರತೆಯಿಂದ ಒಣಗಿದ್ದಿತು ಹಾಗೂ ಗ್ರಾಮಸ್ಥರು ಬಹಿರಂಗ ಬಹಿರ್ದೆಸೆಗೆ ಇದನ್ನು ಬಳಸುತ್ತಿದ್ದರಲ್ಲದೆ ಗ್ರಾಮದ



ತ್ಯಾಜ್ಯಗಳನ್ನು ಇಲ್ಲಿ ಹಾಕುತ್ತಿದ್ದರು. ಈ ಗ್ರಾಮಕ್ಕೆ ಬರುವವರು ಮೂಗು ಮುಚ್ಚಿಕೊಂಡು ಬರುವಂತಹ ಪರಿಸ್ಥಿತಿ ಇದ್ದಿತು. ಗ್ರಾಮದ ಪ್ರಜ್ಞಾವಂತರು, ಚುನಾಯಿತ ಪ್ರತಿನಿಧಿಗಳಲ್ಲಿ ಗ್ರಾಮ ಸಭೆಯಲ್ಲಿ ಸೇರಿ ನಮ್ಮ ಗ್ರಾಮ ನಮ್ಮ ಯೋಜನೆಯಲ್ಲಿ ಊರ ಕೆರೆ ಅಭಿವೃದ್ಧಿಗೆ ಒಮ್ಮತದ ನಿರ್ಧಾರ ಕೈಗೊಳ್ಳಲಾಯಿತು. ಕೆರೆಯ ಸುತ್ತಲೂ ಉದ್ಯಾನವನ ನಿರ್ಮಾಣ ಕಾಮಗಾರಿಯನ್ನು ಎಮ್‌ಜಿಎನ್‌ಆರ್‌ಇಜಿ ಯೋಜನೆಯಲ್ಲಿ ಅಳವಡಿಸಲಾಯಿತು. ಉದ್ಯಾನವನದಲ್ಲಿ ಬೇರೆ ಬೇರೆ ಅಲಂಕಾರಿಕ ಸಸ್ಯಗಳನ್ನು ಹಾಗೂ ಮ್ಯಾಕ್ಸಿಕನ್ ಹುಲ್ಲನ್ನು ಬೆಳೆಸಲಾಗಿದೆ. ಇದರಿಂದ ಕೆರೆಯ ಚಿತ್ರಣವೇ ಬದಲಾಗಿದೆ. ರೂ.9.00 ಲಕ್ಷಗಳ ಎಮ್‌ಜಿಎನ್‌ಆರ್‌ಇಜಿ ಯೋಜನೆಯಲ್ಲಿ ನಿರ್ಮಿಸಲಾಗಿದೆ. ಇದಕ್ಕೆ ಮತ್ತಷ್ಟು ಸೌಂದರ್ಯ ಹೆಚ್ಚಿಸಲು ಕೆಆರ್‌ಐಡಿಎಲ್ ವತಿಯಿಂದ ಸುಮಾರು ರೂ.17.00 ಲಕ್ಷಗಳ ವೆಚ್ಚದಲ್ಲಿ ಈ ಉದ್ಯಾನವನಕ್ಕೆ ವಾಕಿಂಗ್ ಪಾತ್ ಮತ್ತು ಕೆರೆ ಸುತ್ತಲೂ ತಂತಿಬೇಲಿ ಹಾಕಲಾಗಿದೆ. ಈ ಉದ್ಯಾನವನದ ಸೌಂದರ್ಯಕ್ಕೆ ಮೆರಗು ಬರುವಂತೆ ಮಾಡಲು ಬಣ್ಣದ ಕಾರಂಜಿಯನ್ನು ಕೆರೆಯ ಮಧ್ಯಭಾಗದಲ್ಲಿ ನಿರ್ಮಿಸಲಾಗಿದೆ.

ಕೆರೆ ಸುತ್ತಲಿನ ಉದ್ಯಾನವನದಲ್ಲಿರುವ ಹೂ ಬಳ್ಳಿಗಳು, ಗಿಡಮರಗಳು ಹೊರಸೂಸುವ ಸುಹಾಸನೆಯಿಂದ ಪರಸರವೇ ಬದಲಾಗಿದೆ. ಬಹಿರ್ದೇಸೆಗೆ ಬರುತ್ತಿದ್ದವರು ಈಗ ವಾಕಿಂಗ್ ಮಾಡಲು ವ್ಯಾಯಾಮ ಮಾಡಲು ಬರುವಂತಾಗಿದೆ. ಜೊತೆಗೆ ಕೆರೆ ಹಾಗೂ ಉದ್ಯಾನವನ ಬಿಂಕದಕಟ್ಟಿಯ ಗೌರವಕ್ಕೆ ಗರಿ ಮುಡಿಸಿವೆ.

## ಶುದ್ಧ ಕುಡಿಯುವ ನೀರಿನ ಘಟಕ

ಬಿಂಕದಕಟ್ಟಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವು 1000 ಲೀಟರ್ ಸಾಮರ್ಥ್ಯ ಹೊಂದಿದ್ದು ಇದು ಕುಡಿಯುವ ನೀರಿಗಾಗಿ ತುಂಬಾ ಉಪಯುಕ್ತವಾಗಿದೆ. ಇಲ್ಲಿ ಪ್ರತಿದಿನ ಸುಮಾರು 4500 ಲೀಟರ್ ನೀರು ಖರ್ಚಾಗುತ್ತದೆ. ಇಲ್ಲಿ ರೂ.2/– ಗೆ 20 ಲೀಟರ್ ನೀರನ್ನು ವಿತರಿಸಲಾಗುತ್ತದೆ. ಇದರ ದಿನದ ಸರಾಸರಿ ಆದಾಯ ದಿನವೊಂದಕ್ಕೆ ರೂ.450/– ಈ ಘಟಕದಲ್ಲಿ ಕೆಲಸ ಮಾಡುವ ನಿರ್ವಾಹಕರಿಗೆ ಪ್ರತಿ ತಿಂಗಳ ವೇತನ ರೂ.5,000/– ಗಳನ್ನು ಕೊಡಲಾಗುತ್ತದೆ. ಪ್ರತಿ ತಿಂಗಳ ವಿದ್ಯುತ್ ಬಿಲ್ ಮತ್ತು ನಿರ್ವಹಣೆಯ ವೆಚ್ಚವನ್ನು ಇದರಿಂದ ಬಂದ ಆದಾಯದಲ್ಲಿಯೇ ಪಾವತಿ ಮಾಡಲಾಗುತ್ತದೆ. ಇದು ಲಾಭದಾಯಕ ಮಾರ್ಗದಲ್ಲಿ ನಡೆಯುತ್ತಿದೆ.

ಇಲ್ಲಿನ ಪ್ರತಿ ಕುಟುಂಬದವರು ಈ ಘಟಕದ ನೀರನ್ನು ಉಪಯೋಗಿಸುತ್ತಾರೆ. ಇದರಿಂದ ಸಾರ್ವಜನಿಕ ಆರೋಗ್ಯ ಮಟ್ಟ ಹೆಚ್ಚಿಸಿದೆ ಎಂದು ಹೇಳಬಹುದು.

## ಇ–ಲೈಬ್ರರಿ

ಬಿಂಕದಕಟ್ಟಿ ಗ್ರಾಮದಲ್ಲಿ ಇ–ಲೈಬರಿ ದಿ:30/05/2017 ರಂದು ಪ್ರಾರಂಭವಾಯಿತು ಇದು ರಾಜ್ಯದಲ್ಲಿ ಪ್ರಾರಂಭ ವಾದ ಮೊದಲ ಇ–ಲೈಬ್ರರಿಗಳಲ್ಲಿ ಒಂದಾಗಿದೆ. ಇದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯಿಂದ ಸ್ಥಾಪಿಸಲ್ಪಟ್ಟಿದೆ. ಇಲ್ಲಿ ಒಂದು ಮಿಂಟ್ ಬಾಕ್ಸ್ ಅಳವಡಿಸಲಾಗಿದ್ದು, ಇದರಲ್ಲಿ 4 ಟ್ಯಾಬ್‌ಗಳಿದ್ದು ಈ ಟ್ಯಾಬ್‌ಗಳ ಮುಖಾಂತರ ಸಾರ್ವಜನಿಕರು ಪುಸ್ತಕಗಳನ್ನು ಓದಿಕೊಳ್ಳಬಹುದು. ಮಿಂಟ್ ಬಾಕ್ಸ್ ಇದು 50 ಮೀಟರ್‌ವರೆಗೆ ವೈಫೈ ಸಂಪರ್ಕ ಕಲ್ಪಿಸುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಓದುಗರಿಗೆ ತುಂಬಾ ಅನುಕೂಲವಾಗಿದ್ದು, ಸುಮಾರು 250 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ.

## ಅಂಗನವಾಡಿಗಳು

ಬಿಂಕದಕಟ್ಟಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು 6 ಅಂಗನವಾಡಿಗಳು ಸ್ವಂತ ಕಟ್ಟಡಗಳನ್ನು ಹೊಂದಿದ್ದು, ಪ್ರತಿ ಅಂಗನವಾಡಿಗಳು ನೀರು ಮತ್ತು ಶೌಚಾಲಯಗಳ ವ್ಯವಸ್ಥೆ ಹೊಂದಿದೆ. ಗ್ರಾಮ ಪಂಚಾಯತಿ ಬಾಲ ವಿಕಾಸ ಸಮಿತಿಯು ಅಂಗನವಾಡಿಯ ಕಾರ್ಯವೈಖರಿಯ ಬಗ್ಗೆ ಗಮನ ಹರಿಸುತ್ತದೆ.

ಅಭಿವೃದ್ಧಿ ಕಾರ್ಯಕ್ರಮಗಳಿಂದ ಅಭಿವೃದ್ಧಿಯ ದಿಸೆಯಲ್ಲಿ ದಾಪುಗಾಲಿಡುತ್ತಿರುವ ಬಿಂಕದಕಟ್ಟಿ ಗ್ರಾಮ ಪಂಚಾಯತಿಯ ಯಶಸ್ವಿಗೆ ಜನ ಪ್ರತಿನಿಧಿಗಳು, ಅಧಿಕಾರಿ–ಸಿಬ್ಬಂದಿಗಳು ನಿರಂತರ ಶ್ರಮಿಸುತ್ತಿದ್ದಾರೆ. ಬಿಂಕದಕಟ್ಟಿ ಗ್ರಾಮ ಪಂಚಾಯತಿಯು ಹಲವು ಹೊಸ ಯೋಜನೆ ಹಾಗೂ ಕಾರ್ಯಕ್ರಮಗಳ ಮೂಲಕ ರಾಜ್ಯ ಮತ್ತು ರಾಷ್ಟ್ರಮಟ್ಟದ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಈ ಎಲ್ಲಾ ಕಾರ್ಯಗಳ ಹಿಂದೆ ಎಲೆಮರೆ ಕಾಯಿಯಂತೆ ತಾಲ್ಲೂಕು ಪಂಚಾಯತಿಯ ಮಾಜಿ ಅಧ್ಯಕ್ಷರಾದ ಶ್ರೀ.ರವೀಂದ್ರ ಮಾ. ಮೂಲಿಮನಿ ಹಾಗೂ ಗ್ರಾಮ ಪಂಚಾಯತಿಯ ಎಲ್ಲಾ ಸದಸ್ಯರು ಮತ್ತು ಗ್ರಾಮದ ಜನರ ಸಹಕಾರ ಪರಿಶ್ರಮದಿಂದಾಗಿ ಇಂದು ಪುರಸ್ಕಾರ ಪಡೆಯುವಲ್ಲಿ ಯಶಸ್ವಿಯಾಗಿದೆ. ■

# ಗ್ರಾಮೀಣಾಭಿವೃದ್ಧಿಯಲ್ಲಿ ನಾಯಕತ್ವ

ವರದಿ



ಸುದರ್ಶನ

ಎಸ್‌ಐಆರ್‌ಡಿ, ಮೈಸೂರು.

**ತನ್ನ ನಾಯಕ ಮಾಡುವ ಕೆಲಸಗಳ ಮೇಲೆ ಜನರು ಸದಾ ಒಂದು ಕಣ್ಣಿಟ್ಟಿರುತ್ತಾರೆ. ಅಂತೆಯೇ ತಮಗನಿಸಿದ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ ಕೂಡ. ದನಾತ್ಮಕ ಪ್ರತಿಕ್ರಿಯೆಗಳಿಗೆ ಹಿಗ್ಗದೇ ಋಣಾತ್ಮಕ ಪ್ರತಿಕ್ರಿಯೆಗಳಿಗೆ ಕುಗ್ಗದೇ ಎರಡನ್ನೂ ಸಮಾನವಾಗಿ ಸ್ವೀಕರಿಸುವ ಮುಕ್ತ ಮನಸ್ಸು ನಾಯಕನಾದವನು ಹೊಂದಿರಬೇಕು.**

ಸರ್ಕಾರದ ಅಧಿಕಾರಿಗಳು ತರಬೇತಿಯನ್ನು ಪಡೆಯುವುದರಿಂದ ತಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಹೆಚ್ಚಿನ ಕಾರ್ಯಕ್ಷಮತೆ ಮತ್ತು ತಿಳುವಳಿಕೆಯನ್ನು ಹೊಂದಲು ಸಹಕಾರಿಯಾಗುತ್ತದೆ. ವ್ಯವಸ್ಥಿತ ನೀತಿ ನಿಯಮಾವಳಿಗಳಿಂದ ಸರ್ಕಾರಿ ಸಂಸ್ಥೆಗಳು, ರೂಪಿಸಲ್ಪಟ್ಟದಾದರೂ ಇದರ ಉದ್ದೇಶ ಸಮಗ್ರ ಅಭಿವೃದ್ಧಿ. ಅಂದರೆ ಇಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯು ಪ್ರಜೆಗಳಿಂದ ಪ್ರಜೆಗಳಿಗೋಸ್ಕರ ಎಂಬುದನ್ನು ಮರೆಯಬಾರದು. ಸಮಸ್ಯೆ, ಬೇಡಿಕೆ ಮತ್ತು ನಿರೀಕ್ಷೆಗಳು ಇಲ್ಲದ್ದಿದಲ್ಲಿ ಯಾವುದೇ ವಿದಧ ಅಧಿಕಾರಿಗಳ ಅವಶ್ಯಕತೆಯು ಇರುವುದಿಲ್ಲ. ಇಲ್ಲಿ ಅವಶ್ಯಕತೆಗಳಿಗೆ ಅನುಗುಣವಾಗಿ ಮೂಲಭೂತ ಸೌಲಭ್ಯವನ್ನು ಸರಿಯಾಗಿ ತಲುಪಿಸಲು ಮಾನವ ಸಂಪನ್ಮೂಲವು ಸರ್ಕಾರದ ನಿಜವಾದ ಪ್ರತಿನಿಧಿಯಾಗಿ ಕೆಲಸ ಮಾಡಬೇಕಾಗುತ್ತದೆ. ಇಲ್ಲಿ ಅಧಿಕಾರಿಗಳು ದೈಹಿಕ ಮತ್ತು ಮಾನಸಿಕವಾಗಿ ದೃಢವಾಗಿದ್ದಲ್ಲಿ ಮಾತ್ರ ಉತ್ತಮ ವರ್ತನೆಯ ಮನೋಭಾವನೆಯಿಂದ ಕೆಲಸ ಮಾಡಲು ಸಾಧ್ಯ. ಆ ಮೂಲಕ ಕಾರ್ಯಾಂಗವು ಆಡಳಿತ ಯಂತ್ರದ ವ್ಯವಸ್ಥಿತ ಮತ್ತು ಸಮರ್ಪಕ ಕಾರ್ಯ ನಿರ್ವಹಣೆಗೆ ಸಹಕಾರಿಯಾಗುತ್ತದೆ. ಗ್ರಾಮೀಣಾಭಿವೃದ್ಧಿಯ ಮೂಲ ಆಶಯವಾದ "ಸಮಾಜದ ಉನ್ನತಿಗಾಗಿ ಸೇವೆ" ಎಂಬುದನ್ನು ಸಾಧಿಸಬಹುದು. ಇಲ್ಲಿ ಮುಖ್ಯವಾಗಿ ಅಧಿಕಾರಿ ಮತ್ತು ನೌಕರರಿಗೆ ಬೇಕಾದ್ದು ವರ್ತನೆ ಮತ್ತು ಮನೋಭಾವ ಬದಲಾವಣೆಗಳು. ಆ ನಿಟ್ಟಿನಲ್ಲಿ ದೈನಂದಿನ ಚಟುವಟಿಕೆಗಳಲ್ಲಿ ಬದಲಾವಣೆ ತಂದು ಸಮಾಜದ ಕಟ್ಟಕಡೆಯ ವ್ಯಕ್ತಿಯ ಭಾವನೆಗಳನ್ನು, ನಂಬಿಕೆಗಳನ್ನು, ಅಭಿಪ್ರಾಯಗಳನ್ನು ಅರ್ಥೈಸಿಕೊಂಡು ಪರಿಣಾಮಕಾರಿ ಕಾರ್ಯ ನಿರ್ವಹಣೆಗೆ ಸಮರ್ಥವಾಗುವಂತೆ ಮಾಡುವವನೇ ನಿಜವಾದ ಅಧಿಕಾರಯುತ ನಾಯಕನಾಗುತ್ತಾನೆ.

ಇಂದು ಬದುಕಿನ ಯಾವ ಕ್ಷೇತ್ರವನ್ನು ತೆಗೆದುಕೊಂಡರೂ ಸಹಬಾಳ್ವೆ ಜೊತೆಗೆ ಇತರರೊಡಗೂಡಿ ಕೆಲಸ ಮಾಡುವುದು ಸಾಮಾನ್ಯವಾದುದ್ದು ಮಾನವ ಸಂಘ ಜೀವಿಯಾದ್ದರಿಂದ ಕೂಡಿ ಕೆಲಸ ಮಾಡುವುದರಿಂದ ಸಾಮಾಜಿಕ ಒಡನಾಟದಲ್ಲಿ ಒಟ್ಟಿಗೆ ಬಾಳುವುದರಿಂದ ವ್ಯಕ್ತಿ ಮತ್ತು ಸಮಾಜ ಎರಡಕ್ಕೂ ಹಿತ. ಹೀಗೆ ಸಾಮೂಹಿಕವಾಗಿ ಕೆಲಸ ನಿರ್ವಹಿಸಲು ತನ್ನದೆ ಆದಂತಹ ರಚನೆ ಮಾರ್ಗ ಮತ್ತು ಗುರಿಗಳನ್ನು ಹೊಂದಿರುತ್ತಾನೆ. ಈ ಹಂತದಲ್ಲಿ ಕಾರ್ಯಸಾಧಿಸಲು ಸಮೂಹದ ಸದಸ್ಯರ ನಡುವೆ ಸಾಮರಸ್ಯ ಅತ್ಯಗತ್ಯ ವಾಗಿರುತ್ತದೆ ಈ ಸಮನ್ವಯತೆ



ಸಾಧಿಸಲು ಒಬ್ಬ ವ್ಯಕ್ತಿಯ ಆದೇಶ ಮಾರ್ಗದರ್ಶನ ಮತ್ತು ನಿರ್ದೇಶನಗಳು ಬಹಳ ಅನಿವಾರ್ಯವಾಗುತ್ತದೆ ಇಂತಹ ಸಂದರ್ಭದಲ್ಲಿ ಮುಂದಾಳತ್ವ ವಹಿಸುವ ವ್ಯಕ್ತಿಯೇ ನಾಯಕನಾಗುತ್ತಾನೆ.

ಒಂದು ಊರನ್ನು ಅಭಿವೃದ್ಧಿ ಪಥದತ್ತ ಮುನ್ನಡೆಸಲು, ಒಂದು ದೇಶವನ್ನು ಪ್ರಗತಿಯತ್ತ ಕೊಂಡೊಯ್ಯಲು ಒಬ್ಬ ಸಮರ್ಥ ನಾಯಕ ಬೇಕು, ಅಂತೆಯೇ ಇನ್ನು

ರಾಜಕೀಯ ಪಕ್ಷಗಳಿಗೆ ಜನರನ್ನು ಒಲಿಸಿಕೊಳ್ಳುವ ಸಾಮರ್ಥ್ಯ ಇರುವ ಒಬ್ಬ ಅನುಭವಿ, ಮುತ್ಸದ್ದಿ ನಾಯಕ ಬೇಕು. ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ಒಬ್ಬ ನಾಯಕ ಎನಿಸಿಕೊಂಡವನು ತನ್ನ ಅನುಯಾಯಿಗಳಿಗೆ ಸ್ಫೂರ್ತಿ ತುಂಬಿ ಗುರಿಯನ್ನು ಸಾದಿಸಲು ಶ್ರಮಿಸುತ್ತಾನೆ. ಒಬ್ಬ ಸಮರ್ಥ ನಾಯಕ ಇಲ್ಲದ ಸಂಸ್ಥೆ ನಾವಿಕನಿಲ್ಲದ ಹಡಗಿನಂತೆ, ಸೂತ್ರ ಹರಿದ ಗಾಳಿಪಟದಂತೆ, ಗೊತ್ತು ಗುರಿ ಇಲ್ಲದೇ ಎತ್ತಲೋ ಸಾಗಿ ಅಧಃಪತನವಾಗಬಹುದು. ಅಲ್ಲದೇ ಸೂಕ್ತ ನಾಯಕತ್ವದ ಕೊರತೆಯಿಂದ ಅನಾಥ ಪ್ರಜ್ಞೆ ಕೂಡ ಕಾಡಬಹುದು.




ವಿಶಾಲ ದೃಷ್ಟಿಯಲ್ಲಿ ನೋಡಿದರೆ ಪ್ರತಿಯೊಬ್ಬ ವ್ಯಕ್ತಿಯು ಒಂದಲ್ಲ ಒಂದು ಕ್ಷೇತ್ರದಲ್ಲಿ ನಾಯಕನಾಗಿಯೂ ಮತ್ತೊಂದು ಕ್ಷೇತ್ರದಲ್ಲಿ ಅನುಚರನಾಗಿಯೂ ಇರುತ್ತಾರೆ. ಉದಾಹರಣೆಗೆ: ತಾಲ್ಲೂಕು ಸಮಿತಿಗೆ ನಾಯಕನಾದವರು ಜಿಲ್ಲಾ ಸಮಿತಿಯ ನಾಯಕರಿಗೆ ಅನುಚರನಾಗಿರುತ್ತಾರೆ. ಉತ್ತಮ ನಾಯಕನಾದವರು ಕೆಲಸವನ್ನು ಹೇಗೆ ಮಾಡಬೇಕೆಂದು ನಿರ್ದೇಶಿಸುವುದಿಲ್ಲ ಆ ಕೆಲಸವನ್ನು ಉತ್ತಮವಾಗಿ ಹೇಗೆ ಮಾಡುವುದು ಎಂದು ಮಾಡಿ ತೋರಿಸುತ್ತಾನೆ ವ್ಯಕ್ತಿಯಲ್ಲಿ ನಾಯಕನಿಗಿರಬೇಕಾದ ಗುಣಗಳು ಇದ್ದರೆ ಸಾಕು ಅವುಗಳ ಪ್ರಭಾವದಿಂದ ಆತ ತಾನಾಗಿಯೇ ನಾಯಕನಾಗುತ್ತೇನೆಂಬ ಅಭಿಪ್ರಾಯ ಸಾಮಾನ್ಯವಾಗಿದೆ ಆದರೆ ಇಂದು ಇಷ್ಟೆ ಸಾಲದು ಸೂಕ್ತ ಅವಕಾಶವು ಅತ್ಯಗತ್ಯವಾಗಿದೆ ಈ ದೃಷ್ಟಿಯಲ್ಲಿ ನೋಡುವುದಾದರೆ ನಿರಂತರವಾಗಿ ಸಮಾಜದಲ್ಲಾಗುತ್ತಿರುವ ಬದಲಾವಣೆಗಳು ನಾಯಕತ್ವದ ಉದಯಕ್ಕೆ ಕಾರಣವಾಗಬಹುದು. ಕೆಲವೊಮ್ಮೆ ಸಂದಿಗ್ದ ಹಾಗೂ ಕ್ಲಿಷ್ಠ ಪರಿಸ್ಥಿತಿಗಳಲ್ಲಿ ಜನರನ್ನು ಸಂಘಟಿಸಿ ಮುನ್ನಡೆಸಲು ನಾಯಕ ತಾನಾಗಿಯೇ ಉದಯವಾಗುತ್ತಾನೆ.

## ■ ಸಮರ್ಥ ನಾಯಕನಿಗೆ ಇರಬೇಕಾದ ಗುಣಲಕ್ಷಣಗಳು:

ಒಬ್ಬ ನಾಯಕನಾದವನು ದೂರದೃಷ್ಟಿ ಉಳ್ಳವನಾಗಿರಬೇಕು. ಹಿಡಿದ ಕೆಲಸ ಸಾದಿಸಲು ಎಷ್ಟು ಸಮಯ ತಗುಲಬಹುದು? ಸಾಧನೆಯ ಹಾದಿಯಲ್ಲಿ ಏನೇನು ಅಡೆತಡೆಗಳು ಬರಬಹುದು? ಅವನ್ನು ಹೇಗೆ ನಿವಾರಿಸಬಹುದು? ಅದರ ಪರಿಣಾಮಗಳೇನು? ಇವುಗಳನ್ನೆಲ್ಲ ಮೊದಲೇ ವಿಶ್ಲೇಷಿಸಿ ತನ್ನ ಸಹಪಾಠಿಗಳಿಗೆ ಅಥವಾ ತನ್ನ ತಂಡದ ಸದಸ್ಯರಿಗೆ ಅದನ್ನು ತಾಳ್ಮೆಯಿಂದ, ಸ್ಪಷ್ಟವಾಗಿ ವಿವರಿಸುವ ಜವಾಬ್ದಾರಿ ನಾಯಕರ ಮೇಲಿರುತ್ತದೆ ಸನ್ನಿವೇಷಗಳನ್ನು ಅರ್ಥಮಾಡಿಕೊಳ್ಳುವುದು? ವ್ಯವಸ್ಥೆಯ ಮೇಲೆ ಪೂರ್ಣ ನಿಯಂತ್ರಣ ಹೊಂದುವ ಸಾಮರ್ಥ್ಯ ಜವಾಬ್ದಾರಿಗಳ ಆಧ್ಯತೀಕರಣ ಮತ್ತು ಸನ್ನಿವೇಷಗಳ ಬೇಡಿಕೆಗಳಿಗೆ ಹೊಂದಿಕೊಂಡು ಇನ್ನು ಹೆಚ್ಚಿನ ಸಾಧನೆ ಮಾಡಬೇಕೆಂಬ ಆಕಾಂಕ್ಷೆ ಆತ್ಮವಿಶ್ವಾಸ, ಧೈರ್ಯ ಮತ್ತು ಸಾಧಿಸುವ ಛಲವು ಒಬ್ಬ ಸಮರ್ಥ ನಾಯಕನಿಗೆ ಇರಲೇಬೇಕಾದ ಬಹುಮುಖ್ಯ ಗುಣಗಳು. ಈ ಗುಣಗಳೇ ಆತನ ಬೆಂಬಲಿಗರಿಗೆ ಸ್ಫೂರ್ತಿ ತುಂಬುವ ಪ್ರೇರಕ ಶಕ್ತಿಗಳು.

ತನ್ನ ನಾಯಕ ಮಾಡುವ ಕೆಲಸಗಳ ಮೇಲೆ ಜನರು ಸದಾ ಒಂದು ಕಣ್ಣಿಟ್ಟಿರುತ್ತಾರೆ. ಅಂತೆಯೇ ತಮಗನಿಸಿದ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ ಕೂಡ. ದನಾತ್ಮಕ ಪ್ರತಿಕ್ರಿಯೆಗಳಿಗೆ ಹಿಗ್ಗದೇ ಋಣಾತ್ಮಕ ಪ್ರತಿಕ್ರಿಯೆಗಳಿಗೆ ಕುಗ್ಗದೇ ಎರಡನ್ನೂ ಸಮಾನವಾಗಿ ಸ್ವೀಕರಿಸುವ ಮುಕ್ತ ಮನಸ್ಸು ನಾಯಕನಾದವನು ಹೊಂದಿರಬೇಕು. ತಾನು ಸರಿಯಾದ ದಾರಿಯಲ್ಲಿ ಸಾಗುತ್ತಿದ್ದೇನೆಯೇ ಎಂದು ಆತ್ಮವಿಮರ್ಶೆ ಮಾಡಿಕೊಳ್ಳಲು ಜನರ ಈ ಪ್ರತಿಕ್ರಿಯೆಗಳು ಅತಿ ಹೆಚ್ಚು ಸಹಕಾರಿ ಕ್ರಿಯೇಟಿವಿಟಿ ಅಥವಾ ಸೃಜನಶೀಲತೆ ಮತ್ತು ಹೊಸತನ್ನು ಕಲಿಯುವ ಹಂಬಲ ಈ ಗುಣಗಳು ಒಬ್ಬ ಸಮರ್ಥ ನಾಯಕನ ವ್ಯಕ್ತಿತ್ವಕ್ಕೆ ಭೂಷಣ. ಗುರಿ ಸಾಧಿಸುವ ನಿಟ್ಟಿನಲ್ಲಿ ಸದಾ ಏನನ್ನಾದರೂ ಹೊಸತನ್ನು ಕಲಿಯುವ ತುಡಿತ ಆತನ ಅನುಯಾಯಿಗಳಲ್ಲೂ ಹುಮ್ಮಸ್ಸನ್ನು ಇಮ್ಮಡಿಗೊಳಿಸುತ್ತದೆ.

## ■ ಸಮಯ ನಿರ್ವಹಣೆ:

ಸಮಯವನ್ನು ಅತ್ಯಗತ್ಯ ಸಂಪನ್ಮೂಲ ಎಂದು ಅರ್ಥ ಮಾಡಿಕೊಂಡು ಜವಾಬ್ದಾರಿ ಮತ್ತು ಅರಿವಿನಿಂದ ಕಾರ್ಯನಿರ್ವಹಿಸುವುದು, ಎಲ್ಲಿ ಸಮಯದ ಅಭಾವ ಉಂಟಾಗುತ್ತಿದೆ ಎಂಬುದನ್ನು ಗುರುತಿಸಿ, ಸ್ವಯಂ ವಿಶ್ಲೇಷಿಸಿ, ಉಪಯುಕ್ತ ರೀತಿಯಲ್ಲಿ ಬಳಸುವ ಪ್ರಾವೀಣ್ಯತೆಯನ್ನು ತೋರುವುದು. ಅವಸರದ ಈ ಬದುಕಿನಲ್ಲಿ ಎಲ್ಲಾ ಕೆಲಸಗಳೂ ಸಕಾಲದಲ್ಲಿ ಮುಗಿದು ಬಿಡಬೇಕು. ಇಲ್ಲವಾದರೆ ಸಣ್ಣ ಸಣ್ಣ

ಕಾರಣಗಳಿಗೂ ಆರೋಗ್ಯದಲ್ಲಿ ವ್ಯತ್ಯಾಸ ಶುರುವಾಗಿ ಬಿಡುತ್ತದೆ. ಈ ಪರಿಸ್ಥಿತಿಯಿಂದ ಪಾರಾಗಲು ಒಂದೇ ದಿನ ಇದ್ದಕ್ಕಿದ್ದಂತೆ ಹೆಚ್ಚುವರಿ ಕಾರ್ಯದ ಜವಾಬ್ದಾರಿ ಬಿದ್ದಾಗ ಅದನ್ನು ನಿಭಾಯಿಸುವ ಯೋಜನೆ ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ. ಎಷ್ಟೇ ಸೂಕ್ತ ತಯಾರಿ ಮಾಡಿಕೊಂಡಿದ್ದರೂ ಸಮಯ ಸರಿಯಾಗಿ ನಿರ್ವಹಿಸದಿದ್ದರೆ ಎಲ್ಲ ಹಂತದಲ್ಲೂ ವೈಫಲ್ಯ



ಕಟ್ಟಿಟ್ಟ ಬುತ್ತಿ. ಬಹಳಷ್ಟು ಸಂದರ್ಭಗಳಲ್ಲಿ ಸಮಯಪಾಲನೆ ಮಾಡದ್ದಕ್ಕಾಗಿ ಸ್ವತಃ ಕಿರಿಕಿರಿ ಅನುಭವಿಸಿದ ಇಲ್ಲವೇ ಇತರರಿಗೆ ನೀಡಿದ ಪ್ರಸಂಗಗಳನ್ನು ಅನುಭವದಿಂದ ತಿಳಿದುಕೊಳ್ಳಬಹುದಾಗಿದೆ.

- **ಇತರರಿಗೆ ಸಹಾನೂಭೂತಿ:–** ಸಹಾನುಭೂತಿ ವ್ಯಕ್ತಪಡಿಸುವುದು, ಇತರರ ದೃಷ್ಟಿಕೋನದಿಂದ ಸನ್ನಿವೇಷಗಳನ್ನು ಗ್ರಹಿಸುವುದು ಇತರರ ಸಾಮರ್ಥ್ಯ ಮತ್ತು ಪರಿಮಿತಿಯನ್ನು ಗುರುತಿಸುವ ಕೌಶಲ್ಯವನ್ನು ಬಳಸಿಕ್ಕೊಳ್ಳುವುದು.
- **ಇತರರೊಂದಿಗೆ ಸಂಬಂಧಗಳ ನಿರ್ವಹಣೆ:–** ವ್ಯವಹರಿಸಲು ಬಳಸುವ ಸಾಮರ್ಥ್ಯಗಳನ್ನು ಜನ–ಕೌಶಲ, ವ್ಯವಹಾರ ಸಂಬಂಧಗಳನ್ನು ಬೆಳೆಸಲು ಹಾಗೂ ಜನರೊಂದಿಗೆ ಒಡನಾಡಲು, ತಂಡಗಳಲ್ಲಿ ಕೂಡಿ ಕೆಲಸ ಮಾಡಲು, ನಾಯಕತ್ವವನ್ನು ವಹಿಸಲು ಅಥವಾ ಕಾರ್ಯಶೀಲತೆಯನ್ನು ಪ್ರೇರೇಪಿಸಲು ಬೇಕಾಗುವ ಅನೇಕ ಮೌಲ್ಯಗಳನ್ನು, ಇದು ಒಳಗೊಂಡಿದೆ ಇತರರ ಭಾವನೆಗಳಿಗೆ ಸ್ಪಂದಿಸುವುದು ಇತರರು ಎದುರಿಸಿದ ಸನ್ನಿವೇಶದಲ್ಲಿ ತನ್ನನ್ನು ಕಲ್ಪಿಸಿಕೊಂಡು ಅದರಿಂದವುಂಟಾಗುವ ಮಾನಸಿಕ ಮತ್ತು ಭಾವನಾತ್ಮಕ ಅನುಭವಗಳ ಆದಾರದ ಮೇಲೆ ಇತರನ್ನು ಅರ್ಥ ಮಾಡಿಕೊಳ್ಳುವುದು ಸಕಾರಾತ್ಮಕ ಚಿಂತನೆ ಮತ್ತು ನಂಬಿಕೆಯಿಂದ ಕಾರ್ಯನಿರ್ವಹಿಸುವುದು
- **ಪ್ರಾಮಾಣಿಕತೆ:–** ಇದು ನಾಯಕನಿಗೆ ಇರಬೇಕಾದ ಶ್ರೇಷ್ಠಗುಣ ವಾಮಮಾರ್ಗ, ಅವ್ಯವಹಾರ ಭ್ರಷ್ಟಾಚಾರಗಳೆಂಬ ಸುಳಿಯಲ್ಲಿ ಒಬ್ಬ ನಾಯಕ ಸಿಲುಕಿದರೆ ಆತನ ಮೇಲೆ ಜನರಿಗಿರುವ ನಂಬಿಕೆ, ವಿಶ್ವಾಸಗಳು ಕಳೆದು ಹೋಗುತ್ತವೆ. ಪ್ರಾಮಾಣಿಕ ನಡತೆಯಿಂದ ತನ್ನ ಅನುಯಾಯಿಗಳ ವಿಶ್ವಾಸ ಉಳಿಸಿಕೊಳ್ಳುವುದು ಒಬ್ಬ ನಾಯಕನಿಗೆ ಬಹಳ ಮುಖ್ಯ. ಹಾಗಾದರೆ ನಮ್ಮಲ್ಲಿ ಇಂತಹ ಗುಣಗಳಿವೆಯೇ? ನಾವು ಕೂಡ ಒಬ್ಬ ಸಮರ್ಥ ನಾಯಕ ಆಗಬಹುದಾ? ಇದು ನಾವು ಕಂಡುಕೊಳ್ಳಬೇಕಾದ ಸತ್ಯ.
- **ಪ್ರತಿಕ್ರಿಯಿಸುವುದು:–** ಒಂದು ಸಂದರ್ಭ ಅಥವಾ ವಾಸ್ತವದ ಕುರಿತಾಗಿ ಹೊಂದುವ ಅನುಕೂಲಕರವಾದ ಮನಸ್ಥಿತಿಯನ್ನು, ಘಟನೆಗಳನ್ನು, ಅನುಭವಗಳನ್ನು ಹಾಗೂ ವಸ್ತು/ವ್ಯಕ್ತಿಗಳನ್ನು ಯಾವ ಭಾವದಿಂದ ಗ್ರಹಿಸುತ್ತೇವೆ ಎನ್ನುವುದನ್ನು ಇದು ನಿರ್ಧರಿಸುತ್ತದೆ. ಸಕಾರಾತ್ಮಕ ದೃಷ್ಟಿಕೋನದ ವ್ಯಕ್ತಿಗೆ ಎಲ್ಲೆಲ್ಲೂ ಅವಕಾಶಗಳು ಕಾಣಬರುತ್ತವೆ, ದಕ್ಕುತ್ತವೆ ಕೂಡ; ಇತರರಿಗೆ ಹಾಗಾಗದು, ಸೂಕ್ತ ಸಂದರ್ಭದಲ್ಲಿ ಸೂಕ್ತವಾಗಿ ನೇರ ಅಥವಾ ಪರೋಕ್ಷವಾಗಿ ಬಾವನೆಗಳನ್ನು ವ್ಯಕ್ತಪಡಿಸುವುದು ಮತ್ತು ವಿಚಾರಗಳನ್ನು ಹಂಚಿಕೊಳ್ಳುವುದು.
- **ವೈಯಕ್ತಿಕ ಶಕ್ತಿ:–** ಭಿನ್ನತೆಯನ್ನು ಗುರುತಿಸಿ ಅಂಗೀಕರಿಸುವುದು, ತಾನು ಬದುಕಿ ಇತರರನ್ನು ಬದುಕಗೊಡುವುದು. ತನ್ನ ಅಭಿಪ್ರಾಯ, ದೃಷ್ಟಿಕೋನ, ಉದ್ದೇಶ, ಮತ, ರಾಷ್ಟ್ರಿಯತೆ,ಆಚಾರಾದಿಗಳಿಗಿಂತ ಭಿನ್ನವಾದ ರೀತಿ. ಉದಾ:– ತಾಳ್ಮೆ, ಸಕಾರಾತ್ಮಕ ಭಾವವನ್ನು ಹೊಂದುವುದು, ಯಾವುದೇ ಸನ್ನಿವೇಶ ಅಥವಾ ಸಮಸ್ಯೆಗಳನ್ನು ಎದುರಿಸುವ ಸಂಕಲ್ಪ ಮಾಡಿ ಅಂದುಕೊಂಡಿದ್ದನ್ನು ಸಾದಿಸುವ ಧೃಡ ಮನೋಭಾವ ಆತ್ಮವಿಶ್ವಾಸದಿಂದ ಯಾವುದೇ ಪ್ರಭಾವಕ್ಕೊಳಗಾಗದೆ ಕಾರ್ಯನಿರ್ವಹಿಸುವುದು ವೈಯಕ್ತಿಕ ಅಭಿವೃದ್ಧಿಗಿಂತ ಸಾಮೂಹಿಕ ಅಭಿವೃದ್ಧಿಗೆ ಒತ್ತು ನೀಡುವುದಾಗಿದೆ.

### ❖ ಕರ್ತವ್ಯಗಳು:

- **ನಾಯಕನಾದವನು ಸಮಾಜ ಮತ್ತು ಸಮೂಹದಲ್ಲಿ ಅನೇಕ ವಿಧವಾದ ಜವಾಬ್ದಾರಿಗಳನ್ನು ವಹಿಸಿಕೊಳ್ಳಬೇಕು ಹಾಗೂ ಆ ಕೆಲಸ ಕಾರ್ಯಗಳನ್ನು ಶ್ರದ್ಧೆ ಮತ್ತು ಆಸಕ್ತಿಯಿಂದ ನಿರ್ವಹಿಸಬೇಕು.**
- **ನಾಯಕನಾದವನಿಗೆ ಇತರರಿಗಿಂತ ಹೆಚ್ಚಿನ ಪಾಂಡಿತ್ಯತೆ ಮತ್ತು ತಜ್ಞತೆ ಇರಬೇಕು. ಅಲ್ಲದೆ ಪ್ರಮುಖ ತೀರ್ಮಾನ ತೆಗೆದುಕೊಳ್ಳವಾಗ ಆಯಾ ವಿಭಾಗದವರ ಸಲಹೆ, ಸೂಚನೆಗಳನ್ನು ಪಡೆದು ತೀರ್ಮಾನ ಕೈಗೊಳ್ಳುವುದು**

ಮುಖ್ಯವಾಗುತ್ತದೆ ಏಕಪಕ್ಷಿಯ ನಿರ್ಧಾರಗಳು ಪ್ರಗತಿ ಕುಂಠಿತಗೊಳ್ಳಲು ಕಾರಣವಾಗುತ್ತದೆ.

- ಎಲ್ಲಾ ಅಧಿಕಾರಗಳನ್ನು ತನ್ನಲ್ಲೇ ಕೇಂದ್ರಿಕರಿಸದೆ ಜವಾಬ್ದಾರಿಗಳನ್ನು ಇತರರುಗಳಿಗೆ ಹಂಚಿ ತಾನು ಎಲ್ಲಾ ಕಾರ್ಯಗಳ ಮೇಲ್ವಿಚಾರಣೆ ನೋಡಿಕೊಳ್ಳವುದು.
- ಗುಂಪಿನಲ್ಲಿ ಬಿನ್ನಾಭಿಪ್ರಾಯವುಳ್ಳ ಅಂಶಗಳಿಗೆ ಪಕ್ಷಪಾತ ವಿಲ್ಲದೇ ಒಳಜಗಳಗಳನ್ನು ಬಗೆಹರಿಸಿ ಸಮಾದಾನ ಶಾಂತಿ ಸಾಮರಸ್ಯ ಹಾಗೂ ಪರಸ್ಪರ ಸಹಕಾರ ಮೂಡುವಂತೆ ಕ್ರಮಕೈಗೊಳ್ಳಬೇಕು.
- ಅನುಚರರಿಗೆ ಯಾವ ಆದರ್ಶಗಳನ್ನು ಭೋದಿಸುತ್ತಾನೋ ಅವುಗಳನ್ನು ತಾನು ಅನುಸರಿಸಿ ಮಾದರಿಯಾಗಿ ನುಡಿದಂತೆ ನಡೆಯುವವನಾಗಿರಬೇಕು
- ನಾಯಕ ಸಮಸ್ತ ಸದಸ್ಯರ ಪರವಾಗಿ ಅವರೆಲ್ಲರ ಪ್ರತಿನಿಧಿಯಾಗಿ ಜವಾಭ್ದಾರಿಯನ್ನು ಹೊರಬೇಕು ಸಮಸ್ಯೆಗಳು ಅವುಗಳ ಸುಧಾರಣೆ ಬಗ್ಗೆ ಇತರರಲ್ಲಿ ವಿಶ್ವಾಸ ಮೂಡಿಸಿ ತೀರ್ಮಾನ ಕೈಗೊಂಡು ಅನುಷ್ಠಾನಕ್ಕೆ ತರಬೇಕಾಗುತ್ತದೆ
- ನಾಯಕನು ಸಾಂಸ್ಥಿಕ ಗುರಿಗಳನ್ನು ಸಾಧಿಸಲು ಕೆಲವು ಯೋಜನೆಗಳನ್ನು ಸಿದ್ಧ ಪಡಿಸಿಕೊಳ್ಳವುದು ತೀರಾ ಅಗತ್ಯವಾಗಿದೆ. ಇಲ್ಲಿ ಸಕಲ ಸದಸ್ಯರಿಂದಲೂ ಸಲಹೆ ಸೂಚನೆಗಳನ್ನು ಸಂಗ್ರಹಿಸುವುದು ಬಹಳ ಅಗತ್ಯವೆಂದೆನಿಸುತ್ತದೆ ಎಲ್ಲಾ ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆಗೆ ಇದು ಪ್ರೇರಣೆಯಾಗುತ್ತದೆ.

## ತಂಡ ನಿರ್ವಹಣೆಯಲ್ಲಿ ಸಂವಹನ ಕೌಶಲ್ಯ:–

ಸರಳವಾಗಿ ಹೇಳುವುದಾದರೆ ಮಾಹಿತಿ ವಿನಿಮಯ ಮಾಡಿಕೊಳ್ಳುವ ಪ್ರಕ್ರಿಯೆಯೆ ಸಂವಹನ ಅದು ಮಾತಿನ ಮೂಲಕವಾಗಿರಬಹುದು, ಬರವಣಿಗೆಯ ಮೂಲಕವಾಗಿರಬಹುದು, ನೋಡುವುದರ ಮೂಲಕವಾಗಿರುವುದು ಅಥವಾ ಆಂಗಿಕ ಚಲನೆಗಳ ಮುಖಾಂತರವಾಗಿರಬಹುದು ಇಂದಿನ ಜಗತ್ತು ಹೆಚ್ಚಾಗಿ ಸಂವಹನ ಯುಗದ ಮೂಲಕ ಸಾಗುತ್ತಿದೆ, ಪ್ರತಿದಿನ ನಾವು ಮುಂಜಾನೆಯಿಂದ ರಾತ್ರಿಯವರೆಗೆ ಹಲವಾರು ಚಟುವಟಿಕೆಗಳನ್ನು ಸಂವಹನದ ಮೂಲಕವೇ ನಡೆಸುತ್ತೇವೆ.

**ಉದಾ:–** ವೃತ್ತಪತ್ರಿಕೆ ಓದುವುದು, ದೂರದರ್ಶನ ವೀಕ್ಷಿಸುವುದು, ಸಂಗೀತ ಆಲಿಸುವುದು, ಪ್ರಯಾಣ ಮಾಡುವುದು ಇತ್ಯಾದಿ. ಸಂವಹನದ ಪ್ರತಿಯೊಂದು ಸಂದರ್ಭದಲ್ಲಿಯೂ ಹೇಗೆ ವರ್ತಿಸಬೇಕು ಮತ್ತು ಪ್ರತಿಕ್ರಿಯೆ ನೀಡಬೇಕು ಎನ್ನುವಲ್ಲಿ ಪ್ರತಿಯೊಬ್ಬರು ತಮ್ಮದೇ ಆದಂತಹ



ವಿಧಾನದ ಮೂಲಕ ಪ್ರತಿಕ್ರಿಯಿಸುತ್ತಾರೆ ರವಾನಿಸಬೇಕಾದ ಸಂದೇಶ, ಸಂವಾಹಕ ಮತ್ತು ಸಂವಹಿತರ ನಡುವಿನ ಸಂಬಂಧದ ಮೇಲೆ ಅವಲಂಭಿತವಾಗಿರುತ್ತದೆ ಇಲ್ಲಿ ಪ್ರಜ್ಞಾತ್ಮಕ ಸಂವಹನ ಮುಖ್ಯವಾಗಿದ್ದು ಇದು ಒಂದು ನಿರ್ದಿಷ್ಠ ಉದ್ದೇಶವನ್ನು ಹೊಂದಿರುತ್ತದೆ.

ಸಂವಹನ ಕೌಶಲ್ಯ ವ್ಯಕ್ತಿಯ ನಡೆ ನುಡಿಗೆ, ಮಾತುಗಾರಿಕೆಗೆ, ಇತರರ ಜೊತೆ ಸಂಪರ್ಕ ಬೆಳೆಸುವ ಚತುರತೆಗೆ ಸಂಬಂದಿಸಿದ್ದು ವ್ಯಕ್ತಿಯ ಯಶಸ್ಸು ಅಥವಾ ವಿಫಲತೆ ಅವನ ಸಂವಹನದ ಕೌಶಲ್ಯದ ಮೇಲೆ ನಿರ್ಧಾರವಾಗಿದೆ. ವ್ಯಕ್ತಿ ಹೇಗೆ ಮಾತನಾಡುತ್ತಾನೆ? ಹೇಗೆ ಆಲಿಸುತ್ತಾನೆ, ಮಾತನಾಡುವಾಗ ಹೇಗೆ ಆಂಗಿಕ ಅಭಿವ್ಯಕ್ತಿ ಅಂಗನ್ಯಾಸ ಕರನ್ಯಾಸ ಮಾಡುತ್ತಾನೆ, ಅವನು ಮಾತನಾಡುವುದು ಇತರರಿಗೆ ಅರ್ಥವಾಗುತ್ತದೆಯೆ? ಇತರರು ಮಾತನಾಡುವುದನ್ನು ಅವನಿಗೆ ಸರಿಯಾದ ರೀತಿಯಲ್ಲಿ ಅರ್ಥವಾಗುತ್ತದೆಯೇ? ತನ್ನ ಮಾತುಗಳಿಂದ ಇನ್ನೊಬ್ಬರ ಮೇಲೆ ಹೇಗೆ ಪ್ರಭಾವ ಪರಿಣಾಮಗಳನ್ನು ಬೀರಬಹುದು? ಹೀಗೆ ವ್ಯಕ್ತಿಗೆ ಬಹಳ ಮುಖ್ಯವಾದದನ್ನು ಸಂವಹನ ಕೌಶಲ್ಯ ತಿಳಿಸಿಕೊಡುತ್ತದೆ.

ಹುಟ್ಟಿದಂದಿನಿಂದ ಸಾವಿನ ತನಕ ಎಲ್ಲರೂ ಒಂದಿಲ್ಲೊಂದು ರೀತಿಯಲ್ಲಿ ಸಂವಹಿಸುತ್ತಲೇ ಇರುತ್ತಾರೆ. ಹಾಗಾದರೆ ಇಷ್ಟು ವರ್ಷಗಳಿಂದ ಮಾತನಾಡುತ್ತಿರುವ, ಆಲಿಸುತ್ತಿರುವ, ಶಬ್ದ ರಹಿತವಾಗಿ ಮಾಹಿತಿ ರವಾನಿಸುವ ಎಲ್ಲರಿಗೂ ಸಂವಹನ ಸಿದ್ಧಿಸಿಲ್ಲವೇ? ಅವರಿಗೆ ತರಬೇತಿ ಯಾಕೆ ಬೇಕು? ಅಂದರೆ ಸಂವಹನ ಪರಿಣಾಮಕಾರಿಯಾಗಿ ಮತ್ತು ಪ್ರಭಾವಿಯಾಗಿರಬೇಕು. ನಾವು ಮಾತನ್ನೇನೋ ಆಡುತ್ತಿದ್ದೇವೆ ಅವು ಪರಿಣಾಮಕಾರಿಯಾಗಿದೆಯೇ? ನಮ್ಮ ಮಾತುಕತೆಗಳಿಂದ ಫಲಿತಾಂಶದಲ್ಲಿ ಹೆಚ್ಚು ಲಾಭವಾಗುತ್ತಿದೆಯೇ? ನಮ್ಮ ಮಾತುಗಳು ಇನ್ನೊಬ್ಬರ ಮೇಲೆ ಯಾವ ರೀತಿಯ ಪ್ರಭಾವವನ್ನೋ, ಪರಿಣಾಮವನ್ನೋ ಮಾಡುತ್ತಿದೆ? ಈ ಪ್ರಶ್ನೆಗಳಿಗೆ ಉತ್ತರ ನಾವು ಇತರರ ಜೊತೆಯಲ್ಲಿ ನಡೆಸುವ ಸಂವಹನದ ಮೇಲೆ ಅವಲಂಭಿತವಾಗಿದೆ ಅವರಿಗೆ ನಾವೆಣಿಸಿದಂತೆ

ಅರ್ಥವಾಗಬೇಕು. ಅವರು ತಮಗೆ ಅರ್ಥವಾಗುವುದನ್ನು ಕ್ರಿಯೆಯ ಮೂಲಕವೋ, ಮಾತಿನ ಮೂಲಕವೋ ಹಿಮ್ಮಾಹಿತಿ ನೀಡಬೇಕು. ಅಂತಹ ಸಂವಹನವನ್ನು ಪರಿಣಾಮಕಾರಿ ಸಂವಹನವೆಂದು ಶಾಸ್ತ್ರಜ್ಞರು ಅರ್ಥೈಸುತ್ತಾರೆ. ನಂಬಿಕೆಯಿಂದ ಕೆಲಸ ನಿರ್ವಹಿಸಿದ್ದಲ್ಲಿ ಮಾತ್ರ ವಿಶ್ವಾಸ್ವಾರ್ಹಕೆ ಉಂಟಾಗುತ್ತದೆ ನಾಯಕನಾದವನು ಎಲ್ಲರನ್ನು ಸರಿಸಮನಾಗಿ ಕಂಡು ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ನಡೆಸಬೇಕಾಗುತ್ತದೆ.



ಇಲ್ಲಿ ವಿಶ್ವಾಸಾರ್ಹ ಸಂವಹನ ಮುಖ್ಯ. ಅನೇಕ ವಿವಿಧ ಕೆಲಸಗಳನ್ನು ಕೈಗೊಳ್ಳುವುದಕ್ಕೆ ಅವಕಾಶವಿರುವಾಗ ಒಂದು ಪ್ರಮುಖ ತೀರ್ಮಾನಗಳನ್ನು ತೆಗೆದುಕೊಳ್ಳಲು ದಕ್ಷತೆಯನ್ನು ಹೊಂದಿರುವುದಾಗಿರುತ್ತದೆ

ಪರಿಣಾಮಕಾರಿ ಸಂವಹನಕ್ಕೆ ತರಬೇತಿ ನೀಡಿ ಆ ಮೂಲಕ ಅವರಲ್ಲಿ “ನಮ್ಮ ನಡೆ ವಿಶ್ವಾಸದೆಡೆಗೆ” ಎಂಬ ಆತ್ಮವಿಶ್ವಾಸ ತುಂಬುವುದಲ್ಲದೆ ವೈಯಕ್ತಿಕವಾಗಿ ಹಾಗೂ ಸಮೂಹದ ಬೇಡಿಕೆಗೆ ಅನುಗುಣವಾಗಿ ಕೆಲಸ ನಿರ್ವಹಿಸಲು ಅನುಕೂಲವಾಗುತ್ತದೆ ಆ ಮೂಲಕ ಪರಿಸ್ಥಿತಿಯನ್ನು ವ್ಯವಸ್ಥಿತವಾಗಿ ಎದುರಿಸಲು ಹಾಗೂ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಹಾಯಕವಾಗುತ್ತದೆ.

ಈ ಲಕ್ಷಣಗಳು ನಾಯಕನಾದವನಿಗೆ ಇಲ್ಲದಿದ್ದಲ್ಲಿ ಹಲವಾರು ಅವಕಾಶಗಳಿಂದ ವಂಚಿತನಾಗಬೇಕಾಗುತ್ತದೆ ಇದರಲ್ಲಿ ಇತರ ಸದಸ್ಯರು ಇವರ ಮೇಲಿಟ್ಟಿರುವ ವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ ನಿರ್ಧಾರಕೈಗೊಳ್ಳಲು ಆ ವಿಷಯ ಅಥವಾ ಸಮಸ್ಯೆಯ ಧನಾತ್ಮಕ ಮತ್ತು ಋಣಾತ್ಮಕ ಅಂಶಗಳನ್ನು ಆಲೋಚಿಸಿ ಅದು ಬೀರುವ ಫಲಿತಾಂಶದ ಅಧಾರದ ಮೇಲೆ ಉಂಟಾಗುವ ಪರಿಣಾಮವನ್ನು ಮುಂಚೆಯೇ ಊಹಿಸಿ ಅದರ ಆಧಾರದ ಮೇಲೆ ಆಯ್ಕೆಗಳನ್ನು ನಿರ್ಧರಿಸುವುದಾಗಿರುತ್ತದೆ.

ದೈನಂದಿನ ಜೀವನದಲ್ಲಿ ಕೆಲವೊಂದು ನಿರ್ಧಾರಗಳನ್ನು ತೆಗೆದುಕೊಳ್ಳುವುದು ಅತಿಸುಲಭ ಮತ್ತು ಹೆಚ್ಚು ಸಮಯದ ಅವಶ್ಯಕತೆ ಕೂಡ ಇರುವುದಿಲ್ಲ. ಕೆಲವೊಂದುಸಾರಿ ಅತಿಪ್ರಮುಖ ನಿರ್ಧಾರಗಳನ್ನು ಸಾಕಷ್ಟು ಸಮಯ ನೀಡದೆ ಆತುರವಾಗಿ ಅಥವಾ ಒತ್ತಡದಿಂದ ಕೈಗೊಳ್ಳುತ್ತೇವೆ. ಕೈಗೊಂಡ ನಿರ್ಧಾರದ ಪ್ರಮುಖ ಉದ್ದೇಶ ಸಮಸ್ಯೆಯನ್ನು ಪರಿಹರಿಸುವುದಾಗಿರುತ್ತದೆ. ಈ ನಿರ್ಧಾರದಿಂದ ಉಂಟಾಗುವ ಪರಿಣಾಮದ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಯಾವುದೇ ನಿರ್ಧಾರದ ಮೊದಲು ಯೋಚಿಸಬೇಕಾಗುತ್ತದೆ.

ಈಗಾಗಲೇ ಹಲವಾರು ಪಂಚಾಯಿತಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಇನ್ನೂ ಹೆಚ್ಚಿನ ರೀತಿಯಲ್ಲಿ ವ್ಯವಸ್ಥಿತವಾಗಿ ಪರಿಣಾಮಕಾರಿಯಾಗಿ ಎಲ್ಲ ಅಧಿಕಾರಿ ನೌಕರರನ್ನೊಳಗೊಂಡು ಒಂದು ತಂಡವಾಗಿ ಕಾರ್ಯನಿರ್ವಹಿಸಿದಲ್ಲಿ ಪ್ರಮುಖ ಬದಲಾವಣೆಯನ್ನು ನಿರೀಕ್ಷಿಸಿ ಸಾಧಿಸಲು ಸಾಧ್ಯ ಎಂಬ ಉದ್ದೇಶದಿಂದ ಗ್ರಾಮೀಣ ಜನರ ಬದುಕಿನ ವಿಶೇಷತೆಗಳನ್ನು ಅರ್ಥ ಮಾಡಿಕೊಂಡು ಅವರಲ್ಲಿ ನಾವು ಒಬ್ಬರಾಗಿ ಕಾರ್ಯನಿರ್ವಹಿಸಲು ಕೆಲವೊಂದು ಅಭಿಪ್ರಾಯ ಭಿನ್ನತೆಗಳು ಕಂಡು ಬಂದಲ್ಲಿ ಒಬ್ಬ ಅಧಿಕಾರಿಯಾಗಿ ಮತ್ತು ಸಾರ್ವಜನಿಕ ವ್ಯಕ್ತಿಯಾಗಿ ಹೇಗೆ ಕಾರ್ಯನಿರ್ವಹಿಸಬಹುದು ಎಂದು ಈಗಾಗಲೇ ಕೆಲವೊಂದು ಮಾದರಿಯಾಗಿರುವ ವ್ಯಕ್ತಿಚಿತ್ರಗಳು, ಮಾದರಿ ಪಂಚಾಯಿತಿಗಳ ನಿದರ್ಶನಗಳ ಮುಖಾಂತರ ವಿಷಯ ತಿಳಿಸಿ ಬದಲಾವಣೆಗೆ ಪ್ರೇರೆಪಿಸುವುದೇ ಮುಖ್ಯ ಗುರಿಯಾಗಿರುತ್ತದೆ.

ಸರ್ಕಾರಿ ಇಲಾಖೆಗಳಲ್ಲಿ ಕೆಳಹಂತದ ಸಮಸ್ಯೆಗಳನ್ನು ಅಧಾರವಾಗಿಟ್ಟು ತರಬೇತಿ ನಿರ್ವಹಿಸುವುದು, ಧನಾತ್ಮಕ ವಿಚಾರಗಳಿಂದ ಪರಿಹಾರ ಕೈಗೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಅಭಿವೃದ್ಧಿ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ನಡೆಸಲು ಅನುವಾಗುವುದಲ್ಲದೆ ನಮ್ಮಲ್ಲಿರುವ ಕೊರತೆಗಳಿಂತ ಸಾಮಾರ್ಥ್ಯದ ಮೇಲೆ ನಂಬಿಕೆ ಹೆಚ್ಚಾಗುತ್ತದೆ ಆ ಮೂಲಕ ಸಮಸ್ಯೆಯನ್ನು ನೋಡುವ ದೃಷ್ಟಿ ಕೋನ ಬದಲಾವಣೆ ಯಾಗುತ್ತದೆ. ಹೆಚ್ಚು ಚಟುವಟಿಕೆಗಳ ಮುಖಾಂತರ ವಿಷಯ ಮಂಡಿಸುವುದರಿಂದ ಪರಿಣಾಮಕಾರಿ ಕಲಿಕೆಗೆ ತರಬೇತಿಗಳು ಪ್ರೇರಣೆಯಾಗುತ್ತದೆ. ■

ಲೇಖನ



ಸಂಶೀರ್

ಮಾಹಿತಿ, ಶಿಕ್ಷಣ ಮತ್ತು ಸಂವಹನ
ಜಿಲ್ಲಾ ಸಮಾಲೋಚಕರು
ಸ್ವಚ್ಛ ಭಾರತ ಮಿಷನ್, ದಕ್ಷಿಣ ಕನ್ನಡ
ಜಿಲ್ಲಾ ಪಂಚಾಯತ್ ಮಂಗಳೂರು







# ಪ್ಲಾಸ್ಟಿಕ್‌ಗೆ ಗೇಟ್ ಪಾಸ್

ಕರಾವಳಿಯ ತಟದಲ್ಲಿ ನೆಲೆಗೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯು ಪಶ್ಚಿಮ ಘಟ್ಟದ ಒಂದು ಭಾಗವೂ ಆಗಿದೆ. ಸಾಂಸ್ಕೃತಿಕ ಸೊಗಡನ್ನು ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಯು ಸಾಕ್ಷರತೆ, ಶೈಕ್ಷಣಿಕ ಸಂಸ್ಥೆಗಳು, ಬ್ಯಾಂಕಿಂಗ್ ವ್ಯವಸ್ಥೆ ಸೇರಿದಂತೆ ಹತ್ತು ಹಲವು ಕಾರ್ಯಕ್ರಮಗಳಿಗೆ ತನ್ನದೇ ಆದ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆಯನ್ನು 2016-17ನೇ ಸಾಲಿನಲ್ಲಿ 'ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆ' ಎಂದು ಘೋಷಿಸಲಾಗಿದ್ದು, ಇದು ಮೊದಲ ಐದು ಜಿಲ್ಲೆಗಳಲ್ಲಿ ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆ ಎಂದು ಘೋಷಿಸಲ್ಪಟ್ಟ ಜಿಲ್ಲೆಯು ಕೂಡಾ ಇದಾಗಿದೆ.

ಸ್ವಚ್ಛತೆ ಮತ್ತು ಸುಸ್ಥಿರತೆಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಜಿಲ್ಲೆಯಲ್ಲಿ ಸ್ವಚ್ಛತಾ ನೀತಿ-2017ನ್ನು ಜಾರಿಗೆ ತರಲಾಗಿದೆ. ಗ್ರಾಮೀಣ ಜನರಿಗೆ ಮತ್ತು ಜನ ಸಾಮಾನ್ಯರಲ್ಲಿ ಜಾಗೃತಿಯನ್ನು ಮೂಡಿಸುವ ಉದ್ದೇಶದಿಂದ 2017-18ನೇ ಸಾಲನ್ನು 'ನಮ್ಮ ತ್ಯಾಜ್ಯ- ನಮ್ಮ ಹೊಣೆ' ಪರಿಕಲ್ಪನೆಯಡಿಯಲ್ಲಿ ಜಿಲ್ಲೆಯಲ್ಲಿ 'ಸ್ವಚ್ಛತಾ ವರ್ಷ' ಎಂದು ಆಚರಿಸಲಾಗುತ್ತಿದೆ. ಜಿಲ್ಲೆಯಲ್ಲಿ ಹಲವಾರು ವಿನೂತನ ಕಾರ್ಯಕ್ರಮಗಳನ್ನು ಕೂಡಾ ಪರಿಚಯಿಸಲಾಗಿದ್ದು, ಇದಕ್ಕೆ ಪೂರಕವಾಗಿ ಅಂಗನವಾಡಿ ಕಾರ್ಯಕರ್ತೆಯರು, ಸ್ವಸಹಾಯ ಸಂಘದ ಸದಸ್ಯರುಗಳನ್ನು ಕೂಡಾ ತರಬೇತಿಗೊಳಿಸಲಾಗಿದೆ.

ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ವಿನೂತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುವುದರ ಪರಿಣಾಮ ಶುಚಿ ಮತ್ತು ಶುಷ್ಕ ಪ್ಲಾಸ್ಟಿಕ್ ಸಂಗ್ರಹಣೆಗೆ ಬಹುತೇಕ ಮಂದಿ ಉತ್ತಮವಾದ ಸ್ಪಂದನೆಯನ್ನು ನೀಡುತ್ತಿದ್ದಾರೆ. ಮಕ್ಕಳ ಪೋಷಕರು ಶುಚಿ ಮತ್ತು ಶುಷ್ಕ ಪ್ಲಾಸ್ಟಿಕ್ ಸಂಗ್ರಹಣೆಗೆ ಹೆಚ್ಚು ಆದ್ಯತೆಯನ್ನು ನೀಡುತ್ತಿದ್ದಾರೆ. ಇದಲ್ಲದೇ ಜಿಲ್ಲೆಯಲ್ಲಿ ಪ್ಲಾಸ್ಟಿಕ್‌ಗಳನ್ನು ಸುಡುವುದರ ಪ್ರಮಾಣವು ಕೂಡಾ ಕಡಿಮೆಯಾಗಿದೆ. ಜಿಲ್ಲಾ ಪಂಚಾಯತಿ ಹಮ್ಮಿಕೊಂಡ ಈ ವಿನೂತನ ಕಾರ್ಯಕ್ರಮದಿಂದ ಹಲವರು ಪ್ರೇರಣೆಯನ್ನು ಪಡೆದುಕೊಂಡಿದ್ದು, ಕಸ ವಿಲೇವಾರಿಗೆ ಸಂಬಂಧಿಸಿ ಕೈಗೊಂಡ ವೈಜ್ಞಾನಿಕ ವಿಧಾನಕ್ಕೆ ಜನರಿಂದ ಮೆಚ್ಚುಗೆಯೂ ಕೂಡಾ ವ್ಯಕ್ತವಾಗಿದೆ.

**ದಕ್ಷಿಣ ಕನ್ನಡ ಜಿಲ್ಲೆಯ ಚಿತ್ರಣ**

| ಕ್ರ.ಸಂ. | ವಿಷಯ ಸೂಚಿ | ವಿವರಗಳು |
|---|---|---|
| 1 | ತಾಲೂಕು ಪಂಚಾಯತಿಗಳ ಒಟ್ಟು ಸಂಖ್ಯೆ | 05 |
| 2 | ಗ್ರಾಮ ಪಂಚಾಯತಿಗಳ ಒಟ್ಟು ಸಂಖ್ಯೆ | 230 |
| 3 | ಜಿಲ್ಲೆಯಲ್ಲಿನ ಒಟ್ಟು ಕಂದಾಯ ಗ್ರಾಮಗಳು | 366 |
| 4 | ಜಿಲ್ಲೆಯ ಒಟ್ಟು ಜನಸಂಖ್ಯೆ | 10,93,563 |
| 5 | ಜಿಲ್ಲೆಯಲ್ಲಿನ ಒಟ್ಟು ಗ್ರಾಮೀಣ ಪ್ರದೇಶದ ಅಂಗನವಾಡಿಗಳ ಸಂಖ್ಯೆ | 1688 |
| 6 | ಒಟ್ಟು ಗ್ರಾಮೀಣ ಸ್ತ್ರೀ ಶಕ್ತಿ, ಸ್ವಸಹಾಯ ಸಂಘಗಳು | 3901 |

**ವಿಷಯ ವಸ್ತುಗಳು :**

1. ಅಪಾಯಕಾರಿ ಪ್ಲಾಸ್ಟಿಕ್ ತ್ಯಾಜ್ಯಗಳಿಗೆ ಶಾಶ್ವತ ಪರಿಹಾರ ಒದಗಿಸುವುದು.
2. ಗ್ರಾಮೀಣ ಪ್ರದೇಶಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು
3. ಜನ ಸಾಮಾನ್ಯರ ಮನೋಭಾವದಲ್ಲಿ ಬದಲಾವಣೆಯನ್ನು ತರುವುದು.
4. ರಸ್ತೆ ಬದಿಯಲ್ಲಿ ತ್ಯಾಜ್ಯಗಳನ್ನು ಸುರಿಯುವ ಮತ್ತು ಜಲಮೂಲಗಳನ್ನು ಸೇರುವ ಪ್ಲಾಸ್ಟಿಕ್‌ಗಳನ್ನು ಕಡಿಮೆ ಮಾಡುವುದು.

## ಅನುಸರಣಾ ನೀತಿ :

1. ಗ್ರಾಮೀಣ ಪ್ರದೇಶದ 1688 ಅಂಗನವಾಡಿ ಕೇಂದ್ರಗಳನ್ನು ಪ್ಲಾಸ್ಟಿಕ್ ಸಂಗ್ರಹಣಾ ಕೇಂದ್ರಗಳನ್ನಾಗಿ ಗುರುತಿಸಲಾಗಿದೆ
2. ಪ್ರತಿ ಶನಿವಾರ ಮಹಿಳೆಯರಿಗೆ ಮತ್ತು ಜನ ಸಾಮಾನ್ಯರಿಗೆ ಮಾಹಿತಿಯನ್ನು ನೀಡುವ ಉದ್ದೇಶದಿಂದ ಆಕಾಶವಾಣಿ ಕೇಂದ್ರಗಳ ಮೂಲಕ ಮಾಹಿತಿಯನ್ನು ನೀಡುವುದು.
3. ಜನರು ತಮ್ಮ ತಮ್ಮ ಮನೆಗಳಲ್ಲಿ ಶುಚಿ ಮತ್ತು ಶುಷ್ಕ ಪ್ಲಾಸ್ಟಿಕ್‌ಗಳನ್ನು ಸಂಗ್ರಹಿಡುವುದಲ್ಲದೇ ಅವುಗಳನ್ನು ಪ್ರತಿ ತಿಂಗಳ 3ನೇ ಶನಿವಾರದಂದು ಅವುಗಳನ್ನು ಅಂಗನವಾಡಿಗಳಿಗೆ ನೀಡುವುದು.
4. ಅಂಗನವಾಡಿಗಳಲ್ಲಿ ಸಂಗ್ರಹಿಸಲ್ಪಟ್ಟ ಪ್ಲಾಸ್ಟಿಕ್‌ಗಳನ್ನು ಗ್ರಾಮ ಪಂಚಾಯತಿಗಳು ಅದೇ ದಿನ ಸಂಗ್ರಹಿಸಿ ಅವುಗಳನ್ನು ಮರು ಬಳಕೆಯ ಘಟಕಕ್ಕೆ ಕಳುಹಿಸಿ ಕೊಡಲು ವ್ಯವಸ್ಥೆಯನ್ನು ಮಾಡುವುದು.

## ಯೋಜನೆ ಮತ್ತು ಚಾಲನೆ :

2016ರ ಅಕ್ಟೋಬರ್ ತಿಂಗಳಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆಯನ್ನಾಗಿ ಘೋಷಿಸಲಾಗಿದೆ. ಒಡಿಎಫ್ ಪ್ಲಸ್ ಚಟುವಟಿಕೆಗಳ ಮೂಲಕ ಹಲವಾರು ಆವಿಷ್ಕಾರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಅಡುಗೆ ಮನೆಯ ಹಸಿ ತ್ಯಾಜ್ಯಗಳಿಗೆ ಮುಕ್ತಿಯನ್ನು ನೀಡುವ ಉದ್ದೇಶದಿಂದ ಮರು ಉತ್ಪಾದನೆಗೆ ಒತ್ತು ಕೊಡುವ ಮೂಲಕ ಪ್ರಕೃತಿ ಸ್ನೇಹಿ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ. 2017ರ ಸೆಪ್ಟೆಂಬರ್ 9 ರಂದು ಜಿಲ್ಲೆಯಾದ್ಯಂತ ಪ್ಲಾಸ್ಟಿಕ್ ಸಂಗ್ರಹಣಾ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಲಾಗಿದೆ.

| ಕ್ರ.ಸಂ. | ತಿಂಗಳು | ಪ್ರಮಾಣ ಕೆ.ಜಿಗಳಲ್ಲಿ | ಈವರೆಗೆ ಗ್ರಾ.ಪಂ ಮತ್ತು ಬಂದ ಗಳಿಕೆ |
|---|---|---|---|
| 1 | ಅಕ್ಟೋಬರ್ – 2017<br>ಜೂನ್ – 2018 | 986<br>820 | ಧರ್ಮಸ್ಥಳ (ಗ್ರಾ.ಪಂ) ರೂ.40,416 |
| 2 | ನವೆಂಬರ್ – 2017 | 333 | ಬೆಳ್ಳಾರೆ (ಗ್ರಾ.ಪಂ) ರೂ. 500<br>ಕಡಬ (ಗ್ರಾ.ಪಂ) ರೂ.150 |
| 3 | ಡಿಸೆಂಬರ್ – 2017 | 871 | ಮೆನ್ನಬೆಟ್ಟು (ಗ್ರಾ.ಪಂ) ರೂ.3000 |
| 4 | ಜನವರಿ 2018 | 828 | – |
| 5 | ಫೆಬ್ರವರಿ 2018 | 565 | – |
| 6 | ಮಾರ್ಚ್ 2018 | 467 | – |
| 7 | ಏಪ್ರಿಲ್ – 2018 | 571 | – |
| 8 | ಮೇ– 2018 | 682 | – |
| 9 | ಜೂನ್ – 2018 | 1609 | – |
| ಒಟ್ಟು | | 7732 | ರೂ. 44,066 |

## ಪ್ರಯೋಜನಗಳು:

1. ಶುದ್ಧ ಮತ್ತು ಸ್ವಚ್ಛ ಪರಿಸರ ನಿರ್ಮಾಣ
2. ಪ್ಲಾಸ್ಟಿಕ್ ಮತ್ತು ಶುಚಿತ್ವದ ಬಗ್ಗೆ ಗ್ರಾಮೀಣ ಜನರಲ್ಲಿ ಜಾಗೃತಿ ಮೂಡುತ್ತದೆ
3. ಸ್ವಚ್ಛ ಪರಿಸರದಿಂದ ಉತ್ತಮ ಆರೋಗ್ಯವು ನಿರ್ಮಾಣವಾಗುತ್ತದೆ
4. ಮನೋವರ್ತನೆಯಲ್ಲಿ ಬದಲಾವಣೆಯನ್ನು ತರುವುದು.
5. ದ್ರವ ತ್ಯಾಜ್ಯದ ಬಗ್ಗೆ ಜಾಗೃತಿಯನ್ನು ಮೂಡಿಸಲು ಮತ್ತು ಇದರಿಂದ ಉಂಟಾಗುವ ಖಾಯಿಲೆಗಳ ಬಗ್ಗೆ ಮುಕ್ತಿ.
6. ನೀರಿನ ಮೂಲಗಳು ಸಂರಕ್ಷಣೆಯಾಗಲಿದೆ.

## ವಾಣಿಜ್ಯ ಲಾಭಗಳು:

ಗ್ರಾಮ ಪಂಚಾಯತಿಗಳು ನಿಗದಿತ ಕೊಠಡಿಯಲ್ಲಿ ಸಂಗ್ರಹಿಸಿದ ಶುಚಿ ಮತ್ತು ಶುಷ್ಕವಾದ ಪ್ಲಾಸ್ಟಿಕ್‌ಗಳನ್ನು ಮರುಬಳಕೆ ಘಟಕಕ್ಕೆ ಏಲಂ ಮಾಡುವ ಮೂಲಕ ಒಂದಷ್ಟು ಹಣವನ್ನು ಪಡೆಯುತ್ತವೆ. ಈ ಮೂಲಕ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಸಂಪನ್ಮೂಲಗಳನ್ನಾಗಿ ಪರಿವರ್ತಿಸ ಲಾಗುತ್ತದೆ. ಸಂಗ್ರಹಿಸಲಾದ ತ್ಯಾಜ್ಯದಿಂದ ಬಂದ ಶೇಕಡಾ 25ರಷ್ಟು ಆದಾಯವನ್ನು ಅಂಗನವಾಡಿಗಳ ಅಭಿವೃದ್ಧಿಗಾಗಿ ಬಳಸಲು ಕ್ರಮ ಕೈಗೊಳ್ಳಲಾಗುತ್ತದೆ. ತ್ಯಾಜ್ಯ ಇನ್ನು ಮುಂದೆ ತ್ಯಾಜ್ಯವಾಗಿಯೇ ಉಳಿಯದು. ಈ ಒಳಗೊಳ್ಳುವಿಕೆಯು ತ್ಯಾಜ್ಯದ ಕಡೆಗಿನ ಜನರ ನೋಟವನ್ನು ಯಶಸ್ವಿಯಾಗಿ ಬದಲಾಯಿಸಿ ಬಿಡುವ ಸಾಧ್ಯತೆ ಇದೆ. ಅದರಲ್ಲೂ ವಿಶೇಷವಾಗಿ ಪ್ಲಾಸ್ಟಿಕ್.

**ಪ್ಲಾಸ್ಟಿಕ್‌ಗೆ ಗೇಟ್ ಪಾಸ್ ಸಂಬಂಧಿಸಿ ದ.ಕ.ಜಿ.ಪಂ ಸ್ವ.ಭಾ.ಮಿ ಯೂಟ್ಯೂಬ್ ಲಿಂಕ್‌ಗಳು:** https://www.youtube.com/watch?v=nQ2IjW2-nSI&t=122s ▪

ಯಶೋಗಾಥೆ



ವಿ.ಎಸ್.ಸಜ್ಜನ್

ಜಿಲ್ಲಾ ಐ.ಇ.ಸಿ ಸಂಯೋಜಕರು,
ಜಿಲ್ಲಾ ಪಂಚಾಯತಿ, ಹಾಸನ.
ಮೊ.9739367924

# ದನದ ಕೊಟ್ಟಿಗೆ ನಿರ್ಮಿಸಿ ಬದುಕು ಕಟ್ಟಿಕೊಂಡವರು

ಗ್ರಾಮೀಣ ಜನತೆಯು ಶೈಕ್ಷಣಿಕ ಆರ್ಥಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಿದಾಗ ಮಾತ್ರ ಸ್ವಾತಂತ್ರ ದ ಮೂಲ ಉದ್ದೇಶ ಈಡೇರುವುದೆಂದು ಮಹಾತ್ಮಗಾಂಧಿಯವರ ಅಭಿಪ್ರಾಯವಾಗಿತ್ತು, ಎಲ್ಲಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿಯು ಪಂಚಾಯತ್‌ರಾಜ್ ಸಂಸ್ಥೆ ಹಾಗೂ ಇತರೆ ಅಭಿವೃದ್ಧಿ ಇಲಾಖೆಗಳ ಅನುಷ್ಠಾನಾಧಿಕಾರಿಗಳ ಹೊಣೆಗಾರಿಕೆ ಯಾಗಿರುತ್ತದೆ, ಆದ್ದರಿಂದ ಮೂಲ ಭೂತ ಸೌರ್ಕಯಗಳನ್ನು ವ್ಯವಸ್ಥಿತವಾಗಿ ನಿರ್ಮಾಣ ಮಾಡುವ ಮೂಲಕ ಜನರ ಜೀವನವನ್ನು ಉತ್ತಮಗೋಳಿಸುವ ಸಲುವಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಸರ್ಕಾರವು ಗ್ರಾಮೀಣ ಜನರಿಗೆ ಉಪಯೋಗವಾಗುವ ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದು ಗ್ರಾಮ ಪಂಚಾಯಿತಿಗಳು ಹಂತ–ಹಂತವಾಗಿ ಕಾಮಗಾರಿಗಳನ್ನು ಅನುಷ್ಠಾನ ಮಾಡುವ ಮೂಲಕ ಗ್ರಾಮದ ಅಭಿವೃದ್ಧಿಪಡಿಸಲು ಸಕಾರವಾಗಿದೆ.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ 15 ಅಂಶಗಳ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ, ಅದರಲ್ಲಿ ನಮ್ಮ ಗ್ರಾಮ ಪಂಚಾಯಿತಿಗಳಲ್ಲಿ ನಮ್ಮ ಹೊಲ ನಮ್ಮ ದಾರಿ, ಕೆರೆ ಹೂಳತ್ತೆವುದು, ಒಕ್ಕಣೆ ಕಣ, ಜಮೀನು ಅಭಿವೃದ್ಧಿ, ದನದ ಕೊಟ್ಟಿಗೆ ನಿರ್ಮಾಣ ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳನ್ನು 2008–2009 ರಿಂದ 2017–2018ನೇ ಸಾಲಿನ ವರೆಗೆ ಯೋಜನೆಯನ್ನು ಅನುಷ್ಠಾನಗೊಳಿಸಿ ಸಂಪೂರ್ಣ ಯಶಸ್ಸು ಕಂಡಿದೆ. ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳ ಸಹಕಾರದಿಂದ ಹಾಗೂ ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯ ಸಿಬ್ಬಂದಿಗಳ ಪರಿಶ್ರಮದಿಂದ ಯೋಜನೆಗೆ ಅರ್ಥ ಕಲ್ಪಿಸಿದೆ. ಆಧುನಿಕ ಜಗತ್ತು ಬೆಳೆದಂತೆ ತಂತ್ರಜ್ಞಾನವು ಸಹ ಬೆಳೆದು ನಿಂತಿದೆ ಸರ್ಕಾರದ ಯೋಜನೆ ಕುರಿತಾದ ಮಾಹಿತಿಗಳನ್ನು ಐ.ಇ.ಸಿ ಚಟುವಟಿಕೆಯಡಿ ರೋಜ್ಗಾರ್ ದಿವಸ್ ಆಚರಣೆ ಮಾಡುವುದರ ಮೂಲಕ ಮತ್ತು ಮನೆ–ಮನೆ ಭೇಟಿ, ಕರಪತ್ರ ಹಂಚುವ ಮೂಲಕ, ಧ್ವನಿ ಮುದ್ರಕದ ಮೂಲಕ, ಬೀದಿ ನಾಟಕಗಳು, ಜಾಥಾಗಳ ಮೂಲಕ ಸಾರ್ವಜನಿಕರಿಗೆ ತಿಳಿಸಿ ಅರಿವು ಮೂಡಿಸಲಾಗುತ್ತಿದೆ.



**ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ 15 ಅಂಶಗಳ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.**

## • ಫಲಾನುಭವಿಯ ಹಿನ್ನಲೆ

ಬೈಚನಹಳ್ಳಿ ಗ್ರಾ.ಪಂ.ವ್ಯಾಪ್ತಿಯ ಬೈಚನಹಳ್ಳಿ ಗ್ರಾಮದ ಕಲ್ಪನ ಕೊಂ ಚನ್ನಕೇಶವ ಎಂಬ ಫಲಾನುಭವಿಗೆ 1 ಗಂಡು & 1 ಹೆಣ್ಣು ಮಗು ಹಾಗೂ ವೃದ್ದರಾದ ತಂದೆ–ತಾಯಿ ಇರುತ್ತಾರೆ, ಇವರೆಲ್ಲರನ್ನು ಸಾಕುವ ಜವಾಬ್ದಾರಿಯು ಚನ್ನಕೇಶವನ ಮೇಲಿರುತ್ತದೆ ಆದರೆ ಅವರ ಆದಾಯವು ತೀರ ಕಡಿಮೆ ಇರುತ್ತದೆ, ಅವರಿಗೆ ಕೇವಲ 2 ಎಕರೆ ಒಣ ಜಮೀನು ಇದ್ದು, ಮಳೆಯಾಶ್ರಿತ ಕೃಷಿಯನ್ನು ಅವಲಂಭಿಸಿರುತ್ತಾರೆ, ಜೊತಗೆ 2 ಹಸುಗಳನ್ನು ಸಾಕುತ್ತಿದ್ದು ಇದರಿಂದ ಬಂದ ಆದಾಯದಲ್ಲಿ ಅವರು ಜೀವನ ಸಾಗಿಸುತ್ತಿದ್ದರು. ಆದರೆ ಬರುವ ಆದಾಯವು ಅವರ ಕುಟುಂಬ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ ಇದರಿಂದ ದನಕರುಗಳಿಗೆ ವ್ಯವಸ್ಥಿತವಾದ ಕೊಟ್ಟಿಗೆಯನ್ನು ನಿರ್ಮಿಸಿಕೊಳ್ಳುವುದು ಸಾಧ್ಯವಾಗಿರಲಿಲ್ಲ.



## • ಕಾಮಗಾರಿಗಾಗಿ ಬೇಡಿಕೆಯ & ಅನುಷ್ಠಾನಕ್ಕೆ ಪ್ರೇರಣೆಯ ಹಿನ್ನಲೆ

ಗ್ರಾಮ ಪಂಚಾಯತಿ ವತಿಯಿಂದ ಕೈಗೊಂಡ ಉದ್ಯೋಗ ಖಾತರಿ ಪ್ರಚಾರ ವಾಹಿನಿ ರಥ ತಮ್ಮ ಗ್ರಾಮಗಳಲ್ಲಿ ಸಂಚರಿಸಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ವೈಯಕ್ತಿಕ ಅನೂಕೂಲತೆಗಳ ಬಗೆಗೆ ತಿಳಿದು ಹಾಗೂ ರೋಜ್ಗಾರ್ ದಿವಸ್ ನೆಡೆಯುವ ಸಂದರ್ಭದಲ್ಲಿ ನನ್ನ ಬಳಿ ಎರಡು ಹಸುಗಳಿವೆ ಅವುಗಳಿಗೆ ಕೊಟ್ಟಿಗೆ ಇಲ್ಲ, ಕೊಟ್ಟಿಗೆ ಮಾಡಿಕೊಳ್ಳಲು ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯಿಂದ ಅನುಕೂಲ ಮಾಡಿಕೊಡಿ ಎಂದು ಕೇಳಿದರು, ಗ್ರಾಮ ಪಂಚಾಯತಿ ಅವರಿಗೆ ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಲಾಯಿತು ಹಾಗೂ ಅವರಿಗೆ ಮೊದಲು ಜಾಬ್ ಕಾರ್ಡ್ ಮಾಡಿಸಬೇಕು ಎಂದು ತಿಳಿಸಿದಾಗ ಅದಕ್ಕೆ ಅವರು ನನ್ನ ಬಳಿ ಜಾಬ್ ಕಾರ್ಡ್ ಇದೆ ಆದರೆ ಸೌಲಭ್ಯದ ಬಗ್ಗೆ ತಿಳಿದಿರಲಿಲ್ಲ. ಅವರಿಂದ ಒಂದು ಅರ್ಜಿ ಪಡೆದು ಅವರನ್ನು ಮತ್ತು ಅಲ್ಲಿ ನೆಲೆಸಿದ್ದ ಎಲ್ಲಾ ಕೂಲಿ ಕಾರ್ಮಿಕರನ್ನು ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳಲ್ಲಿ ಭಾಗವಹಿಸಲು ತಿಳಿಸಿದೆವು, ಅಂತೆಯೇ ಕಲ್ಪನ ಕೊಂ ಚನ್ನಕೇಶವ ರವರು ವಾರ್ಡ್ ಸಭೆ & ಗ್ರಾಮ ಸಭೆಗಳಲ್ಲಿ ಭಾಗವಹಿಸಿ ಅವರಿಗೆ ಬೇಕಾಗಿರುವ ದನದ ಕೊಟ್ಟಿಗೆಯನ್ನು ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆ ಮಾಡಲಾಯಿತು. ಕ್ರಿಯಾ ಯೋಜನೆಯು ಅನುಮೋದನೆಗೊಂಡು ಬಂದ ನಂತರ ಕಲ್ಪನ ಕೊಂ ಚನ್ನಕೇಶವ ರವರಿಗೆ ಕೊಟ್ಟಿಗೆ ಕಟ್ಟಿಕೊಳ್ಳಲು ತಿಳಿಸಲಾಯಿತು.

## • ಕಾಮಗಾರಿ ಅನುಷ್ಠಾನದ ನಂತರ ಫಲಾನುಭವಿಯ ಅಭಿಪ್ರಾಯ

ಬೈಚನಹಳ್ಳಿ ಗ್ರಾಮದಲ್ಲಿ ಕಲ್ಪನ ಕೊಂ ಚನ್ನಕೇಶವ ಅವರು ಕೊಟ್ಟಿಗೆ ಕಟ್ಟಿಕೊಂಡರು ಮತ್ತು ಅವರ ಬಳಿ ಇದ್ದ 2 ಹಸುಗಳು ಕರು ಹಾಕಿದವು ಪ್ರತಿ ಬಾರಿ ಕರು ಹಾಕಿದಾಗ 2 ರಿಂದ 3 ಲೀಟರ್ ಹಾಲು ಕೊಡುತ್ತಿದ್ದವು, ಆದರೆ ಕೊಟ್ಟಿಗೆ ಕಟ್ಟಿಕೊಂಡ ನಂತರ 5 ರಿಂದ 6 ಲೀಟರ್‌ಗೆ ಹೆಚ್ಚಳವಾಯಿತು ಎಂದು ತಿಳಿಸಿದರು, ಅದು ಹೇಗೆ ಎಂದು ಕೇಳಿದಾಗ, ಅವರು ಮೊದಲು ಹಸುಗಳನ್ನು ಬೀದಿಯಲ್ಲಿ ಕಟ್ಟುತ್ತಿದ್ದೆವು ಮಳೆಯಲ್ಲಿ ನೆನೆಯುತ್ತಿದ್ದವು, ಚಳಿಯಲ್ಲಿ ನಡುಗುತ್ತಿದ್ದವು, ಬಿಸಿಲಿನಲ್ಲಿ ಒಣಗುತ್ತಿದ್ದವು ಹಾಗಾಗಿ ಅವುಗಳು ಗಾಗ್ಗೆ ರೋಗ-ರುಜನೆಗಳಿಗೆ ತುತ್ತಾಗಿ ಅನಾರೋಗ್ಯದಿಂದ ಹಾಲಿನ ಪ್ರಮಾಣವು ಕಡಿಮೆ ಆಗಿರುತ್ತದೆ, ಆದರೆ ಸುಸಜ್ಜಿತ ಕೊಟ್ಟಿಗೆ ಕಟ್ಟಿಸಿಕೊಂಡ ನಂತರ ಉತ್ತಮವಾದ ವಾತಾವರಣ ನಿರ್ಮಾಣವಾಗಿದ್ದು ಮಳೆ-ಗಾಳಿ ಬಿಸಿಲಿನ ರಕ್ಷಣೆಯಿಂದ ಈಗ ಹಸುಗಳು ಆರೋಗ್ಯಕರವಾಗಿರುತ್ತವೆ ಹಾಗೂ ಹಾಲಿನ ಪ್ರಮಾಣವು 5 ರಿಂದ 6 ಲೀಟರ್‌ಗೆ ಹೆಚ್ಚಾಯಿತು, ಇದರಿಂದ ಕುಟುಂಬದ ಆದಾಯವು ಕೂಡ ಹೆಚ್ಚಳವಾಯಿತು.

ಹಾಗೂ ಇಲಾಖೆ ಪಶುಭಾಗ್ಯ ಯೋಜನೆಯಿಂದ ಒಂದು ಹಸುವನ್ನು ನನಗೆ ಸಬ್ಸಿಡಿ ರೂಪದಲ್ಲಿ ನೀಡಿದ್ದಾರೆ, ಕರುಗಳು ಸಹ ದೊಡ್ಡದಾಗಿ ಒಂದೊಂದು ಕರು ಹಾಕಿದ್ದಾವೆ, ಅವು ಸಹ ಹೆಣ್ಣು ಕರುಗಳಾಗಿದ್ದು, ಇದೀಗ ನಾನು ಒಂದು ದಿನಕ್ಕೆ 2 ಬಾರಿ ಒಟ್ಟು 18 ರಿಂದ 20 ಲೀಟರ್ ಹಾಲನ್ನು ಡೈರಿಗೆ ಹಾಕುತ್ತಿದ್ದೇನೆ, ನನಗೆ ಒಂದು ಲೀಟರ್‌ಗೆ ರೂ.26/- ರೂಪಾಯಿಗಳು ಸಿಗುತ್ತದೆ, ಈಗ ನನ್ನ ಒಂದು ದಿನದ ಆದಾಯ ರೂ.1000-1100 ಆಗಿರುತ್ತದೆ. ಜೊತೆಗೆ ದನದ ಸಗಣಿಯನ್ನು ನಮ್ಮ ಮನೆಯ ಹಿತ್ತಲಿನಲ್ಲಿ ಗೋಬರ್ ಗ್ಯಾಸ್ ಮಾಡಿಸಿರುತ್ತೆನೆ ಇದರಿಂದ ನಮ್ಮ ಮನೆಯಲ್ಲಿ ಸೌದೆಯಿಂದ ಬರುತ್ತಿದ್ದ ಹೊಗೆ ಇರುವುದಿಲ್ಲ, ನಂತರ ಅದೇ ಸಗಣಿಯನ್ನು ಒಂದು ಕಡೆ ಶೇಕರಣೆ ಮಾಡುತ್ತೇನೆ ಅದು ಒಳ್ಳೆಯ ಸಾವಯವ ಗೊಬ್ಬರವಾಗಿದ್ದು, ಇದನ್ನು ಹೊಲಗಳಿಗೆ ಬಳಸುತ್ತಿದ್ದೇನೆ. ಇದರಿಂದ ಒಳ್ಳೆಯ ಬೆಳೆ ಬರುತ್ತಿದ್ದು, ಹೆಚ್ಚಾದ ಗೊಬ್ಬರವನ್ನು ಮಾರಾಟ ಮಾಡುತ್ತೇನೆ, ಒಂದು ವರ್ಷದಲ್ಲಿ ಒಂದು ಲಾರಿ ಲೋಡಿಗೆ ರೂ.40,000 ರಿಂದ ರೂ.45,000/- ರೂಪಾಯಿಗಳು ಆದಾಯ ಸಿಗುತ್ತದೆ. ಈಗ ನನ್ನ ಆರ್ಥಿಕ ಮಟ್ಟ ಸುಧಾರಿಸಿದೆ, ಈಗ ನನ್ನ ಕುಟುಂಬವು ಸುಖಿ ಕುಟುಂಬವಾಗಿ ನಮ್ಮ ತಂದೆ-ತಾಯಿ ತಮ್ಮ ವೃದ್ಯಾಪ್ಯ ಜೀವನವನ್ನು ಆರೋಗ್ಯದಿಂದ ಬಹಳ ನೆಮ್ಮದಿಯಿಂದ ಕಳೆಯುತ್ತಿದ್ದಾರೆ, ಅಗಾಗ್ಗೆ ನನ್ನ ಕೆಲಸದಲ್ಲಿಯು ಸಹ ಕೈ ಜೋಡಿಸುತ್ತಾರೆ,

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದ ನನ್ನ ಜೀವನ ಹಸನಾಗಿದೆ ಇಂತಹ ಸರ್ಕಾರಿ ಯೋಜನೆಗಳನ್ನು ಆದಷ್ಟು ಹೆಚ್ಚು ಜನರು ಪಡೆದು ನನ್ನಂತೆಯೇ ಅವರು ಸಹ ತಮ್ಮ ಆರ್ಥಿಕ ಮಟ್ಟವನ್ನು ಉತ್ತಮ ಪಡಿಸಿಕೊಳ್ಳಲಿ ಎಂದು ನನಗೆ ಆದ ಅನುಕೂಲತೆಯನ್ನು ಬೇರೆಯವರಿಗೂ ತಿಳಿಸುತ್ತೇನೆಂದು ಹೇಳುತ್ತ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯು ನಮ್ಮ ಬಾಳಿಗೆ ಆಶಾ ಕಿರಣವಾಗಿದೆ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ನನ್ನಂತೆಯೇ ಹೆಚ್ಚು ಹೆಚ್ಚು ಕುಟುಂಬಗಳಿಗೆ ಆಶ್ರಯವಾಗುವುದರಲ್ಲಿ ಸಂಶಯವಿಲ್ಲ, ನಮ್ಮ ಮಹಾತ್ಮ ಗಾಂಧೀ ಉದ್ಯೋಗ ಖಾತರಿ ಯೋಜನೆಯನ್ನು ನಿಯಮಾನುಸಾರ ಉಪಯೋಗಿಸಿಕೊಂಡರೆ ನಮ್ಮ ದೇಶದಲ್ಲಿರುವ "ಬಡತನ" ಎಂಬ ಪದವನ್ನು ಕೆಲವೇ ವರ್ಷಗಳಲ್ಲಿ ಶಾಶ್ವತವಾಗಿ ಅಳಿಸಿಹಾಕಲು ನಮ್ಮ ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಒಂದು ಅಸ್ತ್ರ ಎಂದು ತಮ್ಮ ಆಶಾಭಾವನೆಯನ್ನು ವ್ಯಕ್ತಪಡಿಸಿರುತ್ತಾರೆ. ■

## ಕವಿಯ(ಕ್ಷ) ಪ್ರಶ್ನೆ



# ಉದ್ಯೋಗ ಖಾತರಿ ಯೋಜನೆಯ ಆಶಯ ಸದುಪಯೋಗವಾಗಬೇಕಲ್ಲವೇ?

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ರಾಜ್ಯಾದ್ಯಂತ ಜಾರಿಯಲ್ಲಿದ್ದು ವರ್ಷಕ್ಕೆ ಕನಿಷ್ಠ 100 ದಿನಗಳ ಕೂಲಿಯನ್ನು ಅರ್ಹ ಕುಟುಂಬದ ವಯಸ್ಕರಿಗೆ ನೀಡಿ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವುದು ಯೋಜನೆಯ ಮೂಲೋದ್ದೇಶವಾಗಿರುತ್ತದೆ. ಯೋಜನೆಯಡಿ ಹಲವಾರು ಸಮುದಾಯ ಆಸ್ತಿ ಸೃಜನೆಯಲ್ಲದೆ ಫಲಾನುಭವಿಗಳಿಗೆ ತಮ್ಮ ವೈಯಕ್ತಿಕ ಕಾಮಕಾರಿಗಳನ್ನು ಕೈಗೊಳಬಹುದಾಗಿರುತ್ತದೆ. ಇದಕ್ಕಾಗಿಯೇ ಯೋಜನೆಯಡಿ ರಾಜ್ಯದ ಹಲವಾರು ಪ್ರಮುಖ ಅಭಿವೃದ್ಧಿ ಇಲಾಖೆಗಳಾದ ಕೃಷಿ, ತೋಟಗಾರಿಕೆ, ಅರಣ್ಯ, ರೇಷ್ಮೆ ಇಲಾಖೆಗಳು ಅರ್ಹ ಫಲಾನುಭವಿಗಳಿಗೆ ವೈಯಕ್ತಿಕ ಕಾಮಗಾರಿಗಳನ್ನು ಕೈಗೊಳ್ಳಲು ಕೆಲವು ನಿರ್ದಿಷ್ಟ ಮಾನದಂಡವನ್ನು ನಿಗಧಿಪಡಿಸಿವೆ. ಈ ಮಾನದಂಡಗಳನ್ನು ಕಡ್ಡಾಯವಾಗಿ ನಮ್ಮ ಫಲಾನುಭವಿಗಳು ಪಾಲಿಸಿಕೊಂಡು ಅರ್ಹ ಸೌಲಭ್ಯವನ್ನು ಯೋಜನೆಯಡಿ ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಬಹುದಾಗಿದೆ. ಆದರೆ ನಿರ್ಧಿಷ್ಟಪಡಿಸಲಾದ ಈ ಮಾನದಂಡಗಳನ್ನು ಸರಿಯಾಗಿ ಪಾಲಿಸದೆ ಹಣ ಪಾವತಿಗಾಗಿ ಬೇಡಿಕೆಯಿಡುವ ನಿದರ್ಶನಗಳು ಅಲ್ಲಲ್ಲಿ ಕಾಣಸಿಗುತ್ತಿದ್ದು ಯೋಜನೆಯ ಆಶಯಕ್ಕೆ ಧಕ್ಕೆ ಉಂಟಾಗುತ್ತಿದೆ.

## ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು.

1. ಕುಟುಂಬದ ಅರ್ಹ ನಿರುದ್ಯೋಗಿ ವಯಸ್ಕರು ಯೋಜನೆಯಡಿ ಕೂಲಿ ಪಡೆಯಲು ಅರ್ಜಿ ಸಲ್ಲಿಸಬಹುದಾಗಿರುತ್ತದೆ. ವಿದ್ಯಾರ್ಥಿಗಳು ಮತ್ತು ಉದ್ಯೋಗಿಗಳು ಅರ್ಜಿ ಸಲ್ಲಿಸುವಂತಿಲ್ಲ. ಆದರೂ ಕಟುಂಬದ ವಿದ್ಯಾರ್ಥಿಗಳು ಅಥವಾ ಉದ್ಯೋಗಿಗಳು ಯೋಜನೆಯಡಿ ಕೂಲಿಗಾಗಿ ಅರ್ಜಿ ಸಲ್ಲಿಸಿ ಹಣ ಪಡೆಯುವುದು ತಪ್ಪಲ್ಲವೆ?

2. ಕಟುಂಬದ ಸದಸ್ಯರು ಪ್ರತ್ಯೇಕಗೊಂಡಲ್ಲಿ ಅಥವಾ ಹೆಣ್ಣು ಮಕ್ಕಳು ಮದುವೆಯಾದಲ್ಲಿ, ಕುಟುಂಬದ ಸದಸ್ಯರ ಪಟ್ಟಿಯಿಂದ ನಿಯಮಾನುಸಾರ ತೆಗೆಯಲು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಬೇಕಲ್ಲವೇ?

3. ಯೊಜನೆಯಡಿ ಕಾಮಗಾರಿಗಳಲ್ಲಿ ವಿವಿಧ ಹಂತಗಳನ್ನು ನಿಗಧಿಪಡಿಸಲಾಗಿದ್ದು, ಆಯಾ ಹಂತಗಳನ್ನು ಸಂಪೂರ್ಣಗೊಳಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಿದಲ್ಲಿ ಮಾತ್ರ ಆಯಾ ಕಾಮಗಾರಿಗಳಿಗೆ ನಿಗಧಿಪಡಿಸಿದ ಪೂರ್ಣ ಹಣ ಸಂದಾಯ ಮಾಡಲಾಗುತ್ತದೆ. ಕಾಮಗಾರಿಯ ಕೆಲವು ಹಂತಗಳನ್ನಷ್ಟೇ ಕೈಗೊಂಡು ಹಣ ಸಂದಾಯ ಮಾಡಲು ಬೇಡಿಕೆಯಿಟ್ಟಲ್ಲಿ ಕಾಮಗಾರಿ ಪೂರ್ಣಗೊಳ್ಳದೇ ಇರುವುದರಿಂದ ಯೋಜನೆಯ ಸದುದ್ದೇಶ ಸಫಲಗೊಳ್ಳುವುದೇ?

4. ಪಲಾನುಭವಿಗಳು ಯೊಜನೆಯಡಿ ಕೈಗೊಂಡ ಕಾಮಗಾರಿಗಳ ಕುರಿತು ಅಗತ್ಯ ದಾಖಲಾತಿ ಮತ್ತು ಮಾಹಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಾಜಿಕ ಪರಿಶೋಧನಾ ಸಂದರ್ಭದಲ್ಲಿ ಒದಗಿಸಿ ಯೋಜನೆಯನ್ನು ಯಶಸ್ವಿಗೊಳಿಸುವುದಲ್ಲದೇ ವೈಯಕ್ತಿಕವಾಗಿ ಅಭಿವೃದ್ಧಿ ಹೊಂದುವುದು ಜಾಣತನವಲ್ಲವೇ?

**ಶ್ರೀನಿವಾಸ ವಿ.**
ನಂ.6, 13ನೇ ಅಡ್ಡರಸ್ತೆ,
ಕೇತಮಾರನಹಳ್ಳಿ, ರಾಜಾಜಿನಗರ,
ಬೆಂಗಳೂರು 560010.

**ಕರ್ನಾಟಕ ಸರ್ಕಾರ**

**ಸಂಖ್ಯೆ:ಗ್ರಾಅಪ:140:ಆರ್‌ಆರ್‌ಸಿ:18**

**ಕರ್ನಾಟಕ ಸರ್ಕಾರದ ಸಚಿವಾಲಯ**
**ಬಹುಮಹಡಿ ಕಟ್ಟಡ,**
**ಬೆಂಗಳೂರು, ದಿನಾಂಕ: 12-6-2018**

# ಸುತ್ತೋಲೆ

**ವಿಷಯ:** ಮಳೆಯಿಂದ ಹಾನಿಗೊಳಗಾಗುವ ಗ್ರಾಮೀಣ ರಸ್ತೆ ಮತ್ತು ಸೇತುವೆಗಳನ್ನು ತುರ್ತಾಗಿ ದುರಸ್ತಿ ಮಾಡಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಮಾಡುವ ಕುರಿತು.

**ಉಲ್ಲೇಖ:** ದಿನಾಂಕ: 12-6-2018ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಇಲಾಖೆಯ ಪರಿಚಯ ಮತ್ತು ಪರಿಶೀಲನೆ ಮಾಡುವ ಕುರಿತು ನಡೆಸಿದ ಸಭೆಯಲ್ಲಿ ನೀಡಿದ ಸೂಚನಾದೇಶ.

ಇತ್ತೀಚೆಗೆ ರಾಜ್ಯದ ವಿವಿಧೆಡೆಗಳಲ್ಲಿ ನಿರೀಕ್ಷೆಗೂ ಮೀರಿ ಮಳೆಯಾಗುತ್ತಿರುವುದರಿಂದ ಕೆಲವು ಕಡೆ ಪ್ರವಾಹ ಪರಿಸ್ಥಿತಿಯೂ ಸಹ ಉಂಟಾಗಿ ಜನಜೀವನ ಅಸ್ತವ್ಯಸ್ಥವಾಗುತ್ತಿರುವುದನ್ನು ಗಮನಿಸಲಾಗಿರುತ್ತದೆ. ಅಲ್ಲದೆ, ಭಾರಿ ಮಳೆಯಿಂದ ಗ್ರಾಮೀಣ ರಸ್ತೆ ಮತ್ತು ಸೇತುವೆಗಳು ಹಾನಿಗೊಳಗಾಗಿ ಜನ ಸಂಚಾರಕ್ಕೆ ತೊಂದರೆಯುಂಟಾಗುವುದು ಸಹ ಸ್ವಯಂವೇಧ್ಯವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ದಿನಾಂಕ: 12-6-2018ರಂದು ಇಲಾಖೆಯ ಪರಿಚಯ ಮತ್ತು ಪರಿಶೀಲನೆ ಮಾಡುವ ಕುರಿತು ನಡೆಸಿದ ಸಭೆಯಲ್ಲಿ ಮಳೆಯಿಂದ ಹಾನಿಗೊಳಗಾಗುವ ಗ್ರಾಮೀಣ ರಸ್ತೆ ಮತ್ತು ಸೇತುವೆಗಳನ್ನು ಸಮರೋಪಾದಿಯಲ್ಲಿ, ತುರ್ತಾಗಿ ದುರಸ್ತಿಗೊಳಿಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಲು ಸೂಚನಾದೇಶ ನೀಡಿರುತ್ತಾರೆ.

ಆದ್ದರಿಂದ, ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಂಬಂಧಪಟ್ಟ ತಾಲ್ಲೂಕುಗಳ ಅನುಷ್ಠಾನಾಧಿಕಾರಿಗಳೊಂದಿಗೆ ದಿನನಿತ್ಯ ಸಂಪರ್ಕವಿಟ್ಟುಕೊಂಡು ತಮ್ಮ ವ್ಯಾಪ್ತಿಯಲ್ಲಿ ಮಳೆಯಿಂದ ಹಾನಿಗೊಳಗಾಗುವ ಗ್ರಾಮೀಣ ರಸ್ತೆ ಮತ್ತು ಸೇತುವೆಗಳ ವಿವರಗಳನ್ನು ಪಡೆದು ಅವುಗಳನ್ನು ದುರಸ್ತಿಗೊಳಿಸಲು ತುರ್ತು ಕ್ರಮಗಳನ್ನು ಕೈಗೊಂಡು ಜನ ಸಂಚಾರಕ್ಕೆ ಯಾವುದೇ ತೊಂದರೆಯುಂಟಾಗದಂತೆ ನೋಡಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳುವುದು.

**ಮಳೆಯಿಂದ ಹಾನಿಗೊಳಗಾಗುವ ಗ್ರಾಮೀಣ ರಸ್ತೆ ಮತ್ತು ಸೇತುವೆಗಳ ತುರ್ತು ದುರಸ್ತಿ ಮಾಡಲು**

1. ಜಿಲ್ಲಾ ಪಂಚಾಯತಿಗೆ ಲಿಂಕ್ ಡಾಕ್ಯುಮೆಂಟ್‌ನಲ್ಲಿ ಲೆಕ್ಕ ಶೀರ್ಷಿಕೆ:3054ರಡಿ, ಒದಗಿಸಿರುವ ಅನುದಾನವನ್ನು ಪ್ರಥಮ ಆದ್ಯತೆಯಾಗಿ ಬಳಸಿಕೊಳ್ಳುವುದು
2. ಮಳೆಯಿಂದ ಹಾನಿಗೊಳಗಾಗಿ ತುರ್ತಾಗಿ ದುರಸ್ತಿ ಮಾಡಬೇಕಾದ ರಸ್ತೆ ಮತ್ತು ಸೇತುವೆಗಳ ವಿವರಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ ನೈಸರ್ಗಿಕ ವಿಕೋಪ ಪರಿಹಾರ ನಿಧಿಯಡಿ ಲಭ್ಯವಿರುವ ಅನುದಾನವನ್ನು ಬಳಸಿಕೊಳ್ಳುವುದು
3. ಜಿಲ್ಲಾ ಪಂಚಾಯತಿಗಳಿಗೆ ಒದಗಿಸುವ ವಿಶೇಷ ಅನುದಾನವನ್ನು ಸಹ ಈ ತುರ್ತು ಸೇವೆಗಳಿಗೆ ಬಳಸಿಕೊಳ್ಳುವುದು

ಮೇಲಿನ ಎಲ್ಲಾ ಕ್ರಮಗಳನ್ನು ಕಾಲಮಿತಿಯಲ್ಲಿ ಹಾಗೂ ಸಮಾರೋಪಾದಿಯಲ್ಲಿ ಕೈಗೊಂಡು ಮಳೆಯಿಂದ ಹಾನಿಗೊಳಗಾಗುವ ಗ್ರಾಮೀಣ ರಸ್ತೆ ಮತ್ತು ಸೇತುವೆಗಳನ್ನು ತುರ್ತಾಗಿ ದುರಸ್ತಿಗೊಳಿಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡುವುದು. ತೆಗೆದುಕೊಂಡ ಕ್ರಮಗಳನ್ನು ಸರ್ಕಾರಕ್ಕೆ ವರದಿ ಮಾಡಲು ಕೋರಿದೆ.

ಸಹಿ/-
**(ಡಾ.ಬೂವನಹಳ್ಳಿ ನಾಗರಾಜ್)**
ನಿರ್ದೇಶಕರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ತಡೆಯಲು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಲ್ಲಿ ಆಂತರಿಕ ದೂರು ನಿರ್ವಹಣಾ ಸಮಿತಿ ರಚಿಸುವ ಕುರಿತು.

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ: ಮಮ ಇ/28/ರಾಮಅ/2015, ದಿನಾಂಕ 18-11-2015.

### ಪ್ರಸ್ತಾವನೆ:

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇದಿಸುವಿಕೆ, ನಿವಾರಿಸುವಿಕೆ) ಅಧಿನಿಯಮ, 2013ನ್ನು ಕೇಂದ್ರ ಸರ್ಕಾರವು ಜಾರಿಗೊಳಿಸಿರುತ್ತದೆ. ಈ ಅಧಿನಿಯಮದನ್ವಯ ಎಲ್ಲಾ ಖಾಸಗಿ, ಸರ್ಕಾರಿ, ನಿಗಮ, ಮಂಡಳಿ, ಸಾರ್ವಜನಿಕ ಉದ್ಯಮಗಳು, ಫ್ಯಾಕ್ಟರಿಗಳಲ್ಲಿ ಆಂತರಿಕ ದೂರು ಸಮಿತಿ ರಚಿಸುವುದು ಕಡ್ಡಾಯವಾಗಿರುತ್ತದೆ. ಅದರಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಅಧಿಕಾರಿ/ ಸಿಬ್ಬಂದಿಗಳಿಗೆ ಹಲವಾರು ಸಂದರ್ಭದಲ್ಲಿ ವಿನಾಕಾರಣ ಕಿರುಕುಳ ನೀಡುವುದು, ಅಸಭ್ಯವಾಗಿ ವರ್ತಿಸುವುದು ಮತ್ತು ಅವರ ಮೇಲೆ ನಡೆಯುವ ಲೈಂಗಿಕ ಕಿರುಕುಳಗಳಿಗೆ ಸಂಬಂಧಪಟ್ಟ ದೂರುಗಳನ್ನು ಪರಿಣಾಮಕಾರಿ ಮತ್ತು ತ್ವರಿತವಾಗಿ ಪರಿಹರಿಸಲು ಉಲ್ಲೇಖಿತ ದಿನಾಂಕ: 18-11-2015ರ ಆದೇಶದಲ್ಲಿ ಆಂತರಿಕ ದೂರು ನಿರ್ವಹಣಾ ಸಮಿತಿಯನ್ನು ರಚಿಸಲಾಗಿತ್ತು.

ಪ್ರಸ್ತುತ ಸದರಿ ಸಮಿತಿಯ ಸದಸ್ಯರಾಗಿದ್ದ ಶ್ರೀಮತಿ ಪಿ.ಎಂ.ನಂದಿನಿ, ಕೆ.ಎ.ಎಸ್., ಉಪ ನಿರ್ದೇಶಕರು (ಆಡಳಿತ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಹಾಗೂ ಶ್ರೀಮತಿ ಪಿ. ಲೀಲಾವತಿ, ಉಪನಿರ್ದೇಶಕರು, ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ ರವರುಗಳು ಬೇರೆ ಹುದ್ದೆಗಳಿಗೆ ವರ್ಗಾವಣೆಗೊಂಡ ಕಾರಣ ಸದರಿ ಹುದ್ದೆಗಳಿಗೆ ಬೇರೆ ಅಧಿಕಾರಿಗಳನ್ನು ನೇಮಿಸಲಾಗಿರುತ್ತದೆ. ಹಾಗಾಗಿ ಹೊಸದಾಗಿ ಕರ್ತವ್ಯಕ್ಕೆ ಹಾಜರಾದ ಅಧಿಕಾರಿಗಳನ್ನು ಸದಸ್ಯ/ ಸದಸ್ಯ ಕಾರ್ಯದರ್ಶಿಗಳನ್ನಾಗಿ ನೇಮಿಸಬೇಕಾಗಿರುತ್ತದೆ.

**ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 164 ಸ್ವೀಮರ 2017, ಬೆಂಗಳೂರು, ದಿನಾಂಕ: 04-07-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಅಧಿಕಾರಿ /ಸಿಬ್ಬಂದಿಯಿಂದ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ ಸ್ವೀಕೃತವಾಗುವ ದೂರುಗಳನ್ನು ಪರಿಹರಿಸಲು ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡಂತೆ ಆಂತರಿಕ ದೂರು ನಿರ್ವಹಣಾ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ಸ್ವೀಕೃತವಾಗುವ ದೂರುಗಳನ್ನು ನಿಗದಿತ ಸಮಯದಲ್ಲಿ ಪರಿಹರಿಸಲು ಕ್ರಮ ಕೈಗೊಳ್ಳತಕ್ಕದ್ದು. ಹಾಗೂ ಸರ್ಕಾರದ ಮುಂದಿನ ಆದೇಶದವರೆವಿಗೂ ಈ ಸದಸ್ಯರು ಸಮಿತಿಯಲ್ಲಿ ಕಾರ್ಯನಿರ್ವಹಿಸತಕ್ಕದ್ದು.

| ಕ್ರ.ಸಂ | ಹೆಸರು ಮತ್ತು ಹುದ್ದೆ | ಆಂತರಿಕ ದೂರು ಸಮಿತಿ |
|---|---|---|
| 1 | ಶ್ರೀಮತಿ ಬಿ.ವಿ. ರೂಪಶ್ರೀ,<br>ಆರ್ಥಿಕ ನಿಯಂತ್ರಕರು, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಗ್ರಾ.ಅ.ಪ.ಇಲಾಖೆ. | ಅಧ್ಯಕ್ಷರು |
| 2 | ಶ್ರೀಮತಿ ಬಿ.ವಾಣಿ, ಕೆ.ಎ.ಎಸ್.,<br>ಜಂಟಿ ನಿರ್ದೇಶಕರು(ಆಡಳಿತ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. | ಸದಸ್ಯರು |
| 3 | ಶ್ರೀ ಸಿದ್ದೇಶ್ ಪೊತಲಕಟ್ಟಿ,<br>ಸರ್ಕಾರದ ಉಪ ಕಾರ್ಯದರ್ಶಿ(ಆ–1), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ | ಸದಸ್ಯ ಕಾರ್ಯದರ್ಶಿ |
| 4 | ಶ್ರೀಮತಿ ಕೆ.ಸುಶೀಲ,<br>ಉಪ ನಿರ್ದೇಶಕರು, ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. | ಸದಸ್ಯರು |

ಮೇಲ್ಕಂಡ ಆಂತರಿಕ ದೂರು ನಿರ್ವಹಣಾ ಸಮಿತಿಯು ಸರ್ಕಾರದ ಆದೇಶ ಸಂಖ್ಯೆ: ಮಮಇ/28/ರಾಮಆ/2015, ದಿನಾಂಕ: 18–11–2015ರಲ್ಲಿ ಸೂಚಿಸಿರುವ ಪರಿಷ್ಕೃತ ಮಾರ್ಗಸೂಚಿಗಳನ್ವಯ ಕಾರ್ಯನಿರ್ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸಹಿ/–
**(ಎಸ್.ರಂಗನಗೌಡ)**
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
(ಸೇವೆಗಳು–ಎ & ಸ್ತ್ರೀಮರ)

## ಕರ್ನಾಟಕ ಸರ್ಕಾರ

**ಸಂಖ್ಯೆ: ಗ್ರಾಅಪ 125 ಗ್ರಾಪಂಅ 2018**

**ಕರ್ನಾಟಕ ಸರ್ಕಾರದ ಸಚಿವಾಲಯ**
**ಬಹುಮಹಡಿ ಕಟ್ಟಡ,**
**ಬೆಂಗಳೂರು, ದಿನಾಂಕ:02.06.2018**

## ಅಧಿಕೃತ ಜ್ಞಾಪನ

**ವಿಷಯ:** ಸಕಾಲ ಸೇವೆಗಳ ಕಾಲಮಿತಿ ಕಡಿತಗೊಳಿಸುವ ಬಗ್ಗೆ.

**ಉಲ್ಲೇಖ:**
1) ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಟಿಪ್ಪಣಿ ಸಂಖ್ಯೆ: ಅಮುಕಾ 155 ಆಕಾ 2018, ದಿನಾಂಕ 26.02.2018
2) ದಿನಾಂಕ 02.03.2018 ರಂದು ನಿರ್ದೇಶಕರು(ಪಂ.ರಾಜ್–1) ರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ಸಭಾ ನಡವಳಿ.
3) ದಿನಾಂಕ 07.03.2018 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿ.

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಟಿಪ್ಪಣಿಯನುಸಾರ ಉಲ್ಲೇಖ (2) ರಂತೆ ಉಪಸಮಿತಿ ರಚಿಸಿ ನಡೆಸಿದ ನಡವಳಿಗಳಲ್ಲಿ ಕೈಗೊಂಡ ತೀರ್ಮಾನದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದ ಸಕಾಲ ಸೇವೆಗಳಿಗೆ ನಿಗಧಿಪಡಿಸಿದ ಕಾಲಮಿತಿಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಪರಿಷ್ಕರಿಸಿ ಆದೇಶಿಸಿದೆ. ಸದರಿ ಪರಿಷ್ಕೃತ ಸೇವೆಗಳು/ಕಾಲಮಿತಿಗಳನ್ನು ಸಕಾಲ/ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲು ಇಲಾಖೆಯ ಇ–ಆಡಳಿತ ಶಾಖೆಗೆ ಸೂಚಿಸಿದೆ. ಈ ಸೇವೆಗಳನ್ನು ಕೋರಿ ಸಲ್ಲಿಕೆಯಾಗುವ ಅರ್ಜಿಗಳನ್ನು ಸಕಾಲ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸಿ, ಸಕಾಲ ಆನ್‌ಲೈನ್ ಅರ್ಜಿ ಸಂಖ್ಯೆಯನ್ನು ನಮೂದಿತ ಪ್ರಮಾಣ ಪತ್ರಗಳನ್ನು ನೀಡುವುದು. ಸಕಾಲ ಅಧಿನಿಯಮದಡಿ ಸೇವೆಗಳನ್ನು ನಿಗಧಿಪಡಿಸಿದ ಕಾಲಮಿತಿಯಲ್ಲಿ ಒದಗಿಸಲು ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಆದೇಶಿಸಿದೆ.

| ಕ್ರ.ಸಂ. | ಸೇವೆಯ ವಿವರ | ಕಾಲಮಿತಿ |
|---|---|---|
| **1** | **ಕರ ನಿರ್ಧರಣಾ ಪಟ್ಟಿಯ ಬದಲಾವಣೆ** | **45 ದಿನ** |
| **ಉಪಸೇವೆ (ಹೊಸ ಸೇರ್ಪಡೆ)** | **ಈಗಾಗಲೇ ಇ–ಸ್ವತ್ತು ಮೂಲಕ ಆಸ್ತಿ ನಮೂನೆಗಳನ್ನು ಪಡೆದ ಆಸ್ತಿಗಳಿಗೆ ನಮೂನೆ 9, 11ಎ ಮತ್ತು 11ಬಿ ಗಳ ಪ್ರತಿಗಳನ್ನು ನೀಡುವುದು.** | **03 ದಿನ** |
| **2** | **ಕಟ್ಟಡ ಪರವಾನಗಿ (ಕ.ಗ್ರಾ.ಸ್ವ. & ಪಂ.ರಾಜ್ ಅಧಿನಿಯಮ, 1993 ರ ಪ್ರಕರಣ 64)** | **60 ದಿನ** |
| **ಉಪಸೇವೆ (ಹೊಸ ಸೇರ್ಪಡೆ)** | **ಕಟ್ಟಡ ಪರವಾನಗಿ ನವೀಕರಣ** | **15 ದಿನ** |
| **3** | **ಸಾಮಾನ್ಯ ಪರವಾನಗಿ(ವಾಣಿಜ್ಯ ಲೈಸೆನ್ಸ್)** | **45 ದಿನ** |
| **ಉಪಸೇವೆ (ಹೊಸ ಸೇರ್ಪಡೆ)** | **ಸಾಮಾನ್ಯ ಪರವಾನಗಿ(ವಾಣಿಜ್ಯ ಲೈಸೆನ್ಸ್) ನವೀಕರಣ** | **15 ದಿನ** |

| | | |
|---|---|---|
| 4<br>(ಹೊಸ ಸೇರ್ಪಡೆ) | ಕೈಗಾರಿಕೆ/ಇನ್ನಿತರೆ ಉದ್ಯಮಗಳಿಗೆ ಅನುಮತಿ ಪತ್ರ | 30 ದಿನ |
| 5<br>(ಹೊಸ ಸೇರ್ಪಡೆ) | ನಿರಾಕ್ಷೇಪಣಾ ಪತ್ರ | 30 ದಿನ |
| 6 | ಕುಡಿಯುವ ನೀರಿನ ನಿರ್ವಹಣೆ | 3 ದಿನ |
| 7 | ಬೀದಿ ದೀಪಗಳ ನಿರ್ವಹಣೆ | 3 ದಿನ |
| 8 | ಗ್ರಾಮ ನೈರ್ಮಲ್ಯ ನಿರ್ವಹಣೆ | 7 ದಿನ |
| 9 | ಜನಗಣತಿ, ಬೆಳೆಗಣತಿ, ಜಾನುವಾರು ಗಣತಿ, ಬಡತನ ರೇಖೆಗಿಂತ ಕೆಳಗಿರುವ ವ್ಯಕ್ತಿಗಳಿಗೆ ಸಂಬಂಧಿಸಿದ ದಾಸ್ತಾವೇಜುಗಳು ಮತ್ತು ಗ್ರಾಮ ಪಂಚಾಯತಿಯಿಂದ ಕಡ್ಡಾಯವಾಗಿ ನಿರ್ವಹಿಸಬೇಕಾದ ಇತರೆ ದಾಸ್ತಾವೇಜುಗಳನ್ನು ನೀಡುವುದು | 30 ದಿನ |
| 10 | ಎಸ್ಕಾಂಗಳಿಗೆ ನಿರಾಕ್ಷೇಪಣಾ ಪ್ರಮಾಣ ಪತ್ರ | 45 ದಿನ |
| ಉಪಸೇವೆ<br>(ಹೊಸ ಸೇರ್ಪಡೆ) | ನಿಯಮಾನುಸಾರ ಕಟ್ಟಡ ಪರವಾನಗಿ ಪಡೆದು ನಿರ್ಮಿಸಿಕೊಂಡಿರುವ ಕಟ್ಟಡಗಳಿಗೆ ಹೆಚ್ಚುವರಿ ವಿದ್ಯುತ್ ಸಂಪರ್ಕ ಪಡೆಯಲು ಎಸ್ಕಾಂಗಳಿಗೆ ನಿರಾಕ್ಷೇಪಣಾ ಪ್ರಮಾಣ ಪತ್ರ | 15 ದಿನ |
| 11 | ಅಕುಶಲ ಕಾರ್ಮಿಕರಿಗೆ ಉದ್ಯೋಗ ಒದಗಿಸುವುದು (ಎಂ.ಜಿ.ಎನ್. ಆರ್.ಇ.ಜಿ.ಎಸ್.) | 15 ದಿನ |
| 12 | ಅಭಿವೃದ್ಧಿ ಯೋಜನೆಗಳಲ್ಲಿ ಕಾರ್ಯನಿರ್ವಹಿಸಿದ್ದಕ್ಕಾಗಿ ಇ–ಪಾವತಿ | 15 ದಿನ |
| 13 | ಎಂಜಿಎನ್ಆರ್ಇಜಿಎ ಯೋಜನೆಗಳಡಿ ಕಾರ್ಯನಿರ್ವಹಿಸಿದ್ದಕ್ಕಾಗಿ ಇ–ಪಾವತಿ | 15 ದಿನ |
| 14 | ಅಕುಶಲ ಕಾರ್ಮಿಕರಿಗೆ ಉದ್ಯೋಗ ಚೀಟಿಯನ್ನು ಒದಗಿಸುವುದು (ಎಂ.ಜಿ.ಎನ್.ಆರ್.ಇ.ಜಿ.ಎಸ್.) | 30 ದಿನ |
| 15<br>(ಹೊಸ ಸೇರ್ಪಡೆ) | ಕುಡಿಯುವ ನೀರು ಸಂಪರ್ಕ | 15 ದಿನ |
| 16<br>(ಹೊಸ ಸೇರ್ಪಡೆ) | ನಗರ ಮತ್ತು ಗ್ರಾಮಾಂತರ ಯೋಜನಾ ಪ್ರದೇಶ ಹೊರಭಾಗದಲ್ಲಿರುವ ವಸತಿ/ಕೈಗಾರಿಕೆ ಬಡಾವಣೆ ನಕ್ಷೆ ಅನುಮೋದನೆ (1 ಎಕರೆ ಒಳಗೆ) | 60 ದಿನ |
| 17<br>(ಹೊಸ ಸೇರ್ಪಡೆ) | ನಗರ ಮತ್ತು ಗ್ರಾಮಾಂತರ ಯೋಜನಾ ಪ್ರದೇಶ ಹೊರಭಾಗದಲ್ಲಿರುವ ವಸತಿ/ಕೈಗಾರಿಕೆ ಬಡಾವಣೆ ನಕ್ಷೆ ಅನುಮೋದನೆ (1 ಎಕರೆಗಿಂತ ಹೆಚ್ಚಿಗೆ) | 60 ದಿನ |
| 18<br>(ಹೊಸ ಸೇರ್ಪಡೆ) | ಸ್ಥಳೀಯ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಗೆ ಒಳಪಡುವ ವಸತಿ/ ಕೈಗಾರಿಕೆ ಬಡಾವಣೆ ನಕ್ಷೆ ಅನುಮೋದನೆ | 60 ದಿನ |

ಸಹಿ/–

**(ಎಂ.ಕೆ. ಕೆಂಪೇಗೌಡ )**

ನಿರ್ದೇಶಕರು (ಪಂ.ರಾಜ್–1) ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

**ಗ್ರಾಅಪ 132 ಉಖಾಯೋ 2018**

**ಕರ್ನಾಟಕ ಸರ್ಕಾರದ ಸಚಿವಾಲಯ**
**ಬಹುಮಹಡಿ ಕಟ್ಟಡ,**
**ಬೆಂಗಳೂರು, ದಿನಾಂಕ:02–04–2018**

# ಸುತ್ತೋಲೆ

**ವಿಷಯ:** ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕೆಲಸ ನಿರ್ವಹಿಸುವ ಅಕುಶಲ ಕಾರ್ಮಿಕರ ಕನಿಷ್ಠ ಕೂಲಿದರವನ್ನು ಪರಿಷ್ಕರಣೆ ಮಾಡಿ ದಿನಾಂಕ: 01–04–2018ರಿಂದ ಅನ್ವಯವಾಗುವಂತೆ ಜಾರಿಗೊಳಿಸುವ ಕುರಿತು.

**ಉಲ್ಲೇಖ:**
1. ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ: F No: J-11011/1/2009-RE-III ದಿನಾಂಕ: 31–03–2018.
2. ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಅಧಿಸೂಚನೆಯ ಪತ್ರದ ಸಂಖ್ಯೆ: F No: J-11011/1/2009-RE-III ದಿನಾಂಕ: 28–03–2018.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳನ್ವಯ ಮಹಾತ್ಮ ಗಾಂಧಿ ನರೇಗಾ ಅಧಿನಿಯಮದ ಪ್ರಕರಣ 6(1)ರ ರೀತ್ಯಾ, ನರೇಗಾ ಯೋಜನೆಯಡಿ ಕೆಲಸ ನಿರ್ವಹಿಸುತ್ತಿರುವ ಅಕುಶಲ ಕಾರ್ಮಿಕರಿಗೆ 2017–18ನೇ ಸಾಲಿನಲ್ಲಿ ನೀಡುತ್ತಿರುವ ಕೂಲಿದರವಾದ ರೂ. 236/–ನ್ನು 2018–19ನೇ ಸಾಲಿಗೆ ರೂ. 249/–ಕ್ಕೆ ಹೆಚ್ಚಿಸಿ, ದಿನಾಂಕ: 01–04–2018ರಿಂದ ಅನ್ವಯವಾಗುವಂತೆ ಕರ್ನಾಟಕ ರಾಜ್ಯದಲ್ಲಿ ಜಾರಿಗೊಳಿಸುವಂತೆ ಕೇಂದ್ರ ಸರ್ಕಾರವು ರಾಜ್ಯ ಪತ್ರದಲ್ಲಿ ಪ್ರಕಟಿಸಿರುವ ಅಧಿಸೂಚನೆ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಕೆಲವು ಷರತ್ತುಗಳೊಂದಿಗೆ ಮುಂದಿನ ಅಗತ್ಯ ಕ್ರಮಕೈಗೊಳ್ಳಲು ತಿಳಿಸಿರುತ್ತಾರೆ. ಉಲ್ಲೇಖಿತ ಪತ್ರಗಳ ಪ್ರತಿಯನ್ನು ಲಗತ್ತಿಸಿದೆ. ಪ್ರಯುಕ್ತ, ಪರಿಷ್ಕೃತ ಕೂಲಿದರವನ್ನು ದಿನಾಂಕ: 01–04–2018ರಿಂದ ನರೇಗಾ ಯೋಜನೆಯಡಿ ಕೆಲಸ ನಿರ್ವಹಿಸುವ ಅಕುಶಲ ಕಾರ್ಮಿಕರಿಗೆ ಕೂಡಲೇ ಪಾವತಿಸಲು ಕ್ರಮವಹಿಸುವಂತೆ ಸೂಚಿಸಿದೆ.

ಕೂಲಿದರದ ಪರಿಷ್ಕರಣೆಯಿಂದ ಸಾಮಗ್ರಿ ವೆಚ್ಚದ ದರ ಮತ್ತು ಆಡಳಿತಾತ್ಮಕ ವೆಚ್ಚದ ದರವನ್ನು ಲೆಕ್ಕಚಾರ ಮಾಡಿ ಒಂದು ಮಾನವ ದಿನಕ್ಕೆ ವೆಚ್ಚ ಮಾಡಬೇಕಾಗಿರುವ ಘಟಕದ ದರವನ್ನು ಅಂತಿಮಗೊಳಿಸಿ, ತಿಳಿಸಬೇಕಾಗಿರುತ್ತದೆ. ಸಾಮಗ್ರಿ ವೆಚ್ಚದ ದರ ರೂ. 166.00 ಮತ್ತು ಆಡಳಿತಾತ್ಮಕ ವೆಚ್ಚದ ದರ ರೂ. 24.90ಗಳಾಗಿರುತ್ತದೆ. ಆದ್ದರಿಂದ ದಿನ ಒಂದಕ್ಕೆ ಘಟಕದ ವೆಚ್ಚದ ದರವು ಒಬ್ಬ ಕೂಲಿ ಕಾರ್ಮಿಕನಿಗೆ ಕೂಲಿ ವೆಚ್ಚ, ಸಾಮಗ್ರಿ ವೆಚ್ಚ ಮತ್ತು ಆಡಳಿತಾತ್ಮಕ ವೆಚ್ಚವು ಸೇರಿದಂತೆ ರೂ. 439.90ನ್ನು ವೆಚ್ಚ ಮಾಡಬೇಕಾಗಿರುತ್ತದೆ. ಯಾವುದೇ ಕಾರಣಕ್ಕೂ ಈಗ ತಿಳಿಸಿರುವ ಘಟಕದ ವೆಚ್ಚದ ದರವು ಮೀರದಂತೆ, ಕಾಮಗಾರಿಗಳ ಅನುಷ್ಠಾನದಲ್ಲಿ ಅಳವಡಿಸಿಕೊಂಡು ನಿರ್ವಹಿಸಬೇಕಾಗಿದೆ. ಆದ್ದರಿಂದ, ಈ ಘಟಕದ ವೆಚ್ಚದ ದರವನ್ನು ಯೋಜನೆಯ ಅನುಷ್ಠಾನದಲ್ಲಿ ಅಳವಡಿಸಿಕೊಂಡು ಕಾಮಗಾರಿಗಳನ್ನು ನಿರ್ವಹಿಸಲು ಕ್ರಮವಹಿಸುವಂತೆ ಈ ಮೂಲಕ ಸೂಚಿಸಿದೆ.

ಕೇಂದ್ರ ಸರ್ಕಾರವು 2018–19ನೇ ಸಾಲಿಗೆ ಕೂಲಿದರವನ್ನು ಅಕುಶಲ ಕಾರ್ಮಿಕರಿಗೆ ರೂ. 249.00ನ್ನು ನಿಗಧಿಪಡಿಸಿರುವುದರಿಂದ, ಒಂದು ದಿನಕ್ಕೆ ತಗಲುವ ವೆಚ್ಚ, ಕೂಲಿ, ಸಾಮಗ್ರಿ ಮತ್ತು ಆಡಳಿತಾತ್ಮಕ ವೆಚ್ಚವು ಸೇರಿದಂತೆ ರೂ. 439.90 (Cost per day) ಆಗುತ್ತದೆ. (ಕೂಲಿ ವೆಚ್ಚ + ಸಾಮಗ್ರಿ ವೆಚ್ಚ + ಆಡಳಿತಾತ್ಮಕ ವೆಚ್ಚ = ರೂ. 249.00 + ರೂ. 166.00 + ರೂ. 24.90 = 439.90).

ಸಹಿ/–
**ಆಯುಕ್ತರು, ಗ್ರಾಮೀಣಾಭಿವೃದ್ಧಿ**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರಾಮ ವಿಕಾಸ ಯೋಜನೆಯಲ್ಲಿ ಆಯ್ಕೆಯಾಗಿರುವ ಗ್ರಾಮಗಳ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2018-19ನೇ ಸಾಲಿನ ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**
1. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:ಎಎಫ್‌ಎನ್:2018 ದಿ:02.04.2018.
2. ಆರ್ಥಿಕ ಇಲಾಖೆಯ ಅಟಿ ಸಂಖ್ಯೆ:ಆಇ:216/ವೆಚ್ಚ - 6/2018 ದಿ:28.03.2018.
3. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:23:ಸುಗ್ರಾಯೋ:2015, ದಿ:13.01.2016.
4. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:23:ಸುಗ್ರಾಯೋ:2015, ದಿ:27.02.2016.
5. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:17:ಸುಗ್ರಾಯೋ:2016, ದಿ:16.05.2016.
6. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:17:ಸುಗ್ರಾಯೋ:2016, ದಿ:08.12.2016.
7. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:17:ಸುಗ್ರಾಯೋ:2016, ದಿ:03.03.2017.
8. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:11:ಸುಗ್ರಾಯೋ:2016, ದಿ:17.05.2017.
9. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:17:ಸುಗ್ರಾಯೋ:2018, ದಿ:06.04.2018.

### ಪ್ರಸ್ತಾವನೆ:

2018-19ನೇ ಸಾಲಿನ ಆಯವ್ಯಯದಲ್ಲಿ ಪ್ರಗತಿಯಲ್ಲಿರುವ ಸುವರ್ಣ ಗ್ರಾಮೋದಯ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ 2014-15ನೇ ಸಾಲಿನಿಂದ ಆರಂಭವಾಗಿರುವ ಗ್ರಾಮ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲು ಓದಲಾದ (1) ರಲ್ಲಿ ರೂ.398.04 ಕೋಟಿಗಳ ಅನುದಾನವನ್ನು ಒದಗಿಸಿ, ಈ ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ.

| | | |
|---|---|---|
| 1. 4215-02-800-0-02-132 (ಯೋಜನೆ) ಬಂಡವಾಳ ವೆಚ್ಚಗಳು | - ರೂ. 228.12 | ಕೋಟಿಗಳು |
| 2. 4215-02-800-0-02-422 (ಯೋಜನೆ) ವಿಶೇಷ ಘಟಕ ಯೋಜನೆ | - ರೂ. 115.55 | ಕೋಟಿಗಳು |
| 3. 4215-02-800-0-02-423 (ಯೋಜನೆ) ಗಿರಿಜನ ಉಪ ಯೋಜನೆ | - ರೂ. 54.37 | ಕೋಟಿಗಳು |
| **ಒಟ್ಟು** | **- ರೂ. 398.04** | **ಕೋಟಿಗಳು** |

ರಾಜ್ಯದ 189 ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಆಯ್ಕೆಗೊಂಡ 939 ಗ್ರಾಮಗಳಿಗೆ ಒಟ್ಟು ರೂ.750.00 ಕೋಟಿಗಳ ಅಂದಾಜಿನಲ್ಲಿ ಗ್ರಾಮ ವಿಕಾಸ ಯೋಜನೆಯನ್ನು ಅನುಷ್ಠಾನ ಮಾಡಲಾಗಿದೆ.

ಓದಲಾದ (3), (4), (5) (6), (7) ಮತ್ತು (8) ರಲ್ಲಿ 189 ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳಲ್ಲಿ ಆಯ್ಕೆಯಾದ ಗ್ರಾಮಗಳಿಗೆ 2015-16 ರಿಂದ 2017-18ನೇ ಸಾಲಿನಲ್ಲಿ ಈವರೆಗೆ ಒಟ್ಟು ರೂ. 678.85 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಓದಲಾದ (9) ರಲ್ಲಿ 2018-19 ನೇ ಸಾಲಿನಲ್ಲಿ ರೂ.7614.25ಲಕ್ಷಗಳನ್ನು ಗ್ರಾಮಪಂಚಾಯಿತಿವಾರು ಲಿಂಕ್ ಡಾಕ್ಯೂಮೆಂಟ್‌ನಲ್ಲಿ ಅಳವಡಿಸಲು ಆದೇಶ ಹೊರಡಿಸಲಾಗಿದೆ.

ಗ್ರಾಮ ವಿಕಾಸ ಯೋಜನೆಯಡಿ ಪ್ರಗತಿ ಸಾಧಿಸಿರುವ ವಿಧಾನಸಭಾ ಕ್ಷೇತ್ರಗಳಲ್ಲಿ ಆಯ್ಕೆಯಾದ ಗ್ರಾಮಗಳಲ್ಲಿ ಮಾತ್ರ ಕಾಮಗಾರಿಗಳ ಅನುಷ್ಠಾನಕ್ಕಾಗಿ 2018-19ನೇ ಸಾಲಿನಲ್ಲಿ ಮೊದಲನೇ ಕಂತಿನ ಅನುದಾನ ರೂ.1904.38 ಲಕ್ಷಗಳ (ರೂಪಾಯಿ ಹತ್ತೊಂಭತ್ತು ಕೋಟಿ ನಾಲ್ಕು ಲಕ್ಷದ ಮುವತ್ತ ಎಂಟು ಸಾವಿರಗಳು ಮಾತ್ರ) ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡಬೇಕಾಗಿರುತ್ತದೆ.

ಪ್ರಯುಕ್ತ ಈ ಆದೇಶ,

**ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:17:ಗ್ರಾವಿಯೋ:2018, ಬೆಂಗಳೂರು, ದಿನಾಂಕ : 26.04.2018.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಗ್ರಾಮ ವಿಕಾಸ ಯೋಜನೆ ಅನುಷ್ಠಾನಕ್ಕಾಗಿ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಒಟ್ಟು ರೂ.1904.38 ಲಕ್ಷಗಳ (ರೂಪಾಯಿ ಹತ್ತೊಂಭತ್ತು ಕೋಟಿ ನಾಲ್ಕು ಲಕ್ಷದ ಮುವತ್ತ ಎಂಟು ಸಾವಿರಗಳು ಮಾತ್ರ) ಮೊದಲನೇ ತ್ರೈಮಾಸಿಕ ಕಂತಿನ ಅನುದಾನವನ್ನು ಅನುಬಂಧದಲ್ಲಿ ವಿವರಿಸಿದಂತೆ ಆಯ್ಕೆಯಾದ ಗ್ರಾಮಗಳಿಗೆ ಲಿಂಕ್ ಡಾಕ್ಯೂಮೆಂಟ್‌ನಲ್ಲಿ ಹಂಚಿಕೆ ಮಾಡಿದಂತೆ ಗ್ರಾಮವಾರು ಹಂಚಿಕೆ ಮಾಡಿ, ಸಂಬಂಧಪಟ್ಟ 18 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನವನ್ನು ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಭರಿಸತಕ್ಕದ್ದು.

1. 4215–02–800–0–02–132 (ಯೋಜನೆ) ಬಂಡವಾಳ ವೆಚ್ಚಗಳು – ರೂ. 1091.41 ಲಕ್ಷಗಳು
2. 4215–02–800–0–02–422(ಯೋಜನೆ) ವಿಶೇಷ ಘಟಕ ಯೋಜನೆ – ರೂ. 552.80 ಲಕ್ಷಗಳು
3. 4215–02–800–0–02–423(ಯೋಜನೆ) ಗಿರಿಜನ ಉಪಯೋಜನೆ – ರೂ. 260.17 ಲಕ್ಷಗಳು

**ಒಟ್ಟು – ರೂ. 1904.38 ಲಕ್ಷಗಳು**

**ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆ ಮಾಡಿದ ಗ್ರಾಮಗಳ ಅನುಮೋದಿತ ಗ್ರಾಮಾಭಿವೃದ್ಧಿ ಯೋಜನೆಯ ಕಾಮಗಾರಿಗಳ ಅನುಷ್ಠಾನಕ್ಕಾಗಿ ಮಾತ್ರ ವಿನಿಯೋಗಿಸುವುದು.**

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಒದಗಿಸಿರುವ ಅನುದಾನವನ್ನು ಜಿಲ್ಲೆಗಳಿಗೆ/ ಗ್ರಾಮಗಳಿಗೆ ಹಂಚಿಕೆಯಾಗಿರುವ ಅನುದಾನದಲ್ಲಿ ಆಯಾ ಲೆಕ್ಕ ಶೀರ್ಷಿಕೆಯಡಿ ಕಡ್ಡಾಯವಾಗಿ ಭರಿಸತಕ್ಕದ್ದು.

ಈ ಅನುದಾನವನ್ನು ಓದಲಾದ (1) ರಲ್ಲಿ ನಿಗಧಿಪಡಿಸಿದಂತೆ ಈ ಆದೇಶವನ್ನು ಹೊರಡಿಸಲಾಗಿದೆ.

**ಷರತ್ತುಗಳು :**

1. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆ ಮಾಡಿದ ಗ್ರಾಮಗಳಲ್ಲಿ ಮಾರ್ಗಸೂಚಿಯಲ್ಲಿ ಗ್ರಾಮ ವಿಕಾಸ ಯೋಜನೆಯ ಅನುದಾನದಲ್ಲಿ ತೆಗೆದುಕೊಳ್ಳ ಬೇಕಾದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಮಾತ್ರ ಅನುದಾನವನ್ನು ವಿನಿಯೋಗಿಸುವುದು.
2. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಈ ಅನುದಾನ ಬಿಡುಗಡೆ ಆದೇಶವನ್ನು ಪಡೆದ ಕೂಡಲೇ ಅನುದಾನವನ್ನು ಖಜಾನೆಯಿಂದ ಸೆಳೆದು ತಕ್ಷಣವೇ ಗ್ರಾಮ ಪಂಚಾಯತಿಗಳಲ್ಲಿ ತೆರೆಯಲಾದ ಗ್ರಾಮ ವಿಕಾಸ ಯೋಜನೆಯ ಪ್ರತ್ಯೇಕ ಬ್ಯಾಂಕ್ ಖಾತೆಗೆ ವಿಳಂಬವಾಗದಂತೆ EFMS/RTGS ಮೂಲಕ ಅನುದಾನವನ್ನು ಒಂದು ವಾರದೊಳಗೆ ಕಡ್ಡಾಯವಾಗಿ ಜಮಾ ಮಾಡತಕ್ಕದ್ದು.
3. ಗ್ರಾಮ ವಿಕಾಸ ಯೋಜನೆಗೆ ಬಿಡುಗಡೆ ಮಾಡಿದ ಅನುದಾನವನ್ನು ಜಿಲ್ಲಾ ಪಂಚಾಯತಿಯ ಲೆಕ್ಕದಲ್ಲಿ ಉಳಿಸಿಕೊಳ್ಳದೆ ಕೂಡಲೇ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುವುದು ಮತ್ತು ವ್ಯಪಗತವಾಗದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ವಹಿಸುವುದು.
4. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಆರ್ಥಿಕ ಮತ್ತು ಭೌತಿಕ ಪ್ರಗತಿಯ ವರದಿಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಂದ ವಿಧಾನ ಸಭಾ ಕ್ಷೇತ್ರವಾರು ಪಡೆದು ಕ್ರೋಢೀಕರಿಸಿ ವರದಿಯನ್ನು ಮತ್ತು ಉಪಯುಕ್ತತಾ ಪತ್ರವನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸುವುದು.
5. ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮದಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಜನಾಂಗದವರು ಇಲ್ಲದಂತಹ ಸಂದರ್ಭದಲ್ಲಿ ಒಂದು ವಿಧಾನ ಸಭಾ ಕ್ಷೇತ್ರಕ್ಕೆ ನಿಗಧಿಪಡಿಸಿರುವ ರೂ.3.75 ಕೋಟಿಗಳ ಅನುದಾನದಲ್ಲಿ ಎಸ್.ಸಿ.ಪಿ. & ಟಿ.ಎಸ್.ಪಿ ಗೆ ನಿಗಧಿಪಡಿಸಿರುವ ಅನುದಾನವನ್ನು ಅದೇ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಆಯ್ಕೆ ಮಾಡಿರುವ ಹೆಚ್ಚು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಜನಾಂಗದ ವಾಸಿಸುವ ಗ್ರಾಮಗಳಲ್ಲಿ ಅನುದಾನವನ್ನು ಬಳಸಿಕೊಳ್ಳುವುದು.

6. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಜನರು ವಾಸಿಸುತ್ತಿಲ್ಲವೆಂಬ ಕಾರಣಕ್ಕಾಗಿ ಎಸ್.ಸಿ.ಪಿ. & ಟಿ.ಎಸ್.ಪಿ ಯೋಜನೆಗೆ ನಿಗಧಿಪಡಿಸಿರುವ ಅನುದಾನವನ್ನು ಯಾವುದೇ ಕಾರಣಕ್ಕೂ ಸಾಮಾನ್ಯ ವರ್ಗಕ್ಕೆ ಮಾರ್ಗಪಲ್ಲಟ ಮಾಡಿ ಕಾಮಗಾರಿಗಳನ್ನು ಕೈಗೊಳ್ಳುವಂತಿಲ್ಲ. ಎಸ್.ಸಿ.ಪಿ. & ಟಿ.ಎಸ್.ಪಿ ಯೋಜನೆಯಡಿ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರವಾದ ವರದಿಯನ್ನು ಪ್ರತ್ಯೇಕವಾಗಿ ಪ್ರತಿ ಮಾಹೆ ಸರ್ಕಾರಕ್ಕೆ ಸಲ್ಲಿಸುವುದು.

7. ಗ್ರಾಮ ಪಂಚಾಯತಿಗಳು ಕಾಮಗಾರಿಗಳ ಬಿಲ್ಲುಗಳ ಹಣವನ್ನು ಪಾವತಿಸುವಾಗ ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳು ಪ್ರಗತಿಯ ಎಲ್ಲಾ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸಿದ ನಂತರವೇ ಬಿಲ್ಲುಗಳ ಪಾವತಿಗೆ ಕ್ರಮ ವಹಿಸುವುದು.

8. ಗ್ರಾಮ ಪಂಚಾಯತಿಗಳು ಪೂರ್ಣಗೊಂಡ ಕಾಮಗಾರಿಗಳ ಹಣವನ್ನು ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ಬ್ಯಾಂಕ್ ಚೆಕ್ ಮೂಲಕ ಮಾತ್ರವೇ ಕಡ್ಡಾಯವಾಗಿ ಕೂಡಲೇ ಪಾವತಿಸತಕ್ಕದ್ದು. ಯಾವುದೇ ಸಂದರ್ಭದಲ್ಲಿಯೂ ನಗದುರೂಪದಲ್ಲಿ ಹಣ ಪಾವತಿಗೆ ಅವಕಾಶವಿರುವುದಿಲ್ಲ.

9. ಕಾಮಗಾರಿ ಪೂರ್ಣಗೊಂಡ ನಂತರ ಗ್ರಾಮ ವಿಕಾಸ ಯೋಜನೆಯಡಿ ಅನುದಾನ ಲಭ್ಯವಿದ್ದರೂ ಸಹ ಅನುಷ್ಠಾನ ಸಂಸ್ಥೆಗಳಿಗೆ ಹಣ ಪಾವತಿಮಾಡಲು ಗ್ರಾಮ ಪಂಚಾಯತಿಗಳು ವಿಳಂಬ ನೀತಿ ಅನುಸರಿಸಿದಲ್ಲಿ ವಿಳಂಬಕ್ಕೆ ಕಾರಣರಾದವರ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು.

10. ಮುಖ್ಯ ಇಂಜಿನಿಯರ್, ಪಿಆರ್‌ಇಡಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್ ರವರು ಗ್ರಾಮ ವಿಕಾಸ ಯೋಜನೆಯ ಎಲ್ಲಾ ಅನುಮೋದಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುಷ್ಠಾನದ ಜವಾಬ್ದಾರಿಯನ್ನು ನಿರ್ವಹಿಸುವುದು.

11. ಅನುಷ್ಠಾನಾಧಿಕಾರಿಗಳು ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರವಾದ ವರದಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ, ಮುಖ್ಯ ಇಂಜಿನಿಯರ್, ಪಿಆರ್‌ಇಡಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್ ಇವರುಗಳಿಗೆ ಪ್ರತಿ ಮಾಹೆ ಸಲ್ಲಿಸುವುದು.

12. ಮುಖ್ಯ ಇಂಜಿನಿಯರ್, ಪಿಆರ್‌ಇಡಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್ ರವರು ಕಾರ್ಯಪಾಲಕ ಅಭಿಯಂತರರು, ಪಿಆರ್‌ಇಡಿ / ಉಪ ನಿರ್ದೇಶಕರು, ಕೆಆರ್‌ಐಡಿಎಲ್ ಇವರುಗಳಿಂದ ಕಾಮಗಾರಿಗಳ ಪ್ರಗತಿಯ ವರದಿಗಳನ್ನು ಪಡೆದು ಸರ್ಕಾರಕ್ಕೆ ಕಾಲಕಾಲಕ್ಕೆ ನಿಗಧಿತ ನಮೂನೆಯಲ್ಲಿ ಸಲ್ಲಿಸುವುದು.

13. ಅನುಷ್ಠಾನಾಧಿಕಾರಿಗಳು ಹಣ ಬಳಕೆಯ ಉಪಯುಕ್ತತಾ ಪತ್ರವನ್ನು ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರುಗಳಿಗೆ ವಿಳಂಬಕ್ಕೆ ಅವಕಾಶವಿಲ್ಲದಂತೆ ಸಲ್ಲಿಸುವುದು.

14. ಈ ಆದೇಶವನ್ನು ಇಲಾಖಾ ವೆಬ್‌ಸೈಟ್ http://rdpr.kar.nic.in/ ನಲ್ಲಿ ಮಾಹಿತಿಗಾಗಿ ಅಪ್‌ಲೋಡ್ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ/–
**(ಡಾ.ಬೂವನಹಳ್ಳಿ ನಾಗರಾಜ್)**
ನಿರ್ದೇಶಕರು ಹಾಗೂ
ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## 2018–19ನೇ ಸಾಲಿಗೆ ಗ್ರಾಮವಿಕಾಸ ಯೋಜನೆಗೆ ಜಿಲ್ಲಾವಾರು ಬಿಡುಗಡೆಗೊಳಿಸಿದ 1ನೇ ತ್ರೈಮಾಸಿಕ ಕಂತಿನ ಅನುದಾನದ ವಿವರ

### ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:17: ಗ್ರಾವಿಯೋ:2018, ಬೆಂಗಳೂರು ದಿನಾಂಕ:26.04.2018.

ರೂ. ಲಕ್ಷಗಳಲ್ಲಿ

| ಕ್ರ. ಸಂ. | ಜಿಲ್ಲೆ | ವಿಧಾನಸಭಾ ಕ್ಷೇತ್ರಗಳ ಸಂಖ್ಯೆ | ಬಂಡವಾಳ ವೆಚ್ಚ (57.31%) | ಎಸ್.ಸಿ.ಪಿ (29.03%) | ಟಿ.ಎಸ್.ಪಿ (13.66%) | ಒಟ್ಟು |
|---|---|---|---|---|---|---|
| 1 | ಬೆಂಗಳೂರು(ನ) | 6 | 68.99 | 34.95 | 16.44 | 120.38 |
| 2 | ಬೆಂಗಳೂರು(ಗ್ರಾ) | 4 | 26.51 | 13.43 | 6.32 | 46.26 |
| 3 | ಬೆಳಗಾವಿ | 17 | 60.78 | 30.79 | 14.49 | 106.05 |
| 4 | ಬಳ್ಳಾರಿ | 8 | 85.97 | 43.55 | 20.49 | 150.00 |
| 5 | ಬೀದರ್ | 6 | 57.31 | 29.03 | 13.66 | 100.00 |
| 6 | ಬಿಜಾಪುರ | 8 | 85.97 | 43.55 | 20.49 | 150.00 |
| 7 | ಚಿಕ್ಕಬಳ್ಳಾಪುರ | 5 | 57.31 | 29.03 | 13.66 | 100.00 |
| 8 | ಚಿತ್ರದುರ್ಗ | 6 | 16.13 | 8.17 | 3.84 | 28.14 |
| 9 | ಗುಲ್ಬರ್ಗಾ | 8 | 85.97 | 43.55 | 20.49 | 150.00 |
| 10 | ಯಾದಗೀರ್ | 4 | 58.10 | 29.43 | 13.85 | 101.37 |
| 11 | ಹಾವೇರಿ | 6 | 5.37 | 2.72 | 1.28 | 9.37 |
| 12 | ಕೋಲಾರ | 6 | 72.50 | 36.72 | 17.28 | 126.50 |
| 13 | ಮಂಡ್ಯ | 7 | 57.31 | 29.03 | 13.66 | 100.00 |
| 14 | ಮೈಸೂರು | 8 | 94.35 | 47.79 | 22.49 | 164.63 |
| 15 | ರಾಯಚೂರು | 6 | 57.31 | 29.03 | 13.66 | 100.00 |
| 16 | ರಾಮನಗರ | 1 | 2.14 | 1.08 | 0.52 | 3.74 |
| 17 | ಶಿವಮೊಗ್ಗ | 6 | 57.31 | 29.03 | 13.66 | 100.00 |
| 18 | ತುಮಕೂರು | 10 | 71.64 | 36.30 | 17.08 | 125.00 |
| 19 | ಉ.ಕನ್ನಡ | 6 | 70.42 | 35.66 | 16.78 | 122.87 |
| ಒಟ್ಟು | | 128 | 1091.41 | 552.800 | 260.17 | 1904.38 |

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಲ್ಲಿ ಆಯ್ಕೆಯಾಗಿರುವ ಗ್ರಾಮಗಳ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2018–19ನೇ ಸಾಲಿನ ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**
1. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:145:ಎಫ್‌ಎನ್:2016, ದಿ:01.04.2017.
2. ಆರ್ಥಿಕ ಇಲಾಖೆಯ ಅಟಿ ಸಂಖ್ಯೆ:ಆಇ:79:ವೆಚ್ಚ–6:2017, ದಿ:01.04.2017.
3. ಸರ್ಕಾರಿ ಆದೇಶ ಸಮಖ್ಯೆ:ಗ್ರಾಅಪ:09:ಗ್ರಾವಿಯೋ:2017, ದಿ:20.06.2017.
4. ಸರ್ಕಾರಿ ಆದೇಶ ಸಮಖ್ಯೆ:ಗ್ರಾಅಪ:21:ಗ್ರಾವಿಯೋ:2017, ದಿ:31.08.2017.
5. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:21:ಗ್ರಾವಿಯೋ:2017, (ಭಾ–1) ದಿ:31.08.2017.
6. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:21:ಗ್ರಾವಿಯೋ:2017, (ಭಾ–2) ದಿ:23.08.2017.
7. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:21:ಗ್ರಾವಿಯೋ:2017, (ಭಾ–3) ದಿ:20.09.2017.
8. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:21:ಗ್ರಾವಿಯೋ:2017, (ಭಾ–4 ದಿ:13.10.2017.
9. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:21:ಗ್ರಾವಿಯೋ:2017, (ಭಾ–5) ದಿ:28.11.2017.
10. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:39:ಗ್ರಾವಿಯೋ:2017, ದಿ:30.10.2017.
11. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:39:ಗ್ರಾವಿಯೋ:2017, ದಿ:16.12.2017.
12. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:39:ಗ್ರಾವಿಯೋ:2017, ದಿ:07.02.2018.
13. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:17:ಗ್ರಾವಿಯೊ:2018, ದಿ:26.04.2018.

### ಪ್ರಸ್ತಾವನೆ:

2018–19ನೇ ಸಾಲಿನ ಆಯವ್ಯಯದಲ್ಲಿ ಪ್ರಗತಿಯಲ್ಲಿರುವ ಸುವರ್ಣ ಗ್ರಾಮೋದಯ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ 2014–15ನೇ ಸಾಲಿನಿಂದ ಆರಂಭವಾಗಿರುವ ಗ್ರಾಮ ವಿಕಾಸ ಯೋಜನೆ ಹಾಗೂ ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲು ಓದಲಾದ (1) ರಲ್ಲಿ ರೂ.398.04 ಕೋಟಿಗಳ ಅನುದಾನವನ್ನು ಒದಗಿಸಿ, ಈ ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ.

| | | |
|---|---|---|
| 1. | 4215–02–800–0–02–132 (ಯೋಜನೆ) ಬಂಡವಾಳ ವೆಚ್ಚಗಳು | – ರೂ. 228.12 ಕೋಟಿಗಳು |
| 2. | 4215–02–800–0–02–422 (ಯೋಜನೆ) ವಿಶೇಷ ಘಟಕ ಯೋಜನೆ | – ರೂ. 115.55 ಕೋಟಿಗಳು |
| 3. | 4215–02–800–0–02–423 (ಯೋಜನೆ) ಗಿರಿಜನ ಉಪ ಯೋಜನೆ | – ರೂ. 54.37 ಕೋಟಿಗಳು |
| | **ಒಟ್ಟು** | **– ರೂ. 398.04 ಕೋಟಿಗಳು** |

ಓದಲಾದ (3), (4), (5) (6), (7), (8), (9), (10), (11) ಮತ್ತು (12) ರಲ್ಲಿ 189 ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳಲ್ಲಿ ಆಯ್ಕೆಯಾದ ಗ್ರಾಮಗಳಿಗೆ 2017–18ನೇ ಸಾಲಿನಲ್ಲಿ ಈವರೆಗೆ ಒಟ್ಟು ರೂ. 300.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ ಮತ್ತು

ಓದಲಾದ (13) ರಲ್ಲಿ 2018–19 ನೇ ಸಾಲಿನಲ್ಲಿ ರೂ.13286.75ಲಕ್ಷಗಳನ್ನು ಗ್ರಾಮಪಂಚಾಯಿತಿವಾರು ಲಿಂಕ್ ಡಾಕ್ಯೂಮೆಂಟ್ ನಲ್ಲಿ ಅಳವಡಿಸಲು ಆದೇಶ ಹೊರಡಿಸಲಾಗಿದೆ.

ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ವಿಧಾನಸಭಾ ಕ್ಷೇತ್ರಗಳಲ್ಲಿ ಮತ್ತು ವಿಧಾನ ಪರಿಷತ್ ಸದಸ್ಯರು ಆಯ್ಕೆ ಮಾಡಿದ ಗ್ರಾಮಗಳಲ್ಲಿ ಮಾತ್ರ ಕಾಮಗಾರಿಗಳ ಅನುಷ್ಠಾನಕ್ಕಾಗಿ 2018–19ನೇ ಸಾಲಿನಲ್ಲಿ ರೂ.3321.68

ಲಕ್ಷಗಳ (ರೂಪಾಯಿ ಮೂರು ಸಾವಿರದ ಮೂನ್ನೂರ ಇಪ್ಪತ್ತೊಂದು ಲಕ್ಷದ ಅರವತ್ತೊಂದು ಸಾವಿರಗಳು ಮಾತ್ರ) ಮೊದಲ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡಬೇಕಾಗಿರುತ್ತದೆ.

ಪ್ರಯುಕ್ತ ಈ ಆದೇಶ,

**ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:17:ಗ್ರಾವಿಯೋ:2018, ಬೆಂಗಳೂರು, ದಿನಾಂಕ : 26.04.2018.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆ ಅನುಷ್ಠಾನಕ್ಕಾಗಿ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಒಟ್ಟು ರೂ.3321.68 ಲಕ್ಷಗಳ (ರೂಪಾಯಿ ಮೂವತ್ತೂರು ಕೋಟಿ ಇಪ್ಪತ್ತೊಂದು ಲಕ್ಷದ ಅರವತ್ತೆಂಟು ಸಾವಿರಗಳು ಮಾತ್ರ) ಮೊದಲ ತ್ರೈಮಾಸಿಕ ಕಂತಿನ ಅನುದಾನವನ್ನು ಅನುಬಂಧದಲ್ಲಿ ವಿವರಿಸಿದಂತೆ ಆಯ್ಕೆಯಾದ ಗ್ರಾಮಗಳಿಗೆ ಲಿಂಕ್ ಡಾಕ್ಯೂಮೆಂಟ್‌ನಲ್ಲಿ ಹಂಚಿಕೆ ಮಾಡಿದಂತೆ ಗ್ರಾಮವಾರು ಹಂಚಿಕೆ ಮಾಡಿ, ಸಂಬಂಧಪಟ್ಟ 30 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನವನ್ನು ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಭರಿಸತಕ್ಕದ್ದು.

| | |
|---|---|
| 1. 4215–02–800–0–02–132 (ಯೋಜನೆ) ಬಂಡವಾಳ ವೆಚ್ಚಗಳು | – ರೂ. 1903.65 ಲಕ್ಷಗಳು |
| 2. 4215–02–800–0–02–422 (ಯೋಜನೆ) ವಿಶೇಷ ಘಟಕ ಯೋಜನೆ | – ರೂ. 964.28 ಲಕ್ಷಗಳು |
| 3. 4215–02–800–0–02–423 (ಯೋಜನೆ) ಗಿರಿಜನ ಉಪ ಯೋಜನೆ | – ರೂ. 453.75 ಲಕ್ಷಗಳು |
| **ಒಟ್ಟು** | **– ರೂ. 3321.68 ಲಕ್ಷಗಳು** |

**ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆ ಮಾಡಿದ ಗ್ರಾಮಗಳ ಅನುಮೋದಿತ ಗ್ರಾಮಾಭಿವೃದ್ಧಿ ಯೋಜನೆಯ ಕಾಮಗಾರಿಗಳ ಅನುಷ್ಠಾನಕ್ಕಾಗಿ ಮಾತ್ರ ವಿನಿಯೋಗಿಸುವುದು.**

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಒದಗಿಸಿರುವ ಅನುದಾನವನ್ನು ಜಿಲ್ಲೆಗಳಿಗೆ/ಗ್ರಾಮಗಳಿಗೆ ಹಂಚಿಕೆಯಾಗಿರುವ ಅನುದಾನದಲ್ಲಿ ಆಯಾ ಲೆಕ್ಕ ಶೀರ್ಷಿಕೆಯಡಿ ಕಡ್ಡಾಯವಾಗಿ ಭರಿಸತಕ್ಕದ್ದು.

ಈ ಅನುದಾನವನ್ನು ಓದಲಾದ (1) ರಲ್ಲಿ ನಿಗಧಿಪಡಿಸಿದಂತೆ ಈ ಆದೇಶವನ್ನು ಹೊರಡಿಸಲಾಗಿದೆ.

**ಷರತ್ತುಗಳು:**

1. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆ ಮಾಡಿದ ಗ್ರಾಮಗಳಲ್ಲಿ ಮಾರ್ಗಸೂಚಿಯಲ್ಲಿ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯ ಅನುದಾನದಲ್ಲಿ ತೆಗೆದುಕೊಳ್ಳ ಬೇಕಾದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಮಾತ್ರ ಅನುದಾನವನ್ನು ವಿನಿಯೋಗಿಸುವುದು.
2. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಈ ಅನುದಾನ ಬಿಡುಗಡೆ ಆದೇಶವನ್ನು ಪಡೆದ ಕೂಡಲೇ ಅನುದಾನವನ್ನು ಖಜಾನೆಯಿಂದ ಸೆಳೆದು ತಕ್ಷಣವೇ ಗ್ರಾಮ ಪಂಚಾಯತಿಗಳಲ್ಲಿ ತೆರೆಯಲಾದ ಬ್ಯಾಂಕ್ ಖಾತೆಗೆ ವಿಳಂಬವಾಗದಂತೆ EFMS/RTGS ಮೂಲಕ ಅನುದಾನವನ್ನು ಒಂದು ವಾರದೊಳಗೆ ಕಡ್ಡಾಯವಾಗಿ ಜಮಾ ಮಾಡತಕ್ಕದ್ದು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರುಗಳು ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನವನ್ನು ಖಜಾನೆಯಿಂದ ಹಣ ಸೆಳೆದು ಗ್ರಾಮ ಪಂಚಾಯಿತಿಗಳಿಗೆ ನೀಡುವಲ್ಲಿ ವಿಳಂಭ ಮಾಡಬಾರದು ಹಾಗೂ ಹಣವನ್ನು ಯಾವುದೇ ಕಾರಣಕ್ಕೂ ವ್ಯಪಗತ ಮಾಡಬಾರದು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಆರ್ಥಿಕ ಮತ್ತು ಭೌತಿಕ ಪ್ರಗತಿಯವರದಿಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಂದ ವಿಧಾನ ಸಭಾ ಕ್ಷೇತ್ರವಾರು ಪಡೆದು ಕ್ರೋಢೀಕರಿಸಿ ವರದಿಯನ್ನು ಮತ್ತು ಉಪಯುಕ್ತತಾ ಪತ್ರವನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸುವುದು.
5. ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮದಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಜನಾಂಗದವರು ಇಲ್ಲದಂತಹ ಸಂದರ್ಭದಲ್ಲಿ ಒಂದು ವಿಧಾನ ಸಭಾ ಕ್ಷೇತ್ರಕ್ಕೆ ನಿಗಧಿಪಡಿಸಿರುವ ಅನುದಾನದಲ್ಲಿ ಎಸ್.ಸಿ.ಪಿ. & ಟಿ.ಎಸ್.ಪಿ ಗೆ ನಿಗಧಿಪಡಿಸಿರುವ ಅನುದಾನವನ್ನು ಅದೇ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ

ಆಯ್ಕೆ ಮಾಡಿರುವ ಹೆಚ್ಚು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಜನಾಂಗದ ವಾಸಿಸುವ ಗ್ರಾಮಗಳಲ್ಲಿ ಅನುದಾನವನ್ನು ಬಳಸಿಕೊಳ್ಳುವುದು.

6. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಜನರು ವಾಸಿಸುತ್ತಿಲ್ಲವೆಂಬ ಕಾರಣಕ್ಕಾಗಿ ಎಸ್.ಸಿ.ಪಿ. & ಟಿ.ಎಸ್.ಪಿ ಯೋಜನೆಗೆ ನಿಗಧಿಪಡಿಸಿರುವ ಅನುದಾನವನ್ನು ಯಾವುದೇ ಕಾರಣಕ್ಕೂ ಸಾಮಾನ್ಯ ವರ್ಗಕ್ಕೆ ಮಾರ್ಗಪಲ್ಲಟ ಮಾಡಿ ಕಾಮಗಾರಿಗಳನ್ನು ಕೈಗೊಳ್ಳುವಂತಿಲ್ಲ. ಎಸ್.ಸಿ.ಪಿ. & ಟಿ.ಎಸ್.ಪಿ ಯೋಜನೆಯಡಿ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರವಾದ ವರದಿಯನ್ನು ಪ್ರತ್ಯೇಕವಾಗಿ ಪ್ರತಿ ಮಾಹೆ ಸರ್ಕಾರಕ್ಕೆ ಸಲ್ಲಿಸುವುದು.

7. ಗ್ರಾಮ ಪಂಚಾಯತಿಗಳು ಕಾಮಗಾರಿಗಳ ಬಿಲ್ಲುಗಳ ಹಣವನ್ನು ಪಾವತಿಸುವಾಗ ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳು ಪ್ರಗತಿಯ ಎಲ್ಲಾ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸಿದ ನಂತರವೇ ಬಿಲ್ಲುಗಳ ಪಾವತಿಗೆ ಕ್ರಮ ವಹಿಸುವುದು.

8. ಗ್ರಾಮ ಪಂಚಾಯತಿಗಳು ಪೂರ್ಣಗೊಂಡ ಕಾಮಗಾರಿಗಳ ಹಣವನ್ನು ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ಬ್ಯಾಂಕ್ ಚೆಕ್ ಮೂಲಕ ಮಾತ್ರವೇ ಕಡ್ಡಾಯವಾಗಿ ಕೂಡಲೇ ಪಾವತಿಸತಕ್ಕದ್ದು. ಯಾವುದೇ ಸಂದರ್ಭದಲ್ಲಿಯೂ ನಗದುರೂಪದಲ್ಲಿ ಹಣ ಪಾವತಿಗೆ ಅವಕಾಶವಿರುವುದಿಲ್ಲ.

9. ಕಾಮಗಾರಿ ಪೂರ್ಣಗೊಂಡ ನಂತರ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಅನುದಾನ ಲಭ್ಯವಿದ್ದರೂ ಸಹ ಅನುಷ್ಟಾನ ಸಂಸ್ಥೆಗಳಿಗೆ ಹಣ ಪಾವತಿಮಾಡಲು ಗ್ರಾಮ ಪಂಚಾಯತಿಗಳು ವಿಳಂಬ ನೀತಿ ಅನುಸರಿಸಿದಲ್ಲಿ ವಿಳಂಬಕ್ಕೆ ಕಾರಣರಾದವರ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು.

10. ಮುಖ್ಯ ಇಂಜಿನಿಯರ್, ಪಿಆರ್ಇಡಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಆರ್ಐಡಿಎಲ್ ರವರು ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯ ಎಲ್ಲಾ ಅನುಮೋದಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುಷ್ಠಾನದ ಜವಾಬ್ದಾರಿಯನ್ನು ನಿರ್ವಹಿಸುವುದು.

11. ಅನುಷ್ಠಾನಾಧಿಕಾರಿಗಳು ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರವಾದ ವರದಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ, ಮುಖ್ಯ ಇಂಜಿನಿಯರ್, ಪಿಆರ್ಇಡಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಆರ್ಐಡಿಎಲ್ ಇವರುಗಳಿಗೆ ಪ್ರತಿ ಮಾಹೆ ಸಲ್ಲಿಸುವುದು.

12. ಮುಖ್ಯ ಇಂಜಿನಿಯರ್, ಪಿಆರ್ಇಡಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಆರ್ಐಡಿಎಲ್ ರವರು ಕಾರ್ಯಪಾಲಕ ಅಭಿಯಂತರರು, ಪಿಆರ್ಇಡಿ / ಉಪ ನಿರ್ದೇಶಕರು, ಕೆಆರ್ಐಡಿಎಲ್ ಇವರುಗಳಿಂದ ಕಾಮಗಾರಿಗಳ ಪ್ರಗತಿಯ ವರದಿಗಳನ್ನು ಪಡೆದು ಸರ್ಕಾರಕ್ಕೆ ಕಾಲಕಾಲಕ್ಕೆ ನಿಗಧಿತ ನಮೂನೆಯಲ್ಲಿ ಸಲ್ಲಿಸುವುದು.

13. ಅನುಷ್ಠಾನಾಧಿಕಾರಿಗಳು ಹಣ ಬಳಕೆಯ ಉಪಯುಕ್ತತಾ ಪತ್ರವನ್ನು ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರುಗಳಿಗೆ ವಿಳಂಬಕ್ಕೆ ಅವಕಾಶವಿಲ್ಲದಂತೆ ಸಲ್ಲಿಸುವುದು.

14. ಈ ಆದೇಶವನ್ನು ಇಲಾಖಾ ವೆಬ್‌ಸೈಟ್ http://rdpr.kar.nic.in/ ನಲ್ಲಿ ಮಾಹಿತಿಗಾಗಿ ಅಪ್‌ಲೋಡ್ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ/–
**(ಡಾ.ಬೂವನಹಳ್ಳಿ ನಾಗರಾಜ್)**
ನಿರ್ದೇಶಕರು ಹಾಗೂ
ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## 2018–19ನೇ ಸಾಲಿಗೆ ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಗೆ ಜಿಲ್ಲಾವಾರು ಬಿಡುಗಡೆಗೊಳಿಸಿದ 1ನೇ ತ್ರೈಮಾಸಿಕ ಕಂತಿನ ಅನುದಾನದ ವಿವರ

**ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:17:ಗ್ರಾವಿಯೋ:2018, ಬೆಂಗಳೂರು ದಿನಾಂಕ:26.04.2018.**

ರೂ. ಲಕ್ಷಗಳಲ್ಲಿ

| ಕ್ರ. ಸಂ. | ಜಿಲ್ಲೆ | ಆಯ್ಕೆಯಾದ ಗ್ರಾಮಗಳ ಸಂಖ್ಯೆ | ಬಂಡವಾಳ ವೆಚ್ಚ (57.31%) | ಎಸ್.ಸಿ.ಪಿ (29.03%) | ಟಿ.ಎಸ್.ಪಿ (13.66%) | ಒಟ್ಟು |
|---|---|---|---|---|---|---|
| 1 | ಬೆಳಗಾವಿ | 67 | 140.54 | 71.19 | 33.50 | 245.22 |
| 2 | ಬಾಗಲಕೋಟೆ | 34 | 69.22 | 35.06 | 16.50 | 120.78 |
| 3 | ಬೆಂಗಳೂರು(ನ) | 35 | 73.76 | 37.36 | 17.58 | 128.70 |
| 4 | ಬೆಂಗಳೂರು(ಗ್ರಾ) | 20 | 41.95 | 21.25 | 10.00 | 73.20 |
| 5 | ಬಳ್ಳಾರಿ | 36 | 75.51 | 38.25 | 18.00 | 131.76 |
| 6 | ಬೀದರ್ | 22 | 46.15 | 23.37 | 11.00 | 80.52 |
| 7 | ಬಿಜಾಪುರ | 30 | 62.93 | 31.87 | 15.00 | 109.80 |
| 8 | ಚಿಕ್ಕಬಳ್ಳಾಪುರ | 28 | 52.44 | 26.56 | 12.50 | 91.50 |
| 9 | ಚಿಕ್ಕಮಗಳೂರು | 29 | 60.83 | 30.81 | 14.50 | 106.14 |
| 10 | ಚಿತ್ರದುರ್ಗ | 30 | 62.93 | 31.87 | 15.00 | 109.80 |
| 11 | ಚಾಮರಾಜನಗರ | 20 | 41.95 | 21.25 | 10.00 | 73.20 |
| 12 | ಧಾರವಾಡ | 23 | 48.24 | 24.44 | 11.50 | 84.18 |
| 13 | ದಾವಣಗೆರೆ | 38 | 79.71 | 40.37 | 19.00 | 139.08 |
| 14 | ದಕ್ಷಿಣಕನ್ನಡ | 31 | 65.02 | 32.94 | 15.50 | 113.46 |
| 15 | ಗದಗ | 20 | 41.95 | 21.25 | 10.00 | 73.20 |
| 16 | ಗುಲ್ಬರ್ಗಾ | 37 | 77.61 | 39.31 | 18.50 | 135.42 |
| 17 | ಯಾದಗೀರ್ | 16 | 33.56 | 17.00 | 8.00 | 58.56 |
| 18 | ಹಾವೇರಿ | 30 | 62.93 | 31.87 | 15.00 | 109.80 |
| 19 | ಹಾಸನ | 34 | 71.32 | 36.12 | 17.00 | 124.44 |
| 20 | ಕೋಲಾರ | 27 | 56.63 | 28.69 | 13.50 | 98.82 |
| 21 | ಕೊಪ್ಪಳ | 20 | 41.95 | 21.25 | 10.00 | 73.20 |
| 22 | ಕೊಡಗು | 12 | 25.17 | 12.75 | 6.00 | 43.92 |
| 23 | ಮಂಡ್ಯ | 34 | 71.32 | 36.12 | 17.00 | 124.44 |
| 24 | ಮೈಸೂರು | 36 | 75.51 | 38.25 | 18.00 | 131.76 |
| 25 | ರಾಯಚೂರು | 27 | 56.29 | 28.51 | 13.42 | 98.22 |
| 26 | ರಾಮನಗರ | 28 | 58.73 | 29.75 | 14.00 | 102.48 |
| 27 | ಶಿವಮೊಗ್ಗ | 38 | 79.71 | 40.37 | 19.00 | 139.08 |
| 28 | ತುಮಕೂರು | 49 | 110.25 | 55.85 | 26.28 | 192.38 |
| 29 | ಉಡುಪಿ | 23 | 48.24 | 24.44 | 11.50 | 84.18 |
| 30 | ಉ.ಕನ್ನಡ | 34 | 71.32 | 36.12 | 17.00 | 124.44 |
| ಒಟ್ಟು | | 908 | 1903.65 | 964.28 | 453.75 | 3321.68 |

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮ ಪಂಚಾಯತಿ ಶಾಖೆಗೆ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು ನೇಮಿಸುವ ಬಗ್ಗೆ.

**ಓದಲಾಗಿದೆ:** ರಾಜ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ ರವರ ಆದೇಶ ಸಂಖ್ಯೆ: ಕಮಾಆ 13084 ಎಪಿಎಲ್ 2016, ದಿನಾಂಕ 25.04.2018

***

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮ ಪಂಚಾಯತಿ ಶಾಖೆಯಲ್ಲಿ ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ, 2005ರನ್ವಯ ಕಛೇರಿಯಲ್ಲಿ ಸ್ವೀಕೃತವಾದ ಅರ್ಜಿಗಳ ಬಗ್ಗೆ ಕ್ರಮವಹಿಸಲು ಪೀಠಾಧಿಕಾರಿಗಳು(ಗ್ರಾಮ ಪಂಚಾಯತಿ) ರವರು ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು ಹಾಗೂ ಮೇಲ್ಮನವಿ ಸಂಬಂಧ ಅರ್ಜಿಗಳ ವಿಚಾರಣೆಗೆ ಆಯೋಗಕ್ಕೆ ಹಾಜರಾಗುತ್ತಿದ್ದರು.

ಮೇಲೆ ಓದಲಾದ ಆದೇಶದಲ್ಲಿ ಇಲಾಖೆಯ ಗ್ರಾಮ ಪಂಚಾಯತಿ ಶಾಖೆಯು ಮಾಹಿತಿ ಹಕ್ಕು ಅಧಿನಿಯಮ, 2005ರಡಿ ಸ್ವೀಕೃತವಾದ ಅರ್ಜಿಗಳ ಸಂಬಂಧ ಅನುಸರಿಸುತ್ತಿರುವ ಪದ್ಧತಿಯು ಮಾಹಿತಿ ಹಕ್ಕು ಅಧಿನಿಯಮದ ಆಶಯಕ್ಕೆ ಅನುಗುಣವಾಗಿಲ್ಲವೆಂದು ಆಯೋಗಕ್ಕೆ ಕಂಡುಬಂದಿರುವುದರಿಂದ ಆಯೋಗವು ಸಾರ್ವಜನಿಕ ಪ್ರಾಧಿಕಾರದ ಪ್ರತಿಯೊಂದು ಶಾಖೆಗೆ ಸಂಬಂಧಪಟ್ಟ ಅಧೀನ ಕಾರ್ಯದರ್ಶಿಯವರನ್ನೇ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿ ನೇಮಕ ಮಾಡಿ ಮತ್ತು ಉಪಕಾರ್ಯದರ್ಶಿಯವರನ್ನು ಪ್ರಥಮ ಮೇಲ್ಮನವಿ ಪ್ರಾಧಿಕಾರಿಯನ್ನಾಗಿ ನೇಮಿಸಬೇಕೆಂದು ಹಾಗೂ ಈ ಪದ್ಧತಿಯನ್ನು ಕೂಡಲೇ ಅನುಸರಿಸುವಂತೆ ಮಾಹಿತಿ ಹಕ್ಕು ಅಧಿನಿಯಮದ ಕಲಂ 25(5) ರನ್ವಯ ನಿರ್ದೇಶನ ನೀಡಿ, ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ರಾಜ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ ರವರು ಆದೇಶಿಸಿರುತ್ತಾರೆ.

ಸರ್ಕಾರವು ಪರಿಶೀಲಿಸಿ, ಮಾಹಿತಿ ಹಕ್ಕು ಅಧಿನಿಯಮ, 2005ರ ಕಲಂ 5ರನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮ ಪಂಚಾಯತಿ ಶಾಖೆಯಲ್ಲಿ ಈ ಅಧಿನಿಯಮದ ಅಡಿಯಲ್ಲಿ ಮಾಹಿತಿಗಾಗಿ ಕೋರಿಕೆ ಸಲ್ಲಿಸುವ ವ್ಯಕ್ತಿಗಳಿಗೆ ಮಾಹಿತಿ ಒದಗಿಸಲು, ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿ ಹಾಗೂ ಈ ಹಿಂದೆ ಇದ್ದಂತೆ ನಿರ್ದೇಶಕರು(ಪಂ. ರಾಜ್–1), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರನ್ನು ಪ್ರಥಮ ಮೇಲ್ಮನವಿ ಅಧಿಕಾರಿಯನ್ನಾಗಿ ಪದನಾಮೀಕರಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 376 ಗ್ರಾಪಂಅ 2016, ಬೆಂಗಳೂರು, ದಿನಾಂಕ 20.06.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮಾಹಿತಿ ಹಕ್ಕು ಅಧಿನಿಯಮ, 2005ರ ಕಲಂ 5ರನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮ ಪಂಚಾಯತಿ ಶಾಖೆಯಲ್ಲಿ ಈ ಅಧಿನಿಯಮದ ಅಡಿಯಲ್ಲಿ ಮಾಹಿತಿಗಾಗಿ ಕೋರಿಕೆ ಸಲ್ಲಿಸುವ ವ್ಯಕ್ತಿಗಳಿಗೆ ಮಾಹಿತಿ ಒದಗಿಸಲು ಹಾಗೂ ಮೇಲ್ಮನವಿಗಳನ್ನು ಇತ್ಯರ್ಥಗೊಳಿಸಲು ಕೆಳಗಿನಂತೆ ಅಧಿಕಾರಿಗಳನ್ನು ಪದನಾಮೀಕರಿಸಿ ಆದೇಶಿಸಿದೆ.

| ಕ್ರ. ಸಂ. | ಪ್ರಾಧಿಕಾರಿ | ಪದನಾಮ | ವಿಳಾಸ ಮತ್ತು ದೂರವಾಣಿ |
|---|---|---|---|
| 1 | ಸಾರ್ವಜನಿಕ ಮಾಹಿತಿ ಅಧಿಕಾರಿ | ಸರ್ಕಾರದ ಅಧೀನ ಕಾರ್ಯದರ್ಶಿ. ಗ್ರಾಮ ಪಂಚಾಯತಿ ಶಾಖೆ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ | ನಂ.330, 3ನೇ ಮಹಡಿ, 3ನೇ ಗೇಟ್, ಬಹುಮಹಡಿ ಕಟ್ಟಡ, ಬೆಂಗಳೂರು – 560001 080–22032295 |
| 2 | ಪ್ರಥಮ ಮೇಲ್ಮನವಿ ಪ್ರಾಧಿಕಾರಿ | ನಿರ್ದೇಶಕರು(ಪಂ.ರಾಜ್–1), ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ | ನಂ.330, 3ನೇ ಮಹಡಿ, 3ನೇ ಗೇಟ್, ಬಹುಮಹಡಿ ಕಟ್ಟಡ, ಬೆಂಗಳೂರು – 560001 080–22353925 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಹಿ/–

**(ಮುಬಾರಕ್ ಅಹ್ಮದ್)**

ಉಪನಿರ್ದೇಶಕರು ಹಾಗೂ ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.









ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿ ವಿವಿಧ ಕಾಮಗಾರಿಗಳ ಅನುಷ್ಠಾನ.

# KARNATAKA VIKAS : JULY 2018

A Monthly Magazine for Rural Development and Panchayath Raj Department, Government of Karnataka
Regd. KA / BGGPO / 2531 / 2018-20, License of Post "without Prepayment" WPP - 32
Date of Publication : 8th of Every Month.
RNI No: KAR KAN / 28103 / 1974 Total No. Pages 52, Posted at Bengaluru PSO, Mysore Road, Bengaluru
on 11th, 19th, 23rd of every month.



"The future depends on what you do today

**- Mahatma Gandhi**

Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Name of the Editor
**Gagan A.S.**

Place & Publication
**Karnataka Vikas**
No.309, 3rd Floor, Gate No.1
M.S.Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob: +91 95919 88347

Price : ಬೆಲೆ : ₹ 10.00